ಈ ದಿಸೆಯಲ್ಲಿ ವಿವಿಧ ಪಕ್ಷಗಳಿಗೆ ಈ ಕೆಳಕಂಡಂತೆ ಸಮಯಾವಕಾಶವನ್ನು ಹಂಚಿಕೆ ಮಾಡಲಾಗಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ 5 ಗಂಟೆ, ಜಾತ್ಯಾತೀತ ಜನತಾ ದಳಕ್ಕೆ 2 ಗಂಟೆ, ಭಾರತೀಯ ಜನತಾ ಪಾರ್ಟಿಗೆ 4.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರವೂ ಸೇರಿದಂತೆ, ಪಕ್ಷೇತರರಿಗೆ ಅರ್ಧ ಗಂಟೆ, ಒಟ್ಟು 12 ಗಂಟೆ ಸಮಯವನ್ನು ನಿಗದಿಪಡಿಸಲಾಗಿದೆ. ಈ ಕುರಿತು ಎಲ್ಲಾ ಮಾನ್ಯ ಸದಸ್ಯರುಗಳ ಸಹಕಾರವನ್ನು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು :– ಈಗ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಲಿ, ಕುಳಿತುಕೊಳ್ಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) :– ಮಾನ್ಯ ಅಧ್ಯಕ್ಷರೆ, ಬರಗಾಲವಿದೆ. ಮಾತನಾಡಿ ಎಂದು ನಮ್ಮನ್ನು ಕಳುಹಿಸಿದ್ದಾರೆ. ಇಲ್ಲಿ ನೀವು ಮಾತನಾಡುವುದಕ್ಕೂ ಅವಕಾಶ ಕೊಡದೇ ಹೋದರೆ ನಾವು ಎಲ್ಲಿ ಹೋಗಬೇಕು ?

ಶ್ರೀ ಎನ್. ಸಂಪಂಗಿ :– ಮಾನ್ಯ ಅಧ್ಯಕ್ಷರೆ, ಒಂದು ಲಕ್ಷ ಕೋಟಿ ರೂಪಾಯಿಯ ಬಜೆಟ್‌ನ್ನು ನಾವು ಕೇವಲ 3–4 ಗಂಟೆಯಲ್ಲಿ ಮಾತನಾಡುವುದು ಎಂದರೆ ಏನರ್ಥ ?

ಅಧ್ಯಕ್ಷರು :– ಮತ್ತೆ ಪೂರಕವಾಗಿ ಇನ್ನೊಂದು ಸಲ ಚರ್ಚೆಗೆ ಅವಕಾಶ ಇದೆಯಲ್ಲ. ಈಗ vote an account ಮಾತ್ರ ಚರ್ಚೆ ಇದೆ. ಆಮೇಲೆ ಚರ್ಚೆ ಮಾಡಬಹುದು.

6. ವಿತ್ತೀಯ ಕಾರ್ಯಕಲಾಪ :

2012–13ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಸಿದ್ಧರಾಮಯ್ಯ :– ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ BAC ಯಲ್ಲಿ ಕೂಡ tentative ಆಗಿ ಇರಲಿ ಎಂದು ಚರ್ಚೆ ಮಾಡಿದ್ದೇವೆ. ಏಕೆಂದರೆ ಬರಗಾಲದ ವಿಚಾರದಲ್ಲಿ ಕೂಡ ಬಹಳಷ್ಟು ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ಅದರ ಬಗ್ಗೆ ಬಹಳ ಜನ ಮಾತನಾಡಬೇಕೆಂದು ಇದ್ದರು. ಹಾಗಾಗಿ ಬಹಳ ಜನ ಮಾತನಾಡುವ ಅವಕಾಶದಿಂದ ವಂಚಿತರಾಗಿಬಿಟ್ಟಿದ್ದಾರೆ. ಈ ಬಜೆಟ್ ಮೇಲೆ ಬೇರೆಯವರು ಯಾರು ಮಾತನಾಡುತ್ತಾರೆ. ಮಾತನಾಡಲಿ.

ನಾಳೆ ಕೂಡ ಪೂರ್ತಿ ಬಜೆಟ್ ಮೇಲೆ ಮಾತನಾಡಲಿ. ಬೇರೆ ಯಾವುದೇ ವಿಚಾರವನ್ನು ಇಟ್ಟುಕೊಳ್ಳಬೇಡಿ. ಅದಕ್ಕೆ ನಾಡಿದ್ದು ಬೆಳಿಗ್ಗೆ ಉತ್ತರ ಕೊಡಲಿ. ಆಗ ಅವರಿಗೂ ಸರಿಹೋಗುತ್ತದೆ, ಎಲ್ಲರಿಗೂ ಸರಿ ಹೋಗುತ್ತದೆ. ನಾಳೆ ಪೂರ್ತಿ 8.00 ಗಂಟೆಯವರೆಗೂ ಎಲ್ಲರೂ ಮಾತನಾಡಲಿ.

ಮಾನ್ಯ ಅಧ್ಯಕ್ಷರೆ, ಇವತ್ತು debt burden ಜಾಸ್ತಿಯಾಗುತ್ತಿದೆ. ಸಾಲ ಸಿಗುತ್ತದೆ. ಎಂದು ಯಾವಗಲೂ ಸಾಲ ತೆಗೆದುಕೊಳ್ಳಬಾರದು. ಯಾವಾಗಲೂ loan ಹೇಗಿರಬೇಕೆಂದರೆ not on the basis of availability. It is on the base of affordability ಇದು principle. Economics ನಲ್ಲಿ principle ಏನೆಂದರೆ not on the basis of availability. ಸಾಲ ಸಿಗುತ್ತದೆ. ಎಂದು ಬೇಕಾದಷ್ಟು ಸಾಲ ತೆಗೆದುಕೊಂಡು ಬಿಟ್ಟರೆ, ನಮಗೆ ವಾಪಸ್ಸು ಕೊಡುವ ಶಕ್ತಿ ಇರಬೇಕಲ್ಲ ? ಮತ್ತು necessity ಕೂಡ ಇರಬೇಕು. ಸಾಲ ತೆಗೆದುಕೊಂಡ ಮೇಲೆ asset create ಮಾಡಬೇಕು. ಆಸ್ತಿ ನಿರ್ಮಾಣ ಮಾಡಬೇಕು. ನೀವು ಆಸ್ತಿ ನಿರ್ಮಾಣ ಮಾಡದೇ ಸಾಲ ತೆಗೆದುಕೊಂಡು ಬಿಟ್ಟರೆ ರಾಜ್ಯ ಅಭಿವೃದ್ಧಿ ಆಗುವುದಿಲ್ಲ. ಜನರ ಬದುಕು ಕೂಡ ಹಸನಾಗುವುದಿಲ್ಲ. ತಾವು ಇದನ್ನು ಗಮನದಲ್ಲಿಟ್ಟು ಕೊಳ್ಳಬೇಕು. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ನಾನು ಆಗಲೇ ಪ್ರಸ್ತಾಪ ಮಾಡಿದ ಹಾಗೆ ಪ್ರತಿ ವರ್ಷ ಸಾಲ ಹೆಚ್ಚಾಗುತ್ತಾ ಹೋಗುತ್ತಿದೆ. Debt burden ಜಾಸ್ತಿಯಾಗುತ್ತಿದೆ. ನಾನು ಪ್ರತಿ ವರ್ಷ ಹೇಗೆ ಹೋಗುತ್ತಿದೆ ಎಂದು ಓದಿ ಹೇಳಿದ್ದೇನೆ. ಹಾಗಾಗಿ ಸರ್ಕಾರ ಒಂದು ಲಕ್ಷ ಕೋಟಿ ರೂಪಾಯಿ ಬಜೆಟ್ ಮಂಡಿಸಬೇಕು ಎನ್ನುವ ಹುಚ್ಚಿನಲ್ಲಿ ಯದ್ವಾ ತದ್ವಾ ಸಾಲ ಮಾಡಿಕೊಂಡು ರಾಜ್ಯವನ್ನು debt trap ಕಡೆಗೆ ತೆಗೆದುಕೊಂಡು ಹೋಗುವಂತಹ ಪರಿಸ್ಥಿತಿ ಆಗಬಾರದು. ಅದಕ್ಕೆ defence ಏನೆಂದರೆ 13th Finance Commission ನವರು ಮತ್ತು Fiscal Responsibility Act ಇವೆಲ್ಲ ಏನು ಹೇಳುತ್ತದೆ ಎಂದರೆ ಸಾಲ GDP ನ 25% ವರೆಗೂ ಇಟ್ಟುಕೊಳ್ಳಬಹುದು ಎಂದು ಹೇಳುತ್ತಾರೆ. Fiscal deficit 3% ವರೆಗೂ ಹೋಗಬಹುದು. ಈಗಾಗಲೇ 2.94% ವರೆಗೂ ಆಗಿಬಿಟ್ಟಿದೆ. 2005–06ರಲ್ಲಿ Fiscal deficit 1.88% ಇತ್ತು. Today it has increased gradually to 2.94%. 2008-09, 2009-10 ರಲ್ಲಿ it has crossed 3% also. ಅದಕ್ಕೆ ಕೇಂದ್ರ ಸರ್ಕಾರದ ಅನುಮತಿಯನ್ನು ತೆಗೆದುಕೊಂಡು Fiscal Responsibility Act ಗೆ amendment ಮಾಡಿದರು. Okay. The

question is, ನಾನು ಆಗಲೇ ಹೇಳಿದ ಹಾಗೆ ಇದು ಹೀಗೇ ಹೆಚ್ಚಾಗುತ್ತಾ ಹೋದರೆ ಈ ಸಾರಿ 9,102 ಕೋಟಿ ರೂ.ಗಳು debt service March end ಗೆ, ಮುಂದಿನ ವರ್ಷಕ್ಕೆ 11,000 ಕೋಟಿ ಚಿಲ್ಲರೆ debt service ಆಮೇಲೆ 13,000 ಕೋಟಿ, 15,000 ಕೋಟಿ, 17,000 ಕೋಟಿ, ಹೀಗೆ ಪ್ರತಿ ವರ್ಷ ಹೆಚ್ಚುತ್ತಾ ಹೋಗುತ್ತದೆ. Where will we stand ? ಯಾವಾಗಲೂ tax growth ಇದೆಯಲ್ಲಾ our own taxes ಅದಕ್ಕೆ ಒಂದು base ಇರುತ್ತದೆ. ಪ್ರತಿ ದಿನ ಅದನ್ನು expand ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ನಮ್ಮ ಕರ್ನಾಟಕದಲ್ಲಿರುವಂಥ tax base ಎಷ್ಟು stretch ಮಾಡುವುದಕ್ಕೆ ಆಗುತ್ತದೆಯೋ ಆಷ್ಟನ್ನೂ ಮಾಡಿದ್ದೇವೆ. ಪ್ರತಿ ವರ್ಷ 10%, 15% tax base ಹೆಚ್ಚಾಗುತ್ತದೆ. 20% ಜಾಸ್ತಿಯಾಗುತ್ತದೆ. ಒಂದು ಕಾಲದಲ್ಲಿ 2004–05 ರಲ್ಲಿ tax growth 29% ಇತ್ತು. It has been reduced to 5% in 2008-09, 7% in 2009-10 ಮತ್ತೆ 15% ಗೆ ಈ ರೀತಿ ಏಕೆ ಹೋಯಿತೆಂದರೆ, ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಗಳಾಗಿದ್ದಾಗ, 2010–11ರಲ್ಲಿ tax rate ಗಳು 4% ಇದ್ದದ್ದು 5% ಮಾಡಿದರು. ಹನ್ನೆರಡೂವರೆ ಇದ್ದದ್ದನ್ನು 13% ಮಾಡಿದರು. ಆಗ 1% tax ಅನ್ನು ಹೆಚ್ಚು ಮಾಡಿದರು. ಆಗ ನಮ್ಮ tax growth ಕೂಡ ಸ್ವಲ್ಪ ಹೆಚ್ಚಾಯಿತು. because of the increase in the tax rates. VAT tax rates ಅನ್ನು ಹೆಚ್ಚು ಮಾಡಿದರು. 4% ನಿಂದ 5%, 12½ ಯಿಂದ 13½. Again in the year 2011-12 ರಲ್ಲಿ 0.5% ಹೆಚ್ಚು ಮಾಡಿದರು. 13½ ಯಿಂದ 14% ಮಾಡಿದರು. Commercial VAT tax growth ನಾವು 15% ಹೆಚ್ಚಾಗಿದೆ ಎನ್ನುವಂಥದನ್ನು ನೋಡುತ್ತಿದ್ದೇವೆ. ಮತ್ತೆ ಅದು ಕ್ರಮೇಣ ಅಷ್ಟೆ ಇರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಇದು ಕೆಳಗೆ ಬರುತ್ತದೆ. ಈಗ ನಾನು ಹೇಳಿದ್ದು tax revenue. Non-tax revenue ಇದೆ. What is the growth ? Minus growth ಅದು. ನಾಲ್ಕು ಸಾವಿರ ಕೋಟಿ ಚಿಲ್ಲರೆ ಇದ್ದದ್ದು. ಈಗ 3,100 ಕೋಟಿಯಿಂದ ಮುಂದಕ್ಕೆ ಹೋಗುತ್ತಿಲ್ಲ. ಈ ವರ್ಷ ಇದು ಇನ್ನೂ ಕಡಿಮೆಯಾಗಿದೆ. ಕಬ್ಬಿಣದ ಅದಿರನ್ನು ನಿಲ್ಲಿಸಿಬಿಟ್ಟದ್ದೇವೆ. ಅದಕ್ಕೋಸ್ಕರವಾಗಿ ಕಡಿಮೆಯಾಗಿದೆಯೆಂಬ ಕಾರಣವನ್ನು ಕೊಡುತ್ತಿದ್ದಾರೆ. non-tax revenue ಹೆಚ್ಚು ಮಾಡುವುದಕ್ಕೆ ರಾಜ್ಯ ಸರ್ಕಾರ ಪ್ರಯತ್ನ ಮಾಡಿರುವುದನ್ನು ಇಡೀ ಬಜೆಟ್‌ನಲ್ಲಿ ತೋರಿಸಲಿ, ಅದು ಹಿಂದಿನ ವರ್ಷವಿರಬಹುದು. ಆಚಿನ ವರ್ಷವಿರಬಹುದು. ಇವರು ಅಧಿಕಾರಕ್ಕೆ ಬಂದ ಮೇಲೆ ಯಾವತ್ತಾದರೂ

ಒಂದು ದಿವಸ non-tax revenue ಹೆಚ್ಚು ಮಾಡುವುದಕ್ಕೆ ಏನು ಮಾಡಿದ್ದಾರೆ ? Non-tax revenue major ಆಗಿ ಎಲ್ಲಿಂದ ಬರುತ್ತದೆ ? ಅದು Forest Department ನಿಂದ ಬರುತ್ತದೆ. Mines & Geology Department ನಿಂದ ಬರುತ್ತದೆ. ಈ Users charge ನಿಂದ ಬರುತ್ತದೆ. ಈ ರೀತಿ non-tax revenue ಬರುತ್ತದೆ. ಈ non-tax revenue ಹೆಚ್ಚು ಮಾಡುವುದಕ್ಕೆ ಇವತ್ತಿನವರೆಗೂ ಒಂದು ಪ್ರಯತ್ನ ಮಾಡಿಲ್ಲ. 2005–06 ರಲ್ಲಿ 3,000 ಕೋಟಿ, 4,000 ಕೋಟಿ ರೂ.ಗಳಿತ್ತು. ಇದು ಹಾಗೆ reduce ಆಗುತ್ತಾ ಬಂದಿದೆ. ಅದು 3,100 ಕೋಟಿ, 3,200 ಕೋಟಿ, 3,300 ಕೋಟಿ ಹೀಗೆ ಮೈನಸ್ ಆಗುತ್ತಿದೆಯೇ ಹೊರತು non-tax revenue ಅನ್ನು ಹೆಚ್ಚು ಮಾಡಲಿಲ್ಲ. ಇದನ್ನು ನಾನು observe ಮಾಡುವುದಲ್ಲ. ನಿಮ್ಮ Mid Term Fiscal Plan ನಲ್ಲೂ ಕೂಡ ಗುರುತಿಸಿದ್ದಾರೆ. ಹಾಗೇ Chief Secretary ಯವರ ಅಧ್ಯಕ್ಷತೆಯಲ್ಲಿ ಒಂದು Committee ಇದೆ. ಇದನ್ನು review ಮಾಡುವುದಕ್ಕೆ Fiscal Management Review Committee ಇದೆ. ಅವರು ಕೂಡ ಇದನ್ನೇ ಹೇಳಿದ್ದಾರೆ. ಮತ್ತೆ ಮಾನ್ಯ ಭಟ್ಟಾಚಾರ್ಯರ ಅಧ್ಯಕ್ಷತೆಯಲ್ಲಿ Expenditure Commission ಮಾಡಿದ್ದರು. ಅವರೂ ಕೂಡ ಹೇಳಿದ್ದಾರೆ. ಇದ್ಯಾವುದನ್ನು Finance Department ನವರು ನೋಡಿದ್ದಾರೊ 'ಇಲ್ಲವೊ' ಗೊತ್ತಿಲ್ಲ. ಅಥವಾ ಮಾನ್ಯ ಹಣಕಾಸಿನ ಮಂತ್ರಿಯವರು ನೋಡಿದ್ದಾರೋ 'ಇಲ್ಲವೋ' ಗೊತ್ತಿಲ್ಲ. They have not applied their mind to increase the base of non-tax revenue so far. ಕರ್ನಾಟಕದ Boards, Corporation investment ಎಷ್ಟು ಇದೆಯೆಂದರೆ 38,420 ಕೋಟಿ ರೂ.ಗಳಿದೆ. ಇದಕ್ಕೆ ಎಷ್ಟು returns ಇರಬಹುದು? 0.1% returns ಇದೆ. ಇದನ್ನು ಏನಾದರೂ review ಮಾಡುವುದಕ್ಕೆ ಪ್ರಯತ್ನ ಮಾಡಿದ್ದಿರೋ, ಅಥವಾ review ಮಾಡುವುದಕ್ಕೆ Boards, Corporations ಗಳೇನಾದರೂ ಮಾಡಿದ್ದಾರಾ? ಅಥವಾ ಹೊಸ technology ಕೊಟ್ಟು ಏನಾದರೂ improve ಮಾಡುವುದಕ್ಕೆ ಮಾಡಿದ್ದಾರಾ? Nothing has been done. No attempt has been made by this Government. 38,420 ಕೋಟಿ ಕರ್ನಾಟಕ ಸರ್ಕಾರದ investment ಬೇರೆ ಬೇರೆ Boards, Corporations, Company ಗಳು ಈ ಎಲ್ಲಾ ಕಡೆಗಳಲ್ಲೂ ಇದೆ. ಆದರೆ returns 1% ಸಾಕೆ?

ನೀವು ಸಾಲವನ್ನು ಎಷ್ಟು ಪರ್ಸೆಂಟ್‌ಗೆ ತೆಗೆದುಕೊಳ್ಳುತ್ತೀರಿ? ನೀವು open market ನಲ್ಲಿ ಬಡ್ಡಿ ಎಷ್ಟು ಕೊಡುತ್ತೀರಿ? ನೀವು ಇಲ್ಲಿ investment ಮಾಡಿದರೆ ಎಷ್ಟು returns ಬರುತ್ತದೆ ? See open market borrowings are increasing like anything Opening market borrowings ಹೆಚ್ಚಾಗುತ್ತಿದೆ, ಬಡ್ಡಿ ಹೆಚ್ಚಾಗುತ್ತಿದೆ. ಅವರ investment, returns zero ಇದೆ. Almost zero ಅಲ್ಲವೇ 0.1% ಎಂದರೆ ? retunrs 0.11% ಇದೆ. ಇದರಲ್ಲಿ ಒಂದು ಬಿಟ್ಟು ಒಂದನ್ನೆ ಇಟ್ಟುಕೊಂಡಿದ್ದೇನೆ. ಇವರು ಈ ಕಡೆ ಎಲ್ಲಾದರೂ ಗಮನವನ್ನು ಕೊಟ್ಟಿದ್ದಾರಾ? ಇವರಿಗೆ ಪುರುಸೊತ್ತು ಎಲ್ಲಿದೆ? ಇವರ ಜಗಳವೇ ಮುಗಿಯುವುದಿಲ್ಲ. Adminstration collapse ಆಗಿದೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಜಗಳಕ್ಕೆ ಯಾರು ಹೋಗುತ್ತಾರೆ ?

ಶ್ರೀ ಸಿದ್ದರಾಮಯ್ಯ :– ಅದನ್ನು ಇಡೀ ದೇಶ ಹೇಳುತ್ತದೆ. ನೀವು ಹೋಗಿದ್ದೀರೋ ಇಲ್ಲವೋ ಗೊತ್ತಿಲ್ಲ, ಪ್ರತಿ ದಿವಸ ಪತ್ರಿಕೆಗಳಲ್ಲಿ ಬರುವುದು ಸುಳ್ಳಾ ? ತಾವು ಜಗಳವಾಡಿಲ್ಲವೆಂದು ಯಾವತ್ತಾದರೂ deny ಮಾಡಿದ್ದೀರಾ ? ಹಾಗಾದರೆ ರೆಸಾರ್ಟ್‌ಗೆ ಹೋಗಿರುವುದು ಸುಳ್ಳಾ ? ದೆಹಲಿಗೆ ಹೋಗಿದ್ದು ಸುಳ್ಳಾ ? ಮೊನ್ನೆ ಮಾನ್ಯ ಬಚ್ಚೇಗೌಡರ ನಿಯೋಗ ಹೋಗಿದ್ದು ಸುಳ್ಳಾ ? ಮೊನ್ನೆ Education Minister, ಮಾನ್ಯ ಅರವಿಂದ ಲಿಂಬಾವಳಿ, ಮಾನ್ಯ ಬಾಲಚಂದ್ರ ಜಾರಕಿಹೊಳಿ, ಇವರೆಲ್ಲಾ team ಹೋಗಿರಲಿಲ್ಲವೇ ?

ಶ್ರೀ ಅರವಿಂದ ಲಿಂಬಾವಳಿ :– ನೀವು ಹೋಗಿದ್ದಿರಂತೆ.

ಶ್ರೀ ಸಿದ್ಧರಾಮಯ್ಯ :– ಕುಳಿತುಕೊಳ್ಳಿ ನೀವು ಉತ್ತರ ಹೇಳುವುದು ಬೇಡ. ನೀವು ಸುಮ್ಮನೆ ಒಪ್ಪಿಕೊಳ್ಳಿ. fact deny ಮಾಡುವುದಕ್ಕೆ ಆಗುತ್ತದೆಯೇ ? ನಾನು ಸರ್ಕಾರ ನಡಸುತ್ತೇನಾ, ನಾನು ಹೋಗಿರುವುದು ನಿಜ. ಅದು ಸರಿ, ಬಜೆಟ್ ಅನ್ನು ನಾನು ಮಂಡಿಸಿದ್ದೇನಾ ? ಆಯಿತು. ನೀವು ಹಾಗೆ ಜಗಳವಾಡುತ್ತೀರಿ, ನೀವು ದೆಹಲಿಗೆ ಹೋಗಿ ಜಗಳವಾಡಿ, ರೆಸಾರ್ಟ್‌ಗೆ ಹೋಗಿ ಜಗಳವಾಡಿ, ನಾವು ಜನರಿಗೆ ಹಾಗೆ ಹೇಳುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ :– ನೀವು ಟಿ.ವಿ.ಯಲ್ಲಿ ಮಾತನಾಡಿರುವುದು ಸುಳ್ಳಾ. ಅವರೇ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ :– ಹೌದು

ಅಧ್ಯಕ್ಷರು :– ಅದರ ಬಗ್ಗೆ ಇಲ್ಲಿ ಚರ್ಚೆ ಬೇಡ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ನಾನು ಎಲ್ಲಿ ಚರ್ಚೆ ಮಾಡಿದೆ ? ಏಕೆ ಈ ರೀತಿ ಆಗಿದೆಯೆಂದು ಕಾರಣ ಹೇಳಬೇಕಲ್ಲಾ.

ಶ್ರೀ ಅರವಿಂದ ಲಿಂಬಾವಳಿ :– ನಾನು ಸಣ್ಣವನು.

ಶ್ರೀ ಸಿದ್ದರಾಮಯ್ಯ :– ನೀವು ಎಲ್ಲಿ ಸಣ್ಣವರಾಗಿದ್ದೀರಿ, ನನಗಿಂತ ದಪ್ಪಗಿದ್ದೀರಿ ? ನೀವು ಏಕೆ ಸಣ್ಣವರಾದಿರಿ ?

ಶ್ರೀ ಅರವಿಂದ ಲಿಂಬಾವಳಿ :– ಮಾನ್ಯ ಅಧ್ಯಕ್ಷರೆ, ಅವರ ಪಕ್ಷಕ್ಕೆ ಹೇಗೆ ರಾಷ್ಟ್ರೀಯ ನಾಯಕರು ಹೇಗೆ ಇದ್ದಾರೊ, ಹಾಗೆ ನಮ್ಮ ಪಕ್ಷಕ್ಕೂ ರಾಷ್ಟ್ರೀಯ ನಾಯಕರು ಇದ್ದಾರೆ. ನಮ್ಮದು ರಾಷ್ಟ್ರೀಯ ಪಕ್ಷ, ನಿಮ್ಮದ್ದು ರಾಷ್ಟ್ರೀಯ ಪಕ್ಷ ಅಂಥ ಸಂದರ್ಭದಲ್ಲಿ ನಾವು ಹೋಗಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್ :– ನೀವು ಹೋಗಿದ್ದು ತಪ್ಪಿಲ್ಲ. ನೀವು ಹೋಗಿದ್ದು ತಪ್ಪು ಎಂದು ನಾವು ಹೇಳಿದೆವಾ ? ನೀವು ಯಾವಾಗಲೂ ಹೋಗಬೇಕು.

ಶ್ರೀ ಅರವಿಂದ ಲಿಂಬಾವಳಿ :– ಕಾಮಾಲೆ ಕಣ್ಣಿನವರಿಗೆ ಎಲ್ಲವೂ ಹಳದಿ ಕಾಣುತ್ತದಂತೆ. ದೆಹಲಿಗೆ ಹತ್ತು ಸಲ ನೀವೂ ಹೋಗುತ್ತೀರಿ. ಹತ್ತು ಸಲ ನಾವೂ ಹೋಗುತ್ತೇವೆ. ಅದನ್ನೇ ದೊಡ್ಡದು ಮಾಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ :– All right, ಲಿಂಬಾವಳಿಯವರೇ,

ಡಾ॥ ಹೆಚ್.ಸಿ. ಮಹದೇವಪ್ಪ :– ಅವರು ಹೋಗಿರುವುದಕ್ಕೆ ಯಾರದೂ ಅಭ್ಯಂತರವಿಲ್ಲ. But the groups, internal bickerings, difference in the council of ministers will have a deleterious, effect on the administration. That is the result.

ಶ್ರೀ ಡಿ.ಕೆ. ಶಿವಕುಮಾರ್ :– ನಿಮಗೂ ಕಷ್ಟ ಆಫೀಸರ್‌ಗಳಿಗೂ ಕಷ್ಟ. ನಮಗೆ ಖುಷಿ.

ಶ್ರೀ ಅರವಿಂದ ಲಿಂಬಾವಳಿ :– ದೆವ್ವದ ಬಾಯಲ್ಲಿ ಭಗವದ್ಗೀತೆ ಕೇಳಿದ ಹಾಗಾಯಿತು.

ಶ್ರೀ ಡಿ.ಕೆ. ಶಿವಕುಮಾರ್ :– ಆಯಿತು, ನೀವು ಚೆನ್ನಾಗಿರಿ. ಬೇಗ ನಿಮ್ಮನ್ನು ಮಂತ್ರಿ ಮಾಡಬಹುದು.

ಅಧ್ಯಕ್ಷರು :– ಬಜೆಟ್ ಮೇಲೆ ಚರ್ಚೆ ಮಾಡಿ.

ಶ್ರೀ ಸಿದ್ದರಾಮಯ್ಯ :– ಅಲ್ಲಿಗೆ ಹೋದದ್ದು ತಮ್ಮ ಎಂದು ನಾನು ಹೇಳಲಿಲ್ಲ. ಅಲ್ಲಿಗೆ ಹೋಗಿದ್ದರು ಎಂದು ಹೇಳಿದೆ. It is admitted fact. ಅದಕ್ಕೇಕೆ ಇವರು, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ? ನೀವು ಹೋದದ್ದು ತಪ್ಪು ಎಂದು ನಾನು ಹೇಳಿದನೇ?

ನೀವು ಅಲ್ಲಿಗೆ ಹೋದಿರಿ, ಸದಾನಂದಗೌಡರನ್ನು ಬದಲಾಯಿಸಬಾರದು ಎಂದು ಹೇಳಿಬಿಟ್ಟು ಬಂದಿರಿ. ಈಶ್ವರಪ್ಪನವರನ್ನು ಬದಲಾಯಿಸಬಾರದು ಎಂದು ಹೇಳಿದ್ದೀರಿ. ಇವೆಲ್ಲವೂ ಪತ್ರಿಕೆಗಳಲ್ಲಿ ಬಂದಿತ್ತು. ಲಿಂಬಾವಳಿಯವರೇ, ನೀವೇ ಇದರ leadership ತೆಗೆದುಕೊಂಡಿದ್ದುದು. ಅವರು deny ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇದು ಸತ್ಯವಲ್ಲವೇ ? It is a fact. ಯಾವ ಕಾರಣಕ್ಕೂ ಯಡಿಯೂರಪ್ಪನವರಿಗೆ ಮುಖ್ಯಮಂತ್ರಿ ಪಟ್ಟ ಕೊಡಬಾರದು ಎಂದು ಹೇಳಿಬಿಟ್ಟು ಬಂದಿದ್ದಾರೆ. ಈ ಜಗಳದಲ್ಲಿ ಈ ಕಚ್ಚಾಟದಲ್ಲಿ ಹೇಗೆ ಒಳ್ಳೆಯ ಬಜೆಟ್ ಮಂಡಿಸಲು ಸಾಧ್ಯವಾಗುತ್ತದೆ ? Non-tax revenue ಬಗ್ಗೆ ಹೇಗೆ ತಲೆಕೆಡಿಸಿಕೊಳ್ಳಲು ಆಗುತ್ತದೆ ? ಇವರು ಏನು ಮಾಡುವುದಕ್ಕೆ ಆಗುತ್ತದೆ ? ಹೀಗಾದರೆ ಎಲ್ಲಿ ಅಭಿವೃದ್ಧಿ ಆಗುತ್ತದೆ ನೀವೇ ಹೇಳಿ ? Mid Term Fiscal Plan ನಲ್ಲಿ ಟಾರ್ಗೆಟ್ ಕೊಟ್ಟಿರುವ ಪ್ರಕಾರ Non-tax revenue ವನ್ನು ಹೆಚ್ಚು ಮಾಡಬೇಕಾಗಿತ್ತು. ಅದು ಐದು ಸಾವಿರ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಹೋಗಬೇಕಾಗಿತ್ತು. ಅದು ಐದು ಸಾವಿರ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಹೋಗಬೇಕಾಗಿತ್ತು. ಆದರೆ ಮೂರು ಸಾವಿರ ಕೋಟಿಗಿಂತ ಮುಂದಕ್ಕೆ ಹೋಗುವುದೇ ಇಲ್ಲ. ಪ್ರತಿ ಸಾರಿ Capital Side ನಲ್ಲಿ Miscellaneous ಎಂದು ಎರಡು ಸಾವಿರ ಕೋಟಿ ರೂಪಾಯಿಗಳನ್ನು ಹಾಕಿಕೊಳ್ಳುತ್ತಾರೆ. ಆ ದುಡ್ಡು ಎಲ್ಲಿಂದ ಬರುತ್ತದೆ ಎಂದರೆ ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ಗುರುತಿಸಿರುವ ಜಮೀನನ್ನು ಮಾರಿ ಆ ದುಡ್ಡನ್ನು ತೆಗೆದುಕೊಂಡು ಬರುತ್ತೇವೆ ಎಂದು ಹೇಳುತ್ತಾರೆ. ಬಜೆಟ್‌ನಲ್ಲಿ ಪ್ರತಿವರ್ಷ ಅದನ್ನು ಎರಡು ಸಾವಿರ ಕೋಟಿ ರೂಪಾಯಿ ಎಂದು ಹಾಕಿಕೊಳ್ಳುತ್ತಾರೆ. ಅದರಲ್ಲಿ 5 ರೂಪಾಯಿಯೂ ಬರುವುದಿಲ್ಲ. ಕೊನೆಗೆ, revised estimate ನಲ್ಲಿ ಅದನ್ನು 100 ಕೋಟಿ ರೂಪಾಯಿ ಎಂದು ಹಾಕಿಕೊಂಡಿದ್ದಾರೆ. ಈ ರೀತಿ ಅವಾಸ್ತವಿಕವಾದಂಥ, ಕಾಲ್ಪನಿಕವಾದಂಥ, reality ಗೆ ದೂರವಾದಂಥ ಬಜೆಟ್‌ಗಳಿಗೆ ಏಕೆ ಮಂಡನೆ ಮಾಡುತ್ತೀರಿ ? ಈ ವರ್ಷ ಅದನ್ನು ಹಾಕಿಕೊಂಡಿಲ್ಲ. ನೀವು ಬಂದು ಬದಲಾವಣೆ ಮಾಡಿದ್ದೀರಿ. ಆ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಬಿಟ್ಟಿದ್ದೀರಿ. ಎರಡು ಸಾವಿರ ಕೋಟಿ ರೂಪಾಯಿಗಳು ಎಂದು ಮೂರು ವರ್ಷ ಬಜೆಟ್‌ನಲ್ಲಿ ಬಂತು. Miscellaneous Capital Receipts ಎಂದು ತೋರಿಸುವ ಅದರಲ್ಲಿ ಒಂದು ರೂಪಾಯಿಯೂ ಬಂದಿಲ್ಲ. ಅಷ್ಟು ಗಾತ್ರದ ಬಜೆಟ್‌ನಲ್ಲಿ ಅಂದಾಜಿನಲ್ಲಿ ಎರಡು ಸಾವಿರ ಕೋಟಿ ರೂಪಾಯಿ ಎಂದು ತೋರಿಸುವುದು. ಅದರಲ್ಲಿ ಒಂದು ರೂಪಾಯಿಯ ಖರ್ಚು ಇಲ್ಲ, ಅಭಿವೃದ್ಧಿಯ

ಇಲ್ಲ. ಆದಕ್ಕಾಗಿ, ನಾನು ಸಲಹೆ ಮಾಡುವುದೇನೆಂದರೆ, ಮುಖ್ಯಮಂತ್ರಿಗಳೇ Investment ಮಾಡಿರುವುದನ್ನೆಲ್ಲಾ review ಮಾಡಬೇಕು. Users charge ಅನ್ನು ಎಲ್ಲೆಲ್ಲಿ revive ಮಾಡುವುದಕ್ಕೆ. ಆಗುತ್ತದೆ, ಅಲ್ಲಿ ಮಾಡಬೇಕು. ನಮಗೆ ಬರುವಂಥ dividends ಮುಂತಾದವುಗಳನ್ನು ನೋಡಬೇಕು. Interest ಬರಬೇಕಾಗಿರುವುದನ್ನು ನೋಡಬೇಕು. ಏಕೆ ಇವುಗಳು ಬರುತ್ತಿಲ್ಲವೆಂದು ನೋಡಬೇಕು. ಇವುಗಳೆನ್ನೆಲ್ಲ ಮಾಡದೇ ಹೋದರೆ ನೀವು ಸರ್ಕಾರದ ಸಂಪನ್ಮೂಲಗಳನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯವಿಲ್ಲ. Our own resources ಹೆಚ್ಚಾಗದೇ ಹೋದರೆ ಸಹಜವಾಗಿಯೇ ಸಾಲ ಮಾಡಲು ಹೋಗಬೇಕಾಗುತ್ತದೆ. ಸಾಲ ಸಿಗುತ್ತದೆ ಎಂದು ಸಾಲ ಮಾಡುತ್ತೇವೆ, ನಂತರ debt burden ಜಾಸ್ತಿಯಾಗುತ್ತದೆ. debt service ಜಾಸ್ತಿಯಾಗುತ್ತದೆ. ಆಗ ಅಭಿವೃದ್ಧಿ ಕೆಲಸಗಳಿಗೆ ದುಡ್ಡು ಸಿಗುವುದಿಲ್ಲ. 2004–05 ಕ್ಕಿಂತ ಹಿಂದೆ ಸಾಲ ತೆಗೆದುಕೊಂಡು ಬಂದು Revenue Expenditure meet ಮಾಡಬೇಕಾದಂಥ ಪರಿಸ್ಥಿತಿ ಇತ್ತು. Fortunately, ಆ ಪರಿಸ್ಥಿತಿ ಇವತ್ತು ಬದಲಾವಣೆಯಾಗಿದೆ. ಕರ್ನಾಟಕ ಹಣಕಾಸಿನ ಪರಿಸ್ಥಿತಿ ಮತ್ತೆ ಆ ಪರಿಸ್ಥಿತಿಗೆ ಹೋಗುವುದಕ್ಕೆ ಬಿಡಬಾರದು. 2004–05 ರಿಂದೀಚೆಗೆ ಕರ್ನಾಟಕದ ಹಣಕಾಸಿನ ಪರಿಸ್ಥಿತಿ ಸರಿಯಾದ ದಾರಿಯಲ್ಲಿದೆ. 2008–09 ಮತ್ತು 2009–10 ಈ ಎರಡು ವರ್ಷಗಳಲ್ಲಿ ಕೆಟ್ಟು ಹೋಗಿತ್ತು. ಮತ್ತೆ ಸರಿ ದಾರಿಗೆ ಬಂತು. ಮತ್ತೆ ಅದನ್ನು ಹಾಳು ಮಾಡುವುದಕ್ಕೆ ಹೋಗಬಾರದು. ಈಗ ನೀವು ಮಾಡುತ್ತಾ ಇರುವುದನ್ನು ನೋಡಿದರೆ ಮತ್ತೆ ಆ ದಾರಿಯ ಕಡೆಗೆ ಹೋಗುವುದಕ್ಕೆ ಪ್ರಾರಂಭವಾಗಿದೆ ಎಂದು ಆನಿಸುತ್ತದೆ. ಆದ್ದರಿಂದ ನಾನು ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದೇನೆ ಮತ್ತು ಎಚ್ಚರಿಕೆಯಾಗಿಯೂ ಕೂಡ ಹೇಳುತ್ತೇನೆ, in the interest of the state economy ದಯವಿಟ್ಟು ಈ ರೀತಿಯದನ್ನು ಮಾಡುವುದಕ್ಕೆ ಹೋಗಬಾರದು ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇವೆ. ಕಳೆದ ಸಾರಿ ಮಾನ್ಯ ಯಡಿಯೂರಪ್ಪನವರು ಬಹಳ ಪ್ರಚಾರ ಮಾಡಿ ಒಂದು ಮಹತ್ವಾಕಾಂಕ್ಷೆಯ ಕೃಷಿ ಬಜೆಟ್ ಮಂಡಿಸಿದರು. ಅದನ್ನು ಮಂಡಿಸಿದ ಮೇಲೆ ಕೃಷಿಯ ಮೇಲೆ ಪರಿಣಾಮವೇನಾಗಿದೆ ? ಕೃಷಿ ಬಜೆಟ್ ಮಂಡಿಸಿದ ಮೇಲೆ what is the impact on agriculture 17,800 ಕೋಟಿ ರೂಪಾಯಿಗಳನ್ನು ಕೃಷಿಗೆ ಇಟ್ಟಿದ್ದೇವೆ. ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೇವೆ. 'ಭೂ ಚೇತನ' ದಲ್ಲಿ ಒಂದು ಹೆಕ್ಟೇರಿಗೆ 30 ಲಕ್ಷ ಮಾಡಿ ಬಿಟ್ಟಿದ್ದೇವೆ. ಒಂದು ಸಾವಿರ ಕೋಟಿ ರೂಪಾಯಿಯ 'ಸುವರ್ಣ

ಭೂಮಿ' ಕಾರ್ಯಕ್ರಮ ಮಾಡಿದ್ದೇವೆ. 500 ಕೋಟಿ ರೂಪಾಯಿಗಳನ್ನು ಮೂಲಸೌಕರ್ಯಗಳನ್ನು ಒದಗಿಸಲು ಮಾಡಿದ್ದೇವೆ. 500 ಕೋಟಿ ರೂಪಾಯಿಗಳನ್ನು ಮೂಲಸೌಕರ್ಯಗಳನ್ನು ಒದಗಿಸಲು ಮಾಡಿದ್ದೇವೆ. ಮಾರುಕಟ್ಟೆ ಮಾಡಲು ಇಟ್ಟದ್ದೇವೆ, 200 ಕೋಟಿ ರೂಪಾಯಿ ಸಾವಯುವ ಕೃಷಿಗೆ ಮಾಡಿದ್ದೇವೆ ಎಂದೆಲ್ಲಾ ಹೇಳಿದ್ದೇ ಹೇಳಿದ್ದು. ಇದು ಸುಮ್ಮನೆ ಜನಗಳಿಗೆ ಟೋಪಿ ಹಾಕುವ ಕೆಲಸ ಎಂದು ನಾನು ಹೋದ ಸಾರಿಯೇ ಹೇಳಿದ್ದೆ. ಇದನ್ನು ನೋಡಿದ ಮೇಲೆ ಅದು ನಿಜ ಎನಿಸಿಬಿಟ್ಟಿದೆ. It has provd correct. 2010-11 ಕ್ಕೆ the growth of the Agriculture is 13.3% ಕೃಷಿ ಬಜೆಟ್ ಮಂಡಿಸಿದ ಮೇಲೆ, the growth of the Agriculture is -2.9% ಕೃಷಿ ಬಜೆಟ್ ಮಂಡಿಸಿದ ಮೇಲೆ ಏನಾಗಿದೆ ಎಂದು ಅವರು ಹೇಳಲಿ. Before presentation of the separate Agriculture Budget, in the year 2010-11, the growth of the Agriculture is 13.3%. After presentation of the Agriculture Budget, it has come down to negative growth, i.e., -2.9% ಅದಕ್ಕೆ ಕಾರಣ ಬರಗಾಲವಿತ್ತು ಎಂದು ಹೇಳಿದ್ದಾರೆ. ಅದಕ್ಕೆ contradiction ಆಗಿ ಇನ್ನೊಂದು ಕಡೆ ಏನು ಹೇಳುತ್ತಾರೆ ಎಂದರೆ, they, expected food production of 130 lakh million tonnes. Still they are expected 124 lakh million tonnes ಉತ್ಪನ್ನ ಎಲ್ಲಿ ಕಡಿಮೆಯಾಗಿದೆ ? ಬರೀ 6 ಲಕ್ಷ ಮಿಲಿಯನ್ ಟನ್‌ಗಳಷ್ಟೇ ಕಡಿಮೆಯಾಗಿದೆ. If that reason is correct why the agricultural growth has skipped from 13% to -2.9% ? Can it be believed ? Can anybody believe this ? Then, that is not the reason. You have only mentioned in the Economic Survey and Mid Term Fiscal Plan. This year ಇಷ್ಟೆಲ್ಲಾ ಆದರೂ ಕೂಡ Agriculture Department ನಿಂದ ಅನೇಕ ಕಾರ್ಯಕ್ರಮಗಳನ್ನು ಮಾಡಿರುವುದರಿಂದ we are expecting 124 Lakhs Metric tonnes ಆಹಾರ ಪದಾರ್ಥಗಳು, ಇದು 2010–11ರಲ್ಲಿ 139 ಲಕ್ಷ metric tonnes ಆಗಿತ್ತು 2011–12ಕ್ಕೆ 130 ಲಕ್ಷ metric tonnes expect ಮಾಡಿದ್ದೆವು. ಆದರೆ ಅದು 124 ಲಕ್ಷ metric tonnes ಗೆ ಆಯಿತು. desipte of the drought in the State ಎಂದು ನೀವೇ ಹೇಳಿದ್ದೀರಿ. When such being the case, why so much of decrease in the food production, in the growth of the agriculture ? So if anybody can draw the inference whatever

agriculture budget they presented ಇದರಿಂದ ರೈತರಿಗೆ ಏನೂ ಉಪಯೋಗವಾಗಲಿಲ್ಲ. Point is clear. ಈ BJP ಸರ್ಕಾರ ಬಂದಮೇಲೆ ಹೊಸ ಪದ್ಧತಿ ತಂದಿದ್ದಾರೆ. Allocation ಜಾಸ್ತಿ ತೋರಿಸುವುದು. release ಮಾತ್ರ ಅರ್ಧದಷ್ಟು ಅಥವಾ ಇಲ್ಲವೇ ಇಲ್ಲ , expenditure ಇನ್ನೂ ಕಡಿಮೆ. ಇನ್ನು outlay and outcome ಗೆ ಸಂಬಂಧವೇ ಇಲ್ಲ. ಯಾವಾಗಲೂ outcome outlay ಗೆ corresponding ಆಗಿರಬೇಕು. outcome ಏನು ಎನ್ನುವುದು ಇರಬೇಕು. ಆ ತರಹದ ಒಂದು evaluation ಆಗುತ್ತಿಲ್ಲ. ಕಳೆದ ಬಾರಿ ಬಜೆಟ್ ಮಂಡಿಸಿದಾಗ evaluation ಮಾಡಿಸುತ್ತೇವೆಂದು ಹೇಳಿದ್ದರು. Evaluation ಎಲ್ಲಿದೆ? Where is the evaluation report ? ಈ ತರಹ ರೈತರಿಗೆ ಇವರು ಮೋಸ ಮಾಡತಕ್ಕಂಥ ಪ್ರಯತ್ನಗಳು ಎಂದು ನನಗನ್ನಿಸುತ್ತದೆ. I am correct ಎಂದು ಅಂದುಕೊಂಡಿದ್ದೇನೆ. ನಾನು ಸುಮ್ಮಸುಮ್ಮನೆ ಏನೋ ಬುರುಡೆ ಹೊಡೆಯುವುದಕ್ಕೆ ಹೋಗುವುದಿಲ್ಲ. ನಾನು ಅಂಕಿ-ಅಂಶಗಳನ್ನು ಹೇಳುತ್ತಿದ್ದೇನೆ. industrial growth 6.1% ನಿಂದ 3.6% ಗೆ ಬಂದಿದೆ. after the Global Investors Meet was conducted by the Government in June 2010. 3 ಲಕ್ಷದ 92 ಸಾವಿರ ಕೋಟಿ ರೂ.ಗಳಿಗೆ MOU ಎಂದು ಎಲ್ಲಿದೆ ಹೇಳಿ ? The outcome is 2010-11ರಲ್ಲಿ ಇದ್ದಂಥ industrial growth - it has reduced from 6.1% to 3.6% ನಿಮ್ಮ Global Investors Meet ಏನಾಯಿತು ? Investment ಏನಾಯಿತು ? What happened to your investment ? 3 ಲಕ್ಷ 92 ಸಾವಿರ ಕೋಟಿ ರೂಪಾಯಿಗಳಿಗೆ MOU ಎಂದು ಹೇಳಿದರು. ಪುನಃ ಈ ವರ್ಷದ ಜೂನ್‌ನಲ್ಲಿ Global Investors Meet ಮಾಡಬೇಕೆಂದಿದ್ದಾರೆ. ಇವರು ಹೇಳುವುದಕ್ಕೂ ಮಾಡುವುದಕ್ಕೂ, ಫಲಿತಾಂಶಕ್ಕೂ ಅರ್ಥಾತ್ ಸಂಬಂಧವಿಲ್ಲ. ಮತ್ತೆ ಕೃಷಿ ಸಂಬಂಧ Global Investment Meet ಮಾಡಿದರು. ಅದರಲ್ಲಿ 62 ಸಾವಿರ ಕೋಟಿ ರೂಪಾಯಿಗಳು. ಎಂದು MOU ಹೇಳುತ್ತಾರೆ. ಕೃಷಿಯದ್ದು ಆಯಿತು. industry ಯದ್ದು ಆಯಿತು. ಇಲ್ಲಿಗೆ investment ಹರಿದು ಬಂದುಬಿಟ್ಟಿತು. ಅದರೆ result is negative ಮಾನ್ಯ ಉಮೇಶ್ ಕತ್ತಿಯವರೆ, ಈ figures ಬರೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ನೀವು ಡಿಸೆಂಬರ್‌ನಲ್ಲಿ ಕೃಷಿ ಬಂಡವಾಳ ಸಮಾವೇಶ ಮಾಡಿದ್ದೀರಿ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :– ಡಿಸೆಂಬರ್‌ನಲ್ಲಿ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ಮಾಡಿದ್ದೇವೆ. ಮಾರ್ಚ್‌ನಲ್ಲಿ ಏನಾಯಿತು. ಹರಿದು ಬಂತೇ ಎಂದು ಕೇಳುತ್ತಿದ್ದೀರಿ. ನದಿ ನೀರೂ ಕೂಡ ಅಷ್ಟು ಬೇಗ ಹರಿಯುವುದಿಲ್ಲ. ಡಿಸೆಂಬರ್‌ನಲ್ಲಿ ಅದದ್ದು ಅಷ್ಟು ಬೇಗ ಏನಾಯಿತು ಎಂದು ಕೇಳಿದರೆ ಹೇಗೆ ?

ಶ್ರೀ ಸಿದ್ಧರಾಮಯ್ಯ :– Investment ಹರಿದು ಬಂದ ರೈತರನ್ನು ಕೊಚ್ಚಿಕೊಂಡು ಹೋಯಿತು ಅಲ್ಲವೇ ?

ಶ್ರೀ ದಿನೇಶ್ ಗುಂಡೂರಾವ್ :– ಡಿಸೆಂಬರ್ ಆದಮೇಲೆ ಕೃಷಿಗೆ ಸಂಬಂಧಿಸಿದಂತೆ ಒಂದೇ ಒಂದು MOU ಆಗದಿರುವುದು. ಬೇರೆ ಯಾವುದೂ ಆಗಿಲ್ಲ. ಇನ್ನು ಮುಂದೆ ಆಗುತ್ತದೋ ಇಲ್ಲವೋ ಅದು ಗೊತ್ತಿಲ್ಲ.

ಶ್ರೀ ಸಿದ್ಧರಾಮಯ್ಯ :– ನಾನು ಏಕೆ ಹೇಳುತ್ತಿದ್ದೇನೆ. ಎಂದರೆ ಇವರು ಮಾಡುವುದಕ್ಕೆ ನನ್ನದೇನೂ ತಕರಾರು ಇಲ್ಲ. ಆದರೆ, sincerity, honesty, in implementing the programmes, bringing investment to the agriculture sector. bringing the investment to the industrial sector and creating friendly atmosphere in the State ಅದು ಆದಮೇಲೆ ನಾವು ಕೇವಲ Global Investors Meet ಮಾಡಿದ ತಕ್ಷಣ ಆಗುವುದಿಲ್ಲ. ಈಗ result ನೋಡಿ. GDP growth ಕೂಡ 2010–11 ರಲ್ಲಿ 8.9% ಇತ್ತು. 2011–12ಕ್ಕೆ it has been reduced to 6.4%. Less than the national average. The national average is 6.9%. ಕಳೆದ 5 ವರ್ಷಗಳಲ್ಲಿ this is the lowest GDP growth ನೀವು ಹೇಳುವ ಅಭಿವೃದ್ಧಿಯೇ ಆಡಳಿತ ಮಂತ್ರ ಎಲ್ಲಿಗೆ ಬಂತು ? Where has it gone ? When the GDP growth is reduced from 8.9% to 6.4% Where is the growth ? ಎಲ್ಲಿದೆ growth "ಅಭಿವೃದ್ಧಿಯೇ ಆಡಳಿತ ಮಂತ್ರ" ರಾಜ್ಯದ ಅಭಿವೃದ್ಧಿ ಎಲ್ಲಿದೆ ? These are all facts ಇದೆಲ್ಲ ಇವರೇ Karnataka Economic Survey ಯಲ್ಲಿ ಹೇಳಿದ್ದಾರೆ. ನಾನು ಹುಟ್ಟಿಸಿಕೊಂಡು ಹೇಳುತ್ತಿಲ್ಲ. ಅವರೇ ಕೊಟ್ಟ ಅಂಕಿ–ಅಂಶಗಳನ್ನು ಹೇಳುತ್ತಿದ್ದೇನೆ. What happened ? ಕೋಟ್ಯಾಂತರ ರೂಪಾಯಿಗಳನ್ನು ನೀರಾವರಿಗೆ minor irrigation ಗೆ ಕೃಷಿಗೆ, eletricity ಗೆ ಖರ್ಚು ಮಾಡಿದ್ದೇವೆಂದು ಹೇಳುತ್ತೀರಿ. Where has it gone ? Where is the production ? No Production. ಒಂದು ಲಕ್ಷ ಕೋಟಿ

ರೂಪಾಯಿಗಳ ಬಜೆಟ್ ಮಂಡಿಸುವುದೇ ದೊಡ್ಡ ಅಚೀವ್‌ಮೆಂಟ್ ? can we say this as a big achievement when there is no growth in GDP ? ಎಲ್ಲದಕ್ಕೂ ಬರಗಾಲ ಎನ್ನುವ ಕಾರಣ ಹೇಳುತ್ತಾರೆ. ಬರಗಾಲದಲ್ಲಿ ಕೇವಲ 6 ಲಕ್ಷ ಟನ್ ಕಡಿಮೆ ಆಗಿರುವುದು ಅಲ್ಲವೇ ?

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) :– ನಮ್ಮ enlightment ಗೋಸ್ಕರ ತಾವು ಕೇಂದ್ರದಲ್ಲಿ ದೇಶದಲ್ಲಿ ಒಂದೂವರೆ ವರ್ಷಗಳಿಂದ ಆದ growth ಮತ್ತು ನಮ್ಮ ರಾಜ್ಯದ growth ಎರಡನ್ನೂ ಹೇಳಿದರೆ ನಮಗೂ ಸ್ವಲ್ಪ ಸಮಾಧಾನವಾಗುತ್ತದೆ.

ಶ್ರೀ ಸಿದ್ಧರಾಮಯ್ಯ :– ಹೇಳಿದ್ದೇನಲ್ಲಾ ಕೇಂದ್ರದ್ದು 6.9% ಮತ್ತು ನಮ್ಮದು 6.4% GDP growth.

ಶ್ರೀ ಎಸ್.ಎ. ರಾಮದಾಸ್ :– ಎರಡು ವರ್ಷಗಳ ಕಾಲದಿಂದ ದೇಶದ ಮತ್ತು ರಾಜ್ಯದ ಅರ್ಥವ್ಯವಸ್ಥೆ ಎರಡನ್ನೂ compare ಮಾಡಿಕೊಂಡು ಹೇಳಿದರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ :– ದೇಶದಲ್ಲಿ 6.9%, ನಮ್ಮದು 6.4% . ಕಳೆದ ವರ್ಷ ನಮ್ಮದು 8.9% ಈ ವರ್ಷ 6.4%. ಅವರದೂ ಕೂಡ ಕಡಿಮೆಯಾಗಿದೆ. ಇಲ್ಲವೆಂದು ನಾವು ಹೇಳುವುದಿಲ್ಲ. ನೀವು ಕೃಷಿ ಬಜೆಟ್ ಮಂಡಿಸಿದಿರಿ. ಅದು ಎಲ್ಲಿ ಹೋಯಿತು ? ಅದನ್ನು ಎಲ್ಲಿ ಇಟ್ಟಿದ್ದೀರಿ ? 17,800 ಕೋಟಿ ರೂಪಾಯಿಗಳನ್ನು ಎಲ್ಲಿ ಇಟ್ಟಿರಿ ?

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) :– Agricultre Budget ನಲ್ಲಿ ಅಷ್ಟು allocation ಕೊಟ್ಟಿದ್ದರಿಂದಲೇ ರಾಜ್ಯದಲ್ಲಿ ಅಷ್ಟು ಸುಭದ್ರತೆ ಇರುವುದು.

ಶ್ರೀ ಸಿದ್ಧರಾಮಯ್ಯ :– ಸುಭದ್ರತೆ ಎಂದರೇನು ? What to do you mean by Subadrathe ಹೇಳಿ ನೋಡೋಣ ?

ಶ್ರೀ ಎಸ್.ಎ. ರಾಮದಾಸ್ :– Market Guarantee ನಲ್ಲಿ ದೇಶದಲ್ಲಿ ಯಾವ ಲೆವೆಲ್‌ಗೆ ಬಂದಿದ್ದೀರಿ. ನಮ್ಮಲ್ಲಿ ಯಾವ ಲೆವಲ್‌ಗೆ ಬಂದಿದ್ದೇವೆ. ನಮ್ಮ purchasing rate ಏನು ? ಬೇರೆ ರಾಜ್ಯಗಳಿಗೆ ಇರುವಂಥ ರೇಟ್ ಏನು ? ಎಂಬ ಬಗ್ಗೆ ತಾವು ಕಂಪೇರ್ ಮಾಡುತ್ತಾ ಹೋಗಿ. ನಮ್ಮ ರೈತರಿಗಿರುವಂಥ ಬೇರೆ guarantee ರಾಜ್ಯದವರಿಗಿಲ್ಲ.

ಶ್ರೀ ಸಿದ್ಧರಾಮಯ್ಯ :– ತಾವು ದಯಾಮಾಡಿ ಕುಳಿತುಕೊಳ್ಳಿ. Human Development Index ನಲ್ಲಿ What is our position ? ದೇಶದ್ದೆಲ್ಲಾ ಓದಿಕೊಂಡಿದ್ದೀರಲ್ಲ. ಹೇಳಿ ನೋಡೋಣ. ಆಯಿತು, ಭದ್ರತೆ ಕೊಟ್ಟಿದ್ದೀರಲ್ಲಾ, what is our position at the All India Level ? Human Development index ನಲ್ಲಿ what is our place ? Please tell me. ನಾವು ರಾಜ್ಯದಲ್ಲಿ Number one ಎನ್ನುತ್ತೀರಿ. ನಮ್ಮದು ಎಷ್ಟನೇ ಪ್ಲೇಸ್ ಎಂದು ಹೇಳಿ ? 16 ಪ್ರಮುಖ ರಾಜ್ಯಗಳಲ್ಲಿ our place is 10th place. ಮತ್ತೆ ಎಲ್ಲಿ ಅಭಿವೃದ್ಧಿ ? ಏನು ಕುದುರೆಗಳು ಓಡುತ್ತಿವೆ ? ಎಲ್ಲಿ ? ಅದು ಸಾರ್ವಜನಿಕ ಭಾಷಣ ಮಾಡಿದ ಹಾಗಾಗುವುದಿಲ್ಲ. We are in the 10th Place in Human Development Index. Human Development Index was brought in the year 2005 when I was in-charge of the Finance and Planning Department. ಆದಾದ ಮೇಲೆ ಮಾಡಿಯೇ ಇಲ್ಲ ನಾವು 10th place ನಲ್ಲಿದ್ದೇವೆ. Literacy, health, coverage, gender, equaltiy, infrastructure development ನಲ್ಲಿ ಇಡೀ ದೇಶದ ಸಾಕ್ಷರತೆಯನ್ನು 11th 5-year plan ನಲ್ಲಿ 85% ಗೆ ತೆಗೆದುಕೊಂಡು ಹೋಗಬೇಕೆಂದು ಹೇಳಿದ್ದರು. ಈಗ ನಾವು ಯಾವ ಸ್ಥಾನದಲ್ಲಿದ್ದೇವೆ ? 11th plan ನಲ್ಲಿ ನಮಗೆ ಕೊಟ್ಟಿದ್ದ target literacy ಯನ್ನು 85% ಗೆ ತೆಗೆದುಕೊಂಡು ಹೋಗಬೇಕು. except Bangalore city, Mangalore, Udupi ಈಗ ನಾವು ಎಲ್ಲಿದ್ದೇವೆ ? ರಾಯಚೂರಿನಲ್ಲಿ ಗುಲ್ಬರ್ಗಾದಲ್ಲಿ literacy 49%, 58% ಇದೆ. not even 60% Where is the growth ? Where has it gone ? Where you have concealed ? This is the situation ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆನ್ನುತ್ತೀರಿ. ಅದನ್ನು ಖರ್ಚು ಮಾಡುವುದಕ್ಕೂ ಅದರಿಂದಾಗುವ ಬೆಳವಣಿಗೆಗೂ ಸಾಮ್ಯಾವಿರಬೇಕಲ್ಲವೇ ? ಮಾಡುತ್ತಿಲ್ಲವೆಂದೇ Expenditure commission ನವರು ಹೇಳಿರುವುದು. ಸುಮ್ಮನೆ ಹಣ ಬಿಡುಗಡೆ ಮಾಡುತ್ತೀರಿ. ಹಣ ಖರ್ಚಾಗುತ್ತದೆ. ಅದು ಎಲ್ಲಿಯೇ ಹೋಗುತ್ತದೆ. ಏನೋ ಆಗುತ್ತದೆ. ಆದರಿಂದ growth ಏನಾಗುತ್ತದೆ. ಎನ್ನುವುದನ್ನು ನಾನು ಯಾರೂ ನೋಡಿಕೊಳ್ಳುತ್ತಿಲ್ಲ. ಅದನ್ನು ಮಾಡಿ ಎಂದು Expenditure Commission ನವರು 4 report ಕೊಟ್ಟಿದ್ದಾರೆ. ಆ 4 report ಗಳನ್ನು ನೋಡಿಕೊಂಡಿದ್ದಾರೆಯೋ, ಇಲ್ಲವೋ

ನನಗೆ ಗೊತ್ತಿಲ್ಲ.Chief Secretary ಯವರೇ Fiscal Management Review Committee ಯಲ್ಲಿ ಕೆಲವು recommendations ಮಾಡಿದ್ದಾರೆ. ಹೋಗಲಿ, ಅದನ್ನಾದರೂ follow ಮಾಡಿದ್ದೀರಾ ? Even those recommendations have not been followed. They have not been implemented. Then what is that you are doing ? ಮತ್ತೆ ಹೇಗೆ ಹಣಕಾಸಿನ ಭದ್ರತೆ, ಸುಭದ್ರತೆ Mr. Ramdas ? Negative ಆಗುವುದೇ ಸುಭದ್ರತೆಯೇ ? ಅದೇ ಬೆಳವಣಿಗೆ ಎಂದು ತಿಳಿದುಕೊಂಡಿದ್ದೀರಾ ?

ಶ್ರೀ ಸಿ.ಟಿ. ರವಿ :– ಕೇಂದ್ರದಲ್ಲಿ ಒಂದು ಮೂಟೆ ಗೊಬ್ಬರಕ್ಕೆ 1200 ರೂ. ರೇಟ್ ಮಾಡಿದರೆ ಯಾವ ರೈತ ಉದ್ಧಾರವಾಗುತ್ತಾನೆ ಹೇಳಿ ? agriculture growth ಹೇಗೆ ಆಗುತ್ತದೆ ?

ಶ್ರೀ ಸಿದ್ದರಾಮಯ್ಯ :– ಹಾಗಾದಾರೆ, ಕೃಷಿಯೇ ನಮ್ಮ ಮಂತ್ರ, ಎನ್ನುವುದನ್ನು ಬಿಟ್ಟುಬಿಡಿ.

ಶ್ರೀ ಸಿ.ಟಿ. ರವಿ :– ಅದನ್ನಿಟ್ಟುಕೊಂಡೇ ಯಾರೂ ಉದ್ಧಾರವಾಗು–ವುದಿಲ್ಲವೆಂದು ಎಲ್ಲ ಈ ಕಡೆಗೆ ಬಂದಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ :– Assembly ಏಕಿರುವುದು ?

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಕೇಂದ್ರ ಸರ್ಕಾರದ್ದು ನೋಡಿಕೊಂಡು ಮಾಡುವುದಾದರೆ, why we should give approval ?

(ಗೊಂದಲ)

ಶ್ರೀ ಸಿ.ಟಿ. ರವಿ :– 9000 ರೂ. ಒಂದು ಟನ್‌ಗೆ ಇದ್ದದ್ದು, ಕಡಿಮೆಯಾಯಿತು. ಯಾರು ಉದ್ಧಾರವಾಗುತ್ತಾರೆ ? ನೀವು ಅವರಿಗೆ ಸ್ವಲ್ಪ ಬುದ್ಧಿ ಹೇಳಿ.

ಶ್ರೀ ಸಿದ್ಧರಾಮಯ್ಯ :– ಆಯಿತು, ಕುಳಿತುಕೊಳ್ಳಿ, ನೀವು ಮಾತನಾಡುವಾಗ ಮಾತನಾಡಿ. ರಾಮದಾಸ್‌ರವರೆ, ನೀವು ಮಂತ್ರಿಯಾಗಿ ಮಧ್ಯೆ ಮಾತನಾಡಬಾರದು.

ಶ್ರೀ ಎಸ್.ಎ. ರಾಮದಾಸ್ :– ರಾಜ್ಯದ ಅರ್ಥ ವ್ಯವಸ್ಥೆಯ ಭದ್ರತೆಯ ಬಗ್ಗೆ ಹೇಳುತ್ತೇನೆ. ವಿಶೇಷವಾಗಿ ತಾವು 7 ಬಜೆಟ್ ಮಂಡಿಸಿದ್ದೀರಿ. ಕೇಂದ್ರ

ಬಜೆಟ್ ನಮ್ಮ ಮುಂದಿರುವಾಗ 45 ಸಾವಿರ ಕೋಟಿ ರೂ.ಗಳ ಟ್ಯಾಕ್ಸ್ ಅನ್ನು ಹಾಕಿದ್ದಾರೆ. ನಾವು ಎಷ್ಟು ಟ್ಯಾಕ್ಸ್ ಹಾಕಿದ್ದೇವೆ ? ಅಲ್ಲಿ ಜನಸಾಮಾನ್ಯರಿಗೆ ನಾವು ಕೊಡುವ ಯೋಜನೆಯಲ್ಲಿ 4.5 ಸಾವಿರ ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಇಲ್ಲಿ ನಾವು ಎಷ್ಟು ಕೊಟ್ಟಿದ್ದೇವೆಂದು ಸ್ವಲ್ಪ ಕಂಪೇರ್ ಮಾಡಿದರೆ ಎಲ್ಲರಿಗೂ ಅರ್ಥವಾಗುತ್ತದೆ.

ಶ್ರೀ ಸಿದ್ದರಾಮಯ್ಯ :– ಈಗ ನಾನು ಹೇಳಿದ್ದು ಅರ್ಥವಾಗಲಿಲ್ಲವೆ?

ಶ್ರೀ ಎಸ್.ಎ. ರಾಮದಾಸ್ :– ಇಲ್ಲ.

ಶ್ರೀ ಸಿದ್ದರಾಮಯ್ಯ :– ಅಲ್ಲಿ 45 ಸಾವಿರ ಕೋಟಿ ರೂ.ಗಳನ್ನು direct tax ಹಾಕಿದ್ದಾರೆ. ನಾವು ಎಷ್ಟು ಟ್ಯಾಕ್ಸ್ ಹಾಕಿದ್ದೇವೆ ? ಆದಾದರೂ ಕೂಡ ನಮ್ಮ ಅರ್ಥ ವ್ಯವಸ್ಥೆ ಹೇಗಿದೆ ? surplus budget ಎಂದು ತಾವು ಹೇಳಿದ್ದೀರಿ. ಅದೆಲ್ಲವನ್ನೂ ನಾನು ನೋಟ್ ಮಾಡಿಕೊಂಡಿದ್ದೇನೆ. ಕೆಲವು practical ವಿಚಾರಗಳಿವೆ. ಆದರೆ, ಇಲ್ಲಿ ದೇಶದ ಅರ್ಥ ವ್ಯವಸ್ಥೆಯಾಧಾರದ ಮೇಲೆ ಕೇಂದ್ರದ ಬಜೆಟ್‌ನಲ್ಲಿ ಎಷ್ಟು ಕೊಟ್ಟಿದ್ದೀರಿ ? ಇಲ್ಲಿ ಎಷ್ಟು ಟ್ಯಾಕ್ಸ್ ಹಾಕಿದ್ದೇವೆಂದು ಸ್ವಲ್ಪ ಇದ್ದರೆ comparison ಇದ್ದರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ :– Central budget ಮೇಲೆ ಮಾತನಾಡುವುದಕ್ಕೆ ನಿಮ್ಮ ಎಂ.ಪಿ.ಗಳಿದ್ದಾರೆ. ಅಲ್ಲಿ ಅವರಿಗೇನು ಕೆಲಸ ? ನಾವು Central budget ಬಗ್ಗೆ ಚರ್ಚೆ ಮಾಡುವುದಕ್ಕೆ ಇಲ್ಲಿಗೆ ಬಂದಿರುವುದು ? ಹಾಗಾದರೆ, Central Government budget ನೋಡಿಕೊಂಡು ಇಲ್ಲಿ ಬಜೆಟ್ ಮಂಡಿಸಿ, ಅಲ್ಲೇನಾಗುತ್ತದೆ ಅದರ ಪ್ರಕಾರ ಮಂಡಿಸಿಕೊಂಡು ಹೋಗಿ, ಏನೂ ಹೇಳುವುದಕ್ಕೆ ಹೋಗಬೇಡಿ. ಅಲ್ಲೇನಾಗುತ್ತದೆ. ಇಲ್ಲೇನಾಗುತ್ತದೆ ? Why do you bother about Central budget ? ನಿಮ್ಮ ಎಂಪಿಗಳು ಎಷ್ಟು ಜನ ಇದ್ದಾರೆ ? ಅಲ್ಲಿ ಇವೆಲ್ಲವನ್ನೂ ಮಾತನಾಡುವುದಕ್ಕೆ ಅವರಿಗೆ ಹೇಳಿ. Mr. Ramdas 21% Central Government ನಿಂದ ನಮಗೆ resources ಬರುತ್ತಿದೆಯಲ್ಲ 21% ಹೆಚ್ಚಾಗಿರುವುದು. ನಮಗೆ ಈಗ ಟ್ಯಾಕ್ಸ್ ಬಂದಿದೆಯಲ್ಲ. ಅದರಲ್ಲಿ ಕಳೆದ ವರ್ಷಕ್ಕೂ ಈ ವರ್ಷಕ್ಕೂ the growth will be more than 20% ನಮಗೆ ಬೇಡ ಎಂದು ವಾಪಸ್ ಕೊಡುತ್ತೀರಾ ? ಹಾಗೆಲ್ಲಾ ಹೇಳಬಾರದು.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಹೌದು, ರಾಜ್ಯದ ಜನರೇ ಕೊಡುವುದು. ನಿಮಗೂ, ಅವರಿಗೂ ಕೊಡುವುದು ರಾಜ್ಯದ ಜನರೇ, ನೀವೊಬ್ಬರೇನೇ ? ಇಡೀ ದೇಶದ 110 ಕೋಟಿ ಜನ ಕೊಡುತ್ತಾರೆ. ಕರ್ನಾಟಕದ 6 ಕೋಟಿ 11 ಲಕ್ಷ ಜನ ಕೊಡುತ್ತಾರೆ. ನಾನು ಇಲ್ಲವೆಂದು ಹೇಳಿದೆನೆ ? ನಾನು ಓದಿ ಹೇಳಿದೆ. ಕಳೆದ ವರ್ಷ ನಮಗೆ ಬರಬೇಕಾದ tax devolution grants ಎಷ್ಟು ಎಂದು ಬರೆದುಕೊಂಡಿದ್ದೀರಾ ? ಮತ್ತೆ ಏಕೆ ಅದು ಹೆಚ್ಚಾಯಿತು ? ನಮ್ಮ ಪಾಲಿನಲ್ಲಿ 13 ಸಾವಿರ ಕೋಟಿ ರೂಪಾಯಿ ಮತ್ತು ಅದರಲ್ಲಿ 13 ಸಾವಿರ ಕೋಟಿ ರೂಪಾಯಿ ಬರುತ್ತಿದೆ. ಹೇಗೆ ಮತ್ತೆ ? ಅದಕ್ಕೆ ನಿಮ್ಮ ಬಜೆಟ್ 1 ಲಕ್ಷ ಕೋಟಿ ರೂಪಾಯಿ ಆಯಿತು. ಇಲ್ಲದಿದ್ದರೆ ಅಷ್ಟು ಎಲ್ಲಿ ಅಗತ್ತಿತ್ತು ? ಕೇಂದ್ರ ಸರ್ಕಾರದಿಂದ 26 ಸಾವಿರ ಕೋಟಿ ಬಂದಿದ್ದರಿಂದಲೇ ನೀವು ಅದನ್ನು ಬರೆದುಕೊಂಡಿರುವುದು. ಕಳೆದ ವರ್ಷಕ್ಕಿಂತ ಈ ವರ್ಷ more than 20% is the increase. ನಾನು ಏನು ಹೇಳುತ್ತಿದ್ದೆ ಮರೆತೇ ಬಿಟ್ಟೆ ? ಈ ರಾಮದಾಸ್ ಅವರು ದಾರಿ ತಪ್ಪಿಸಿದರು. ಯಾವಾಗಲೂ ಒಂದೇ ಜಿಲ್ಲೆಯವರದೇ ತಾಪತ್ರಯ. ನೀನು ಬಹಳ ಬುದ್ಧಿವಂತ ಇದ್ದೀಯಾ. ನೀವು ಯಾವ parameter ಇಟ್ಟುಕೊಂಡು ನೋಡಿದರೂ ಅಭಿವೃದ್ಧಿಯಂತೂ ಇಲ್ಲ.GDP growth 6.4%, Agriculture ದು minus ಇದೆ ರಾಮದಾಸ್‌ರವರೆ, except service sector ಅದಕ್ಕೆ ನಿಮ್ಮ budgetary backup support ಇಲ್ಲ. ಅದರ ಪಾಡಿಗೆ information technology ಬೆಳೆದುಕೊಂಡು ಹೋಗುತ್ತದೆ. ಅದಕ್ಕೆ ಇವರೇನು budget allocation ಕೊಡುವುದಿಲ್ಲ. ಅದು regular ಆಗಿ ಬೆಳೆದುಕೊಂಡು ಹೋಗುತ್ತಿದೆ. 2010–11 ರ ಸಾಲಿನಲ್ಲಿ service sector ನಲ್ಲಿ 9.1% ಇತ್ತು. It has increased from 9.1% to 10.6%. That is the only sector positive ಆಗಿರುವುದು. ಒಂದು ಕಾಲದಲ್ಲಿ Agriculture GDP ಗೆ contribution 28% ಇತ್ತು. Today what is the percentage of agriculture GDP ? It is 15-16%. ನೀವು ಹೇಳಿರುವ ಪ್ರಕಾರವೇ 17%. GDP ಗೆ industrial contribution ಕಡಿಮೆಯಾಗುತ್ತಾ ಬರುತ್ತಿದೆ. Agriculture ಕಡಿಮೆಯಾಗುತ್ತಾ ಬರುತ್ತಿದೆ. Only service sector is increasing, positive growth ಇರುವುದು. ಈ ರಾಜ್ಯ ಒಂದು ವೇಳೆ ಅದು ಏನಾದರೂ inflation rate stagnant ಆಗಿದ್ದರೆ ನಮ್ಮದು GDP growth 5 ಕ್ಕಿಂತ ಕಡಿಮೆಯಾಗಿಬಿಡುತ್ತಿತ್ತು. ಈಗ ಇರುವ 6.4% ಏನು ಇದೆ. ಅದು

ಅದಕ್ಕಿಂತಲೂ ಕಡಿಮೆಯಾಗಿಬಿಡುತ್ತಿತ್ತು. ರಾಜ್ಯದ ಬೆಳವಣಿಗೆ ಇವರು ಇಷ್ಟೊಂದು ಪ್ರಚಾರ. ಅಭಿವೃದ್ಧಿಯೇ ನಮ್ಮ ಮಂತ್ರ ಎಂದು ಹೇಳಿ ಹೇಳಿ ಅಭಿವೃದ್ಧಿ ಕೆಳಗೆ ಹೋಗುತ್ತಿದೆ. Agriculture development ಕಳೆದ ಐದು ವರ್ಷದಲ್ಲಿ ಕೆಳಗಡೆ ಹೋಗುತ್ತಿದೆ. industries ಕೆಳಗಡೆ ಹೋಗುತ್ತಿದೆ. ಈ March end ಗೆ 11th Five Year Plan ಮುಗಿಯಿತು. 12th Five Year Plan April 1 ರಿಂದ ಪ್ರಾರಂಭವಾಗುತ್ತಿದೆ. 11th Five Year Plan ನಲ್ಲಿ analyise ಮಾಡಿದ್ದಾರೆ. ಎಲ್ಲವೂ ಕೂಡ negative ಇವೆ. ಸುವರ್ಣ ಭೂಮಿ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟು ಎಷ್ಟು ದುಡ್ಡು ಬಿಡುಗಡೆ ಮಾಡಿ ಎಷ್ಟು ಖರ್ಚು ಮಾಡಿದಿರಿ ? ಖರ್ಚಾಗಿರುವುದು 258 ಕೋಟಿ out of one thousand crores ಸಾವಯವ ಕೃಷಿಗೆ 200 ಕೋಟಿ. ನಿಮ್ಮ ಸಾವಯವ ಕೃಷಿ ಮಿಷನ್ ಅಧ್ಯಕ್ಷರಾದ ಆನಂದ್‌ರವರು ಅಳುತ್ತಿದ್ದರು. 200 ಕೋಟಿ ಇಟ್ಟರೂ ಒಂದು ರೂಪಾಯಿ ಬಿಡುಗಡೆ ಮಾಡಲಿಲ್ಲ. ಎಂದು Infrastructrue development ಗೆ 500 ಕೋಟಿ ಇಟ್ಟಿರಿ ಒಂದು ರೂಪಾಯಿ ಬಿಡುಗಡೆ ಮಾಡಲಿಲ್ಲ. ಅದು ಇನ್ನೂ take off ಆಗಿಲ್ಲ. Market intervention ಗೆ ಒಂದು ಸಾವಿರ ಕೋಟಿ ರೂಪಾಯಿ ಇಟ್ಟಿರಿ. not even 200 crores has been spent. ಮತ್ತೆ Agriculture ಬೆಳೆ ಬೆಳೆಯಬೇಕು ಎಂದರೆ ಎಲ್ಲಿಂದ ಬೆಳೆಯುತ್ತದೆ ? Production ಜಾಸ್ತಿಯಾಗಬೇಕೆಂದರೆ ಹೇಗೆ ಆಗುತ್ತದೆ ? Minus growth ಆಗದೇ ಏನಾಗುತ್ತದೆ ? That is why Agriculture growth is 13.3 ನಿಂದ –2.9 ಗೆ negative growth ಬಂದಿದೆ. ಇದು agriculture ಆಯಿತು. irrigation ಗೆ total plan ನಲ್ಲಿ ಈ ವರ್ಷ ಸುಮಾರು 15% ಇಟ್ಟಿದ್ದೇವೆಂದು ಹೇಳುತ್ತೀರಿ. ಈ ವರ್ಷದ 42,030 ಕೋಟಿ ರೂಪಾಯಿಯ Plan size ಇದೆ. ಈ ವರ್ಷ ಎಂದರೆ ಮುಂದಿನ 2012–13ನೇ ಸಾಲಿಗೆ ಮಂಡಿಸಿರುವ ಬಜೆಟ್‌ನಲ್ಲಿ. ಅದರೆ, ಈ ವರ್ಷಕ್ಕೆ 38,070 ಕೋಟಿ ರೂಪಾಯಿನಲ್ಲಿ ಜನವರಿ ಅಂತ್ಯಕ್ಕೆ ಖರ್ಚು ಮಾಡಿರುವುದು 19,000 ಕೋಟಿ ರೂಪಾಯಿಗಳು. ಅಂದರೆ a little more than 50% out of 38,070 crores. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು Council and Assembly ಯಲ್ಲಿ ಉತ್ತರ ಕೊಟ್ಟಿರುವುದು. What is the percentage of the total plan size ? Expenditure is a little above 50%. How can we except growth ? ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು ಆಗ ನಾನು

ಕೇಳಿದೆ. ಯಾವಾಗಲೂ ಫೆಬ್ರವರಿ–ಮಾರ್ಚ್ ಈ ಎರಡು ತಿಂಗಳಿನಲ್ಲಿಯೇ ದುಡ್ಡು ಖರ್ಚಾಗುವುದು, ಇನ್ನೂ 19,000 ಕೋಟಿ ಖರ್ಚು ಮಾಡುತ್ತೀರೋ ? ಅದನ್ನೇನು ಹಾಗೆ ತಿಂದು ಬಿಡುವುದೋ? ಇಲ್ಲಾ ನುಂಗಿ ಬಿಡುವುದೋ? ನಾವು ಇದ್ದಾಗಲೂ ಹೀಗೆ ತಿಂದುಕೊಳ್ಳುತ್ತಿದ್ದೇವು. ಮಾನ್ಯ ಪಶುಸಂಗೋಪನಾ ಇಲಾಖೆಯ ಸಚಿವರಾದ ರೇವೂನಾಯಕ್ ಬೆಳಮಗಿಯವರೆ ತಾವು ಹೇಳಬೇಕು. ತಾವು ಎಷ್ಟು ಸಾರಿ ಇಲ್ಲಿ ಪಶು ವೈದ್ಯರುಗಳನ್ನು ನೇಮಕ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದೀರಿ? ನೀವು ಎಷ್ಟು ಸಾರಿ ಇಲ್ಲಿ ಆರು ತಿಂಗಳಲ್ಲಿ ಮಾಡುತ್ತೇವೆ, ಒಂದು ವರ್ಷದಲ್ಲಿ ಮಾಡುತ್ತೇವೆಂದು ಹೇಳಿದಿರಿ? ಎಲ್ಲಿ ಮಾಡಿದಿರಿ? ಆರೋಗ್ಯ ಇಲಾಖೆಯಲ್ಲಿ ವೈದ್ಯರುಗಳು ಇದ್ದಾರೆಯೇ? Rural development ಎಲ್ಲಾ ಜಿಲ್ಲೆಗಳಲ್ಲಿ ombudsmen ಭರ್ತಿ ಮಾಡಿದ್ದೀರಾ? ಎಲ್ಲಾ ಪಂಚಾಯಿತಿಗಳಲ್ಲಿ Secretary and PDO ಗಳು ಇದ್ದಾರೆಯೇ? Not even 50% ಕಾರ್‌ಜೋಳ್‌ರವರೆ 60% ಗಿಂತಲೂ ಜಾಸ್ತಿ ಇದ್ದಾರೆಯೆ ?

ಶ್ರೀ ಗೋವಿಂದ ಎಂ. ಕಾರಜೋಳ್ :– More than 70% ಇದ್ದಾರೆ.

ಶ್ರೀ ಸಿದ್ದರಾಮಯ್ಯ :– 70% ಇದ್ದಾರೆಯೆ, ಆಯಿತು ನೀವು ಹೇಳಿದ್ದನ್ನು ಒಪ್ಪುತ್ತೇನೆ. PDO and Secretary ಎಷ್ಟು percent ಇದ್ದಾರೆ? ನನ್ನ ಪ್ರಕಾರ 60% ಎಂದು ಅಂದುಕೊಂಡಿದ್ದೇನೆ Whether I am wrong or correct ?

ಶ್ರೀ ಗೋವಿಂದ ಎಂ. ಕಾರಜೋಳ್ : PDO ಗಳನ್ನು appointment ಮಾಡಿಕೊಂಡಿದ್ದೇವೆ ಹೀಗಾಗಿ ಅವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ :– ಸರಿ, ನಮ್ಮ ಜಿಲ್ಲೆಯಲ್ಲಿ ಇಲ್ಲ. ನೀವು ಬೇಕಾದರೆ ನಮ್ಮ ಜಿಲ್ಲೆಯ CEO ಗೆ ಫೋನ್ ಮಾಡಿ ಎಷ್ಟು ಜನ PDO ಗಳು ಇದ್ದಾರೆಂದು ಕೇಳಿಕೊಂಡು ಬಂದು ನಮಗೆ ಹೇಳಿಬಿಡಿ. ನಾನು ಕೇಳಲ್ಲ. ನೀವೇ ಕೇಳಿ ಹೇಳಿಬಿಡಿ Backlog ಹುದ್ದೆಗಳನ್ನು fill up ಮಾಡಿದ್ದೀರಾ? Secheduled caste and scheduled tribes ಹುದ್ದೆಗಳನ್ನು fill up ಮಾಡಿದ್ದೀರಾ ? ಇಲ್ಲ. ಕಾರಜೋಳ್‌ರವರೆ ನೀವು powerfull minister ಇದ್ದುಕೊಂಡು ಈ ರೀತಿಯಾಗುತ್ತದೆಯಲ್ಲಾ. ಏನು ಮಾಡಬೇಕು ನೀವೇ ಹೇಳಿ. You are a strong man.

ಶ್ರೀ ಎಂ.ಬಿ. ಪಾಟೀಲ್ :– KEB ನಲ್ಲಿ linemen ಇಲ್ಲ. Revenue department ನಲ್ಲಿ surveyor ಗಳಿಲ್ಲ.

ಶ್ರೀ ಸಿದ್ದರಾಮಯ್ಯ :- KEB ನಲ್ಲಿ linemen ಇಲ್ಲ ಏಕೆಂದರೆ ಎಲ್ಲಾ ನೇಮಕಾತಿಗಳನ್ನು ಎರಡು ವರ್ಷ freeze ಮಾಡಿ ಎಂದು Cheif Secretary ರವರು ಶಿಫಾರಸ್ಸು ಮಾಡಿದ್ದಾರೆ. ಆದ್ದರಿಂದ, ಒಂದು ಹುದ್ದೆಯನ್ನು ತುಂಬಿಕೊಳ್ಳುತ್ತಿಲ್ಲ. ಡಾಕ್ಟರ್ಸ್, ಮೇಸ್ಟ್ರುಗಳನ್ನು, ಪ್ಯಾರಾ ಮೆಡಿಕಲ್ ಸ್ಟಾಫ್‌ನ ನೇಮಕಾತಿ ಮಾಡಬೇಡಿ ಎಂದು ಅದರಲ್ಲಿ ಇದೆಯೇ ? ಯಾವುದು service oriented ಇರುತ್ತದೆಯೋ ಅಂಥ ಕಡೆ ತಕ್ಷಣ ನೇಮಕಾತಿ ಮಾಡಬೇಕಾಗುತ್ತದೆ. ಅಂದರೆ, ಅಗತ್ಯ ಸೇವೆಗಳಾಗಿರುವ ಶಿಕ್ಷಣ, ಆರೋಗ್ಯ, ಪಶುಸಂಗೋಪನೆ ಇಲಾಖೆಗಳಲ್ಲಿ ನೇಮಕಾತಿ ಮಾಡಬೇಕೇಂದು ಇದೆ. ಇದನ್ನು ತಾವು ಮಾಡುತ್ತಿಲ್ಲ. ಇವತ್ತಿನ ದಿವಸ ಡಾಕ್ಟರ್ಸ್ ಇಲ್ಲ ಹಳ್ಳಿಗಳಲ್ಲಿ ಯಾವುದೇ ಡಾಕ್ಟರ್ಸ್ ಉಳಿದುಕೊಳ್ಳುತ್ತಿಲ್ಲ. ಈ ರೀತಿಯಾದರೆ ಬಡವರು ಏನು ಮಾಡಬೇಕು? ಬಡವರು ಖಾಸಗಿ ಆಸ್ಪತ್ರೆಗೆ ಹೋಗುವುದಕ್ಕೆ ಅವರ ಕೈನಲ್ಲಿ ಆಗುವುದಿಲ್ಲ. ಆದ್ದರಿಂದ, ಅವರುಗಳು ಸರ್ಕಾರಿ ಆಸ್ಪತ್ರೆಗಳಿಗೇ ಹೋಗಬೇಕು. quarters ಇದ್ದರೂ ಕೂಡ ಹಳ್ಳಿಯಲ್ಲಿ ಇವತ್ತಿನ ದಿವಸ ಒಬ್ಬ ಡಾಕ್ಟರ್ ಸಹ ಇರುವುದಿಲ್ಲ. ಇದನ್ನು ಕೇಂದ್ರ ಸರ್ಕಾರ ಮಾಡಿಸಬೇಕೆ ? Agriculture is a State Sector ಇದು ನಿಮ್ಮದೆ ಸೆಕ್ಟರ್ ಆಗಿದೆ. It is a State Sector and State subject under the Constitution. ಇದನ್ನು ಮಾಡಬೇಕಾಗಿರುವುದು ನಿಮ್ಮ ಜವಾಬ್ದಾರಿಯಾಗಿದೆ. ನೀರಾವರಿ ಬಗ್ಗೆ ಹೇಳುವುದಾದರೆ, ಇದಕ್ಕೆ ದುಡ್ಡು ಇಡುವುದು ಬೇರೆ, ಖರ್ಚು ಮಾಡುವುದು ಬೇರೆಯಾಗಿದೆ. ಮೊನ್ನೆ ದಿವಸ Upper Krishna Project ಬಗ್ಗೆ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಾದ ಬಿಜಾಪುರ, ಬಾಗಲಕೋಟೆ, ರಾಯಚೂರು, ಗುಲ್ಬರ್ಗ ಮತ್ತು ಯಾದಗಿರಿ ಜಿಲ್ಲೆಯ ಶಾಸಕರೆಲ್ಲರೂ ಸೇರಿ ಭಾಷಣ ಮಾಡಿದ್ದೇವೆ. ಇದಕ್ಕಾಗಿ 17,000 ಕೋಟಿ ಖರ್ಚು ಮಾಡಿ ಇನ್ನು 7 ವರ್ಷಗಳಲ್ಲಿ ಮುಗಿಸುತ್ತೇವೆಂದು ಹೇಳಿದ್ದಾರೆ. why seven years ಎಂದು ನಾನು ಕೇಳುತ್ತಿದ್ದೇನೆ. ಒಂದು ಲಕ್ಷ ಕೋಟಿ ಬಜೆಟ್ ಮಾಡಿದ್ದೀರಿ. ಆದ್ದರಿಂದ, ಇದನ್ನು 5 ವರ್ಷದಲ್ಲಿ ಮುಗಿಸಿ. ನಾನು ಆವತ್ತು ಕೂಡ suggest ಮಾಡಿದ್ದೇನೆ. even today I am suggesting. Earmark 25% of the plan size under irrigation. Complete all the ongoing projects in Five years. we will support. Either this side or that side. North Karnataka or South Karnataka ಇದರಲ್ಲಿ Minor irrigation ಕೂಡ ಸೇರಿಕೊಂಡಿದೆ. Minor irrigation ಗೆ ಸುಮಾರು 900 ಕೋಟಿ ರೂಪಾಯಿ ಬರುತ್ತದೆ. ಮಾನ್ಯ ಗೋವಿಂದ ಕಾರಜೋಳರವರೆ ?

ಈ ವರ್ಷ ಸಣ್ಣ ನೀರಾವರಿಗೆ ಎಷ್ಟು ದುಡ್ಡು ಇಡಲಾಗಿದೆ ? ಕೋಪದಿಂದ ಏಕೆ ಎದ್ದೇಳುತ್ತಿದ್ದೀರಿ ? ಸ್ವಲ್ಪ ನಗುನಗುತಾ ಉತ್ತರ ಹೇಳಿ. ನೀವು ಸೀರಿಯಸ್ ಆಗಿ ಎದ್ದಿದ್ದರಿಂದ ನನಗೆ ಭಯವಾಯಿತು.

ಶ್ರೀ ಗೋವಿಂದ ಎಂ. ಕಾರಜೋಳ :– ನಗುತ್ತಲೇ ಹೇಳುತ್ತೇನೆ. 2011–12ನೇ ಸಾಲಿನಲ್ಲಿ 854 ಕೋಟಿ ರೂಪಾಯಿ earmark ಆಗಿತ್ತು. ಹೆಚ್ಚುವರಿಯಾಗಿ ಕೊಟ್ಟಿದ್ದರಿಂದ ನಿನ್ನೆವರೆಗೆ ನಮಗೆ 1200 ಕೋಟಿ ರೂಪಾಯಿ ಕೊಡಲಾಗಿದೆ.

ಶ್ರೀ ಸಿದ್ದರಾಮಯ್ಯ :– It is ok, thank you, Are you happy with that ?

ಶ್ರೀ ಗೋವಿಂದ ಎಂ. ಕಾರಜೋಳ :– Definitely Sir,

ಶ್ರೀ ಸಿದ್ದರಾಮಯ್ಯ :– What is the allocation for next year ?

ಶ್ರೀ ಗೋಂದ ಎಂ. ಕಾರಜೋಳ :– More than allocation ಕೊಟ್ಟ ಮೇಲೆ happy ಆಗಿದೆಯೇ ಎಂಬ ಪ್ರಶ್ನೆ ಕೇಳತಕ್ಕಂಥದು ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ :– What is the allocation for the next year ?

ಶ್ರೀ ಗೋವಿಂದ ಎಂ. ಕಾರಜೋಳ :– ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ :– ಬಜೆಟ್‌ನಲ್ಲಿದೆ, ಹಾಗೆಯೇ ಹೇಳಿ ನೋಡೋಣ.

ಶ್ರೀ ಗೋವಿಂದ ಎಂ. ಕಾರಜೋಳ :– ಎರಡು ದಿವಸ ತಡೆದುಕೊಳ್ಳಿ. ಉತ್ತರ ಹೇಳುವಂಥ ಸಂದರ್ಭದಲ್ಲಿ ಹೇಳಲಾಗುತ್ತದೆ.

ಶ್ರೀ ಸಿದ್ಧರಾಮಯ್ಯ :– ಇಲ್ಲ. ಪುಸ್ತಕ ಇದೆಯಲ್ಲ ಹೇಳಿ ನೋಡೋಣ.

ಶ್ರೀ ಗೋವಿಂದ ಎಂ. ಕಾರಜೋಳ :– ಈಗ ಬೇಡ.

ಶ್ರೀ ಸಿದ್ದರಾಮಯ್ಯ :– ಪರವಾಗಿಲ್ಲ, ಈಗ ಹೇಳಿ ಸಾರ್. Finance Annual Plan ತೆಗೆದು ಕೊಡಿ, ಎಷ್ಟಿದೆ ನೋಡೋಣ. ಅದರಲ್ಲಿ Minor irrigation ಗೆ ಎಷ್ಟು ಇದೆ ಎಂದು ನೋಡೋಣ.

ಶ್ರೀ ಗೋವಿಂದ ಎಂ. ಕಾರಜೋಳ :– ನಾನು 2011–12ನೇ ಸಾಲಿನದು ಹೇಳಿದ್ದೇನೆ. 2012–13ನೇ ಸಾಲಿನದು ರಿಪ್ಲೈ ಆದ ಮೇಲೆ ನಿಮಗೆ ಗೊತ್ತಾಗುತ್ತದೆ.

ಶ್ರೀ ಸಿದ್ದರಾಮಯ್ಯ :- ರಿಪ್ಲೈ ಅಲ್ಲ. ಈಗಾಗಲೇ ಬಜೆಟ್ ಮಂಡಿಸಿ ಆಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ :- ಬಜೆಟ್ ಮಂಡಿಸಿದೆ. ಆದರೆ, ಅಂತಿಮವಾಗಿ ಅಂಕಿ-ಅಂಶಗಳನ್ನು ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ :- ನಾಳೆ ದಿವಸ ಇದಕ್ಕಾಗಿ ಸಪ್ಲಿಮೆಂಟರಿ ಬಜೆಟ್ ಮಂಡಿಸುತ್ತೀರಾ ?

ಶ್ರೀ ಗೋವಿಂದ ಎಂ. ಕಾರಜೋಳ :- ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ :- ನಾಳೆ ದಿವಸವೆ ಸಪ್ಲಿಮೆಂಟರ್ ಬಜೆಟ್ ಮಂಡಿಸುತ್ತೀರಾ ?

ಶ್ರೀ ಗೋವಿಂದ ಎಂ. ಕಾರಜೋಳ :- ಮಾಡುವವರಿಗೂ ಸ್ವಲ್ಪ wait ಮಾಡಿ.

ಶ್ರೀ ಸಿದ್ದರಾಮಯ್ಯ :- ಬಜೆಟ್‌ಗೆ ಇನ್ನೊಂದು ಬಜೆಟ್ ಮಂಡಿಸುತ್ತೀರಾ ?

ಶ್ರೀ ಗೋವಿಂದ ಎಂ. ಕಾರಜೋಳ :- ಇನ್ನೊಂದು ಬಜೆಟ್ ಏನೂ ಬೇಕಾಗಿಲ್ಲ.

ಶ್ರೀ ಸಿದ್ದಾರಾಮಯ್ಯ :- Budget on Budget

ಶ್ರೀ ಗೋವಿಂದ ಎಂ. ಕಾರಜೋಳ :- Sir, Budget on Budget ಏನು ಬೇಕಾಗಿಲ್ಲ. ನಾವು ಸಬ್ ಹೆಡ್‌ನಲ್ಲಿ reallocation ಮಾಡಿಕೊಂಡು ಅಂತಿಮವಾಗಿ ರಿಪ್ಲೈ ಕೊಡುವಂಥ ಸಂದರ್ಭದಲ್ಲಿ ನಿಮಗೆ ನಾವು ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ :- ನನಗೆ ಜ್ಞಾಪಕ ಇರುವ ಪ್ರಕಾರ ಕಳೆದ ವರ್ಷಕ್ಕೂ ಮತ್ತು ಈ ವರ್ಷಕ್ಕೂ ಹೋಲಿಕೆ ಮಾಡಿದರೆ there is no much increase ನಾನು ಹೇಳುವುದನ್ನು ನೀವು ಸ್ವಲ್ಪ ಕೇಳಿ. ನಾನು ಹೇಳಿದ ಮೇಲೆ ತಾವು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ :- ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ನಾನು ನಿಮಗೆ ಏತಕ್ಕೆ ಅಂಕಿ-ಅಂಶಗಳನ್ನು ಹೇಳಿಲ್ಲವೆಂದರೆ, ಸ್ವಲ್ಪ adjustment ಮಾಡಿ ಕರೆಕ್ಟ್ ಆಗಿ ಅಂತಿಮವಾಗಿ ಹೇಳುತ್ತೇವೆಂದು ಹೇಳಿದ್ದೇನೆ. ಕಡಿಮೆಯಾಗಿದೆ ಎಂಬ ಕಾರಣಕ್ಕಾಗಿಯೇ ನಾನು ಹೇಳುವುದಕ್ಕೆ ಹೋಗಲಿಲ್ಲ. ನಾನು ಇದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ :- Thank you Karjol, I appreciate your honesty.

ಶ್ರೀ ಗೋವಿಂದ ಎಂ. ಕಾರಜೋಳ :- ಕಳೆದ ವರ್ಷದ್ದು ಮತ್ತು ಈ ವರ್ಷದು ನಾನು ಹೇಳಿದ್ದೇನೆ. ಅಂದರೆ, 2011-12ರಲ್ಲಿ 854 ಕೋಟಿ ರೂಪಾಯಿ earmark ಮಾಡಲಾಗಿತ್ತು. ಅದರೆ, 1200 ಕೋಟಿ ರೂಪಾಯಿ ಬಂದಿದೆ. ಈ ವರ್ಷ ಸ್ವಲ್ಪ ಕಡಿಮೆಯಾಗಿರುವುದರಿಂದ ಅದನ್ನು adjustment ಮಾಡಿ ನಿಮಗೆ ಹೇಳುತ್ತೇನೆಂದು ನಾನು ಹೇಳಿದೆ.

ಶ್ರೀ ಸಿದ್ದರಾಮಯ್ಯ :- ನೀವು adjustment ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸದಾನಂದಗೌಡರು adjustment ಮಾಡಬೇಕು. ಆಮೇಲೆ ನೀವೇನಾದರೂ adjustment ಮಾಡುವುದಕ್ಕೆ ಹೋಗಿಬಿಟ್ಟಿರಾ ?

ಶ್ರೀ ಗೋವಿಂದ ಎಂ. ಕಾರಜೋಳ :- Finance Minister ರವರೆ ಮಾಡಲಿ. ಒಟ್ಟಿನಲ್ಲಿ ಅದನ್ನು ಮಾಡಿದ ಮೇಲೆ ನಿಮಗೆ ಹೇಳುತ್ತೇನೆಂದು ನಾನು ಹೇಳಿದೆ.

ಶ್ರೀ ಸಿದ್ದರಾಮಯ್ಯ :- ನಾನು as it is ಹೇಳಿದ್ದೇನೆ. Minor Irrigation ಹೆಚ್ಚಾಗಿ ಕೊಟ್ಟರೆ ನಮಗೆ ಸಂತೋಷವಾಗುತ್ತದೆ. ನಿಮಗೆ ಇನ್ನು 1500 ಕೋಟಿ ರೂಪಾಯಿ ಕೊಟ್ಟರೆ I will be very happy man. ತಾವು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ ಮಾಡಿ. I have all my co-operation with you. ಈ ಸಾರಿ ಕೊಟ್ಟಿರುವ ಹಣ ಕಡಿಮೆಯಾಗಿದೆ ಎಂಬ ಕಾರಣಕ್ಕೋಸ್ಕರವೆ ನಾನು ನಿಮಗೆ ಹೇಳಿದೆ. ನೀರಾವರಿ ಬಗ್ಗೆ ಹೇಳುವುದಾದರೆ, ಅಪ್ಪರ್ ಕೃಷ್ಣ, ಕಬಿನಿ, ಅಪ್ಪರ್ ಭದ್ರಾ ಮತ್ತು ಭದ್ರಾ ಯೋಜನೆ ಮತ್ತು ಏತ ನೀರಾವರಿ ಯೋಜನೆಗಳಿರಬಹುದು. ಇವೆಲ್ಲದಕ್ಕೂ ಸೇರಿದರೆ ಎಷ್ಟು ದುಡ್ಡು ಆಗಬಹುದು ಈ ಎಲ್ಲ ಪೆಂಡಿಂಗ್ ಪ್ರಾಜೆಕ್ಟ್‌ಗಳನ್ನು 5 ವರ್ಷಗಳಲ್ಲಿ ಮುಗಿಸುತ್ತೇವೆಂದು, you earmark Rs. 10,000 crores every year, you complete all the ongoing minor, medium and major irrigation projects in five years. ಈ ಸಂದರ್ಭದಲ್ಲಿ ನಿಮ್ಮ political will ಅನ್ನು ತೋರಿಸಿ ರೈತರಪರ ಇರತಕ್ಕಂಥ ಕಳಕಳಿ, ಕಾಳಜಿಯನ್ನು ತೋರಿಸಿ. The size of the plan for the next year is Rs. 42,000 crores. 25% ಅಂದರೆ Rs. 10,000 crores ನೀರಾವರಿಗೆ ಯಾವಾಗಲೂ ಸಹ 25% ನಷ್ಟು ಇಡಬೇಕೆಂದು Planning Commmission ರವರು ಹೇಳುತ್ತಾರೆ. ನಾನು ಅನೇಕ ಸಾರಿ Planning Commission ಮುಂದೆ ಹೋದಾಗ they used to advise me that 25% ಇಡಿ, ನಿಮ್ಮ ಬಹಳ ಪ್ರಾಜೆಕ್ಟ್‌ಗಳು lingering

ಆಗುತ್ತಿದೆ. ಬಹಳ ವರ್ಷದಿಂದ ನೇತಾಕಿಕೊಂಡಿದ್ದಾರೆ. ಆದ್ದರಿಂದ, 25% ಇಡಿ ಎಂದು ನನಗೆ ಅವರು advise ಮಾಡಿದ್ದಾರೆ. Even now i support out of Rs. 42,030 crores of plan, allocate Rs. 10,000 crores for irrigation to complete all the irrigation projects within five years. ಅದಕ್ಕಾಗಿ Time bound action plan ಮಾಡಬೇಕು. ಇದನ್ನು ಮಾಡದೆ ಇರುವುದರಿಂದ escalation is going on. Infation 7% ಇದೆ. ಪ್ರತಿವರ್ಷ ಇದು ಹೋಗುತ್ತಾ ಇರುತ್ತದೆ. ಕಳೆದ ವರ್ಷಕ್ಕೂ ಈ ವರ್ಷಕ್ಕೂ 10% ಜಾಸ್ತಿ ಮಾಡಿದರೆ inflationಗೆ ಸರಿಯಾಗುತ್ತದೆ. ಖರ್ಚು ಮಾಡುವುದಕ್ಕೆ ದುಡ್ಡು ಎಲ್ಲಿದೆ? 7% inflation ಆಗಿದೆ, 10% ನಷ್ಟು ಹೆಚ್ಚು ಮಾಡಿದ್ದೀರಿ. ಹಾಗಾದರೆ ಮೈನಸ್ 7% ಅಂದರೆ growth ಕೇವಲ 3% ಮಾತ್ರ ಆಗುತ್ತದೆ. How can you complete all the pending projects ? ಪವರ್‌ಗೆ 10 ಸಾವಿರ ಕೋಟಿ ರೂಪಾಯಿ ಇಟ್ಟಿದ್ದೇವೆಂದು ನೀವು ಹೇಳಿದ್ದೀರಿ ಇದರಲ್ಲಿ ಸಬ್ಸಿಡಿ ಹಣವೇ 5 ಸಾವಿರ ಕೋಟಿ ರೂಪಾಯಿ ಆಗುತ್ತದೆ. 1900 ಕೋಟಿ ಇದ್ದಂಥ ಸಬ್ಸಿಡಿ ಇವತ್ತಿನ ದಿವಸ 5100 ಕೋಟಿ ರೂಪಾಯಿ ಆಗಿದೆ. ರೈತರ ಪಂಪ್‌ಸೆಟ್‌ಗಳಿಗೆ ಇಷ್ಟು ಹಣವನ್ನು ಸಬ್ಸಿಡಿ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. Is it true ? ರೈತರದು ಸುಮಾರು 18 ಲಕ್ಷ ದಿಂದ 19 ಲಕ್ಷ ಪಂಪಸೆಟ್‌ಗಳಿರಬಹುದು. ಈ ಪಂಪ್‌ಸೆಟ್‌ಗಳಿಗೆ ಪುಕ್ಕಟೆ ಕರೆಂಟ್ ಕೊಡುತ್ತಿದ್ದೇವೆಂಬುದಕ್ಕೆ ನಾವೇನು 24 ಗಂಟೆ ಕರೆಂಟ್ ಕೊಡುತ್ತಿಲ್ಲ. ಸುಮಾರು 4 ರಿಂದ 5 ಗಂಟೆಯವರೆಗೆ ಮಾತ್ರ ಪಂಪ್‌ಸೆಟ್‌ಗಳಿಗೆ ಕರೆಂಟ್ ಕೊಡಲಾಗುತ್ತದೆ. ಉಳಿದ ಅವಧಿಯಲ್ಲಿ ಪಂಪ್‌ಸೆಟ್‌ಗಳು ಓಡುವುದಿಲ್ಲ. ಆದರೆ ಎಲ್ಲಾ ತೆಗೆದುಕೊಂಡು ಹೋಗಿ ಬಂದು ಏನೋ ಮಾಡಿದರು ಎಂದು ಒಂದು ಗಾದೆ ನಮ್ಮ ಕಡೆ ಇದೆ. ಮಾನ್ಯ ಉದಾಸಿಯವರೆ, ನಿಮಗೆ ಗೊತ್ತಿದೆಯಾ? ನೀವು ಬಹಳ ಗಾದೆಗಳನ್ನು ನಮ್ಮ ಜೊತೆಯಲ್ಲಿ ಇದ್ದಾಗ ಹೇಳುತ್ತಿದ್ದೀರಿ. ವಯಸ್ಸಾಗಿರುವುದರಿಂದ ಎಲ್ಲಾ ಮರೆತಿರುತ್ತೀರಾ ? ಮಾನ್ಯ ಶ್ರೀ ಶೈಲಪ್ಪ ಬಿದರೂರವರೆ, ನೀವು ಜಾಸ್ತಿ ಗಾದೆ ಮಾತುಗಳನ್ನು ಹೇಳುತ್ತಿದ್ದೀರಿ.

ಶ್ರೀ ಎಂ.ಬಿ. ಪಾಟೀಲ್ :- ತಾವು ಹೇಳುತ್ತಿರುವ ಯುಕೆಪಿ Central Assistance Project ಎಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ :- Central Government ದಿಂದ ದುಡ್ಡು ಕೊಡುವ project ಗಳಿಗೆ ಇಲ್ಲಿಯವರೆಗೆ ನಮ್ಮ UKP ಗೆ 10-11 ಸಾವಿರ ಕೋಟಿ ರೂ.ಗಳು ಖರ್ಚಾಗಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ 4000 ಕೋಟಿ

ರೂ. ಗಳವರೆಗೆ ಬಂದಿದೆ. ಕೇಂದ್ರ ಸರ್ಕಾರದವರು assistance ಕೊಟ್ಟರೆ ಇವರದು ಮುಂದಿನ ಕೆಲಸ ಅದು ನಿಜ.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ, ಮಾನ್ಯ ಎಂ.ಬಿ. ಪಾಟೀಲ್‌ರು ಬಹಳ ಹೇಳುವುದರಿಂದ ನಾವು ಕೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ :–ನೀವು ಇಬ್ಬರು ಒಳ್ಳೆಯ friends ಅಲ್ಲವೇ?

ಶ್ರೀ ಗೋವಿಂದ ಎಂ. ಕಾರಜೋಳ :– ಇಬ್ಬರು ಒಳ್ಳೆಯ friends. 1964 ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲು ಹಾಕಿದರು. 1994 ರವರೆಗೆ 500 ಕೋಟಿ ರೂ.ಗಳನ್ನು ಖರ್ಚು ಮಾಡಲಿಲ್ಲ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ :– ಯಾವ್ಯಾವ ವರ್ಷ ಎಷ್ಟೆಷ್ಟು ಖರ್ಚಾಗಿದೆ ಎಂಬ ಬಗ್ಗೆ ಒಂದು white paper publish ಮಾಡಿ ಬಿಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :– ಏಕೆಂದರೆ, ಎಂ.ಬಿ. ಪಾಟೀಲರು ಬಹಳ ಪವರ್‌ಫುಲ್ ಎಂ.ಎಲ್.ಎ.ಯವರು ಮತ್ತು ಅಂದಿನ ಮುಖ್ಯಮಂತ್ರಿಗಳಿಗೆ ಬಹಳ ಹತ್ತಿರದವರು ಮತ್ತು ನೀರಾವರಿ ಮಂತ್ರಿಗಳಿಗೆ ಹತ್ತಿರದವರು. ನಿಮ್ಮ ಸರ್ಕಾರ ಇದ್ದಾಗ 100 ಕೋಟಿ ರೂ.ಗಳಿಗೆ ಕೆರೆ ತುಂಬುವ ಯೋಜನೆಗೆ ಅಪ್ರೂವಲ್ ನಿಮ್ಮಿಂದ ಮಾಡಿಸುವುದಕ್ಕಾಗಲಿಲ್ಲ.

ಶ್ರೀ ಎಂ.ಬಿ. ಪಾಟೀಲ್ :– ಆಗ ಏನು ಪರಿಸ್ಥಿತಿ ಇತ್ತು ಅದು ನಿಮಗೂ ಗೊತ್ತಿದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :– 100 ಕೋಟಿ ರೂ.ಗಳ ಹಣವನ್ನು ನಿಮಗೆ ಕೊಡಿಸುವುದಕ್ಕಾಗಲಿಲ್ಲ. ಏನಾದರೂ development works ತೆಗೆದುಕೊಂಡಿದ್ದರೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಕೃಷ್ಣಾ ಕಣಿವೆ ಯೋಜನೆಗಳ ಬಗ್ಗೆ take off ಆಗಿದ್ದರೆ 1995 ರಿಂದ ಪ್ರಾರಂಭವಾಗಿರುವಂಥದ್ದು. ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಬೇಕು. 1995 ರಲ್ಲಿ ತಾವು ಹಣಕಾಸು ಮಂತ್ರಿಗಳಾಗಿದ್ದೀರಿ. ಆದಾದ ಮೇಲೆಯೇ UKP take off ಆಗಿರುವುದು ಪ್ರಾಮಾಣಿಕವಾಗಿ ಯಾರು

ಮಾಡಿದರು ಅಲ್ಲಿಂದಲೇ ಹೇಳಬೇಕಲ್ಲವೆ ? ಆವತ್ತಿನಿಂದ ಇವತ್ತಿನವರೆಗೂ ಸಾಕಷ್ಟು ಅನುದಾನ ಸಿಗುತ್ತಿದೆ. ಯೋಜನೆ ಪ್ರಾರಂಭವಾಗಿ ಮುಕ್ತಾಯ ಆಯಿತು. ಇನ್ನು ಎರಡನೆಯ ಹಂತದ 'ಬಿ' ಸ್ಕೀಂ ಗಳಿಗೆ 17,200 ಕೋಟಿ ರೂ.ಗಳನ್ನು ನಾವು ಖರ್ಚು ಮಾಡಲಿಕ್ಕೆ ಸರ್ಕಾರದಿಂದ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ಕೊಟ್ಟಿರುತ್ತೇವೆ. ಬರಿ ಬಜೆಟ್‌ನಲ್ಲಿ ಭಾಷಣ ಆಲ್ಲ.

ಶ್ರೀ ಎಂ.ಬಿ. ಪಾಟೀಲ್ :– UKP stage 3 ಗೆ ದುಡ್ಡು ಎಷ್ಟು ಇಟ್ಟಿದ್ದೀರಿ ಹೇಳಿ ಸ್ವಾಮಿ.

ಶ್ರೀ ಗೋವಿಂದ ಎಂ. ಕಾರಜೋಳ :– Upper Krishna Project ಗೆ 17,200 ಕೋಟಿ ರೂಪಾಯಿಗೆ ಆಡಳಿತ್ಮಾಕ ಒಪ್ಪಿಗೆಯನ್ನು ಕೊಟ್ಟಿದ್ದೇನೆ. ಈ ವರ್ಷ 10,000 ಕೋಟಿ ರೂ.ಗಳಿಗಿಂತ ಹೆಚ್ಚು ಹಣ ಇಟ್ಟಿರುತ್ತೇವೆ.

(ಗೊಂದಲ)

ಅಧ್ಯಕ್ಷರು :– ಅವರು ಉತ್ತರ ಹೇಳಲಿ, ನೀವು ಏಕೆ ಎದ್ದು ನಿಲ್ಲುತ್ತೀರಿ.

ಶ್ರೀ ಗೋವಿಂದ ಎಂ. ಕಾರಜೋಳ :– ಜೋರಾಗಿ ಮಾತನಾಡಬೇಡಿ, ನೀವು ಇವತ್ತು ಕೆಣಕಿರುವುದರಿಂದ ಹೇಳಬೇಕಾಗುತ್ತದೆ.

ಶ್ರೀ ಎಂ.ಬಿ. ಪಾಟೀಲ್ :– ಇಡೀ state ಗೆ 10,000 ಕೋಟಿ ರೂ.ಗಳನ್ನು ಇಟ್ಟಿರುವುದು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :– ಅವರಿಗೆ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ :– ಕಾವೇರಿ ಕಣಿವೆ ಬಗ್ಗೆ ಇನ್ನು dispute ಬಗೆಹರಿದಿಲ್ಲ. ಕೃಷ್ಣಾ ಯೋಜನೆಯ 'ಬಿ' ಸ್ಕೀಂ ಬಗ್ಗೆ Central Water Commission ದಿಂದ ಮತ್ತು tribunal ದಿಂದ clear ಆಗಿರುವುದರಿಂದ ನಾವು 17,200 ಕೋಟಿ ರೂ.ಗಳನ್ನು ಇಟ್ಟಿರುತ್ತೇವೆ. ಮೇಜರ್ ಆಗಿ ಕೃಷ್ಣ ಕಣಿವೆ ಪ್ರಾಜೆಕ್ಟ್‌ಗೆ 90% ಹಣ ಹೋಗುತ್ತದೆ. ಬೇರೆ ಯಾವುದಕ್ಕೂ ಹೋಗುವುದಿಲ್ಲ. ಕಾವೇರಿ ಬೇಸಿನ್‌ದಲ್ಲಿ ಯಾವುದೇ ಹೊಸ ವರ್ಕ್ಸ್ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಕೃಷ್ಣಾ ಕಣಿವೆಯೊಳಗೆ ನಾವು ತೆಗೆದುಕೊಳ್ಳಬೇಕು. ಮಾನ್ಯ ಎಂ.ಬಿ. ಪಾಟೀಲರು ಬಹಳ ದಿವಸ ಈ ಮನೆಯ ಸದಸ್ಯರಾಗಿದ್ದರು. ಲೋಕಸಭಾ ಸದಸ್ಯರು ಆಗಿದ್ದವರು. ಮುಖ್ಯಮಂತ್ರಿಗಳಿಗೆ ಹತ್ತಿರದವರಾಗಿದ್ದವರು ಇದ್ದೀರಿ. ದಯವಿಟ್ಟು ನಿಮ್ಮ ಕಾಲದಲ್ಲಿ ಎಷ್ಟು ಹಣ

ಬಂದಿದೆ ಅಂಕಿ ಅಂಶಗಳನ್ನು ಹೇಳಿಬಿಡಿ. ನಾನು ಕುಳಿತುಕೊಂಡು ಕೇಳಿ ಬಿಡುತ್ತೇನೆ!

ಶ್ರೀ ಎಂ.ಬಿ. ಪಾಟೀಲ್ :– ಸನ್ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ನೀಡುವುದಾದರೆ ಒಂದು ಮಾತನ್ನು ಹೇಳುತ್ತೇನೆ. ಇವರು total resource to be mobalised is Rs. 10,500 crore for the entire state ಎಂದು ಹೇಳಿದ್ದಾರೆ. 2012–13 outlay ಏನಿದೆ ಎಂದರೆ; Irrigation and Flood Control plus minor irrigation is Rs. 7,597 crore. UKP Stage 3 ಗೆ Central Assistance ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಯುಕೆಪಿಗೆ ಅವರು ಸ್ಪೆಸಿಪಿಕ ಆಗಿ ದುಡ್ಡು ಕಾಯ್ದಿರಿಸಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ :– ಈಗ ಇರುವುದು ಎರಡು ಯೋಜನೆಗಳು ಮಾತ್ರ. ಕಾವೇರಿ ಬೇಸಿನ್‌ದಲ್ಲಿ ಎಲ್ಲಿ Fresh work ತೆಗೆದುಕೊಳ್ಳುತ್ತೀರಿ? ಅಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. UKP ಯಲ್ಲಿಯೇ work ತೆಗೆದುಕೊಳ್ಳಬೇಕು. ನಾವು ಅಲ್ಲಿಯೇ ದುಡ್ಡು ಖರ್ಚು ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಹಾಗಾದರೆ ನಾವು ಸಾಯುತ್ತೇವೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ :– ಮಾನ್ಯ ಕಾರಜೋಳರವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ನಾನು ಒಂದು ಮಾಹಿತಿಯನ್ನು ಅವರಿಂದ ಬಯಸುತ್ತೇನೆ. ಕಾವೇರಿ ಬೇಸಿನ್‌ನಲ್ಲಿ ಯಾವುದೇ ಹೊಸ Project ತೆಗೆದುಕೊಳ್ಳಬಾರದು ಎನ್ನುವುದಾದರೆ surplus water ಬಗ್ಗೆ 10 ವರ್ಷದ ಮಾಹಿತಿಯನ್ನು ನೀವೇ ಒದಗಿಸಿರುತ್ತೀರಿ. ನಿನ್ನೆ ಮಾನ್ಯ ಜಲಸಂಪನ್ಮೂಲ ಸಚಿವರು ಒದಗಿಸಿರುವ ಮಾಹಿತಿ ಆಧಾರದ ಮೇಲೆ ನಾನು ಮಾತನಾಡುತ್ತಿರುವುದು. Surplus water ನ್ನು ತಮಿಳುನಾಡಿಗೆ ಪ್ರತಿ ವರ್ಷ ನಾವು release ಮಾಡುತ್ತಿರುವುದು ಎಷ್ಟು ಎನ್ನುವುದು ನಿಮ್ಮ ದಾಖಲೆಯಲ್ಲಿದೆ. ಆ surplus water ನ್ನು use ಮಾಡುವುದಕ್ಕೆ ನಾವು ಸ್ಕೀಂ ಮಾಡಬಾರದು ಎನ್ನುವ ತಪ್ಪು ಸಂದೇಶ ತಮ್ಮಿಂದ ಹೋಗಬಾರದೆನ್ನುವ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ :– ಕಾವೇರಿ ಬೇಸಿನ್ ಬಗ್ಗೆ ಆಮೇಲೆ ಚರ್ಚೆ ಮಾಡೋಣ ಬಿಡಿ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ನಾನು ಈ ಕಾವೇರಿ ಬೇಸಿನ್ ಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾವು ಕೋರ್ಟಿನಲ್ಲಿ ಅರ್ಜಿ ಹಾಕಿಕೊಂಡಿದ್ದೇವೆ. ನಾವು ಕಾವೇರಿ ನ್ಯಾಯಾಧೀಕರಣದ final award ಪ್ರಶ್ನೆ ಮಾಡಿದ್ದೇವೆ. ಅದು Supreme court ನಲ್ಲಿದೆ. Tribunal ಮುಂದೆ clarificatory ಅರ್ಜಿ ಇದೆ. ಹೀಗಾಗಿ ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಹಕ್ಕಿಗೆ ನಾವು ಹೋರಾಟ ಮಾಡಬೇಕು. Legally and Politically we have been doing it. The government has to do it. ಅದಕ್ಕೆ ನಾವೆಲ್ಲಾ ಸಪೋರ್ಟ್ ಮಾಡುತ್ತೇವೆ. ಈಗ UKP ಯಲ್ಲಿ ನಿಮಗೆ ಕೃಷ್ಣಾ ನ್ಯಾಯಾಧೀಕರಣದ ತೀರ್ಪು ಕೊಟ್ಟಿದೆ. ನಿಮಗೆ ಅಲ್ಲಿ ನಾಲೆ ತೆಗೆಯಬೇಡಿ. ಏನು ಮಾಡಬೇಡಿ ಎಂದು ಹೇಳಿಲ್ಲ. ಆದ್ದರಿಂದ ನೀವು ಅಲ್ಲಿರುವ ಎಲ್ಲ ಕೆಲಸವನ್ನು ಮುಗಿಸಿ ಬಿಡಿ. ನಮಗೆ 130 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಿ ಎಂದು ಹೇಳಿದ್ದಾರೆ. ಅದು ಅಷ್ಟೇ ತಾನೆ, ನಾನು ಅದನ್ನೇ ಹೇಳುತ್ತಿದ್ದೇನೆ. ನಾನು ನಿಮ್ಮ ಪರವಾಗಿ ವಕಾಲತ್ತು ಹಾಕಿ ಮಾತನಾಡಿದರೂ ನೀವು ಬೇಡವೆಂದು ಹೇಳುತ್ತೀರಿ. ನೀವು ಉಮೇಶ್ ಕತ್ತಿಯವರ ಮಾತನ್ನು ಕೇಳಬೇಡಿ. ಅವರು ಕಬ್ಬು ಬೆಳೆದುಕೊಂಡು ಚೆನ್ನಾಗಿದ್ದಾರೆ.

ಶ್ರೀ ಉಮೇಶ ವಿ. ಕತ್ತಿ :– ನೀವು ನಮ್ಮ ಜೊತೆ ಇರುವಾಗ ಒಳ್ಳೇಯರಾಗಿದ್ದೀರಿ. ಅಭಿವೃದ್ಧಿ ಪರವಾಗಿ ಇದ್ದಿರಿ. ಈಗ ಕೆಟ್ಟು ಬಿಟ್ಟದ್ದೀರಿ, ನಮಗೂ ಅರ್ಥವಾಗುತ್ತಿಲ್ಲ!

ಶ್ರೀ ಸಿದ್ದರಾಮಯ್ಯ :– ಅವರು ಕಬ್ಬು ಬೆಳೆದುಕೊಳ್ಳುತ್ತಾರೆ. ಸಕ್ಕರೆ ಕಾರ್ಖಾನೆ ಮಾಡಿಕೊಂಡಿದ್ದಾರೆ. ಪಾಪ ನಿಮಗೆ ಏನೂ ಇಲ್ಲ. ಬಿಜಾಪೂರ, ಗುಲ್ಬರ್ಗಾ, ಬಾಗಲಕೋಟೆ, ಬೀದರ್, ರಾಯಚೂರು, ಯಾದಗಿರಿ ಕಡೆ ಇರುವ ಆ ಭಾಗದ ಜನ ಎಲ್ಲಾ ಗುಳೆ ಹೋಗುತ್ತಿದ್ದಾರೆ.

ಶ್ರೀ ಶ್ರೀಶೈಲಪ್ಪ ಬಿದರೂರ :– ಕಾರಜೋಳ ಭಾಗದಲ್ಲಿ ಕೂಡ ಕಬ್ಬು ಬೆಳೆಯುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :– ಕಬ್ಬು ಬೆಳೆಯುತ್ತಿದ್ದಾರಾ ? ಹಾಗಾದರೆ ಆ ಜಿಲ್ಲೆಯವರು ಎಲ್ಲಾ ಅನುಕೂಲವಾಗಿದ್ದಾರಾ ? ನಾನು ನಿಮ್ಮ ದಾಳಿಂಬೆ ತೋಟವನ್ನು ನೋಡಿದ್ದೇನೆ. ನೀವು ತನುವಾಗಿದ್ದೀರಿ, ಪಾಪ ಏಕೆ ಅವರಿಗೆ ಹೇಳುತ್ತಿದ್ದೀರಿ ? ನಾನು ಒಂದು ದಿವಸ ಅವರ ತೋಟದಲ್ಲಿ ಹೋಗಿ ಮಲಗಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ :- ಆಗ ಒಳ್ಳೆಯವರಾಗಿದ್ದೀರಿ, ನೀವು ಈಗ ತೋಟದಲ್ಲಿ ಮಲಗುವ ಪರಿಸ್ಥಿತಿಯಲ್ಲಿ ಇಲ್ಲ!

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ಏಕೆ ನಾನು ಹೇಳುತ್ತಿದ್ದೇನೆಂದರೆ, ನಾವು ನೀರಾವರಿಯನ್ನು priority ಮೇಲೆ ತೆಗೆದುಕೊಂಡು ಮುಗಿಸಿ ಬಿಡೋಣ. ಪವರ್ ಮತ್ತು ಕುಡಿಯುವ ನೀರು ನಮ್ಮ ಪ್ರೈಯಾರಿಟಿ, ಮೂಲಭೂತ ಸೌಕರ್ಯ ನಮ್ಮ ಪ್ರೈಯಾರಿಟಿ ಇರುವುದರಿಂದ ಮಾಡಿ ಮುಗಿಸೋಣ. You spend more money on that. But there should be outlay and outcome. ಗೆ ಒಂದಕ್ಕೊಂದು ಸಂಬಂಧ ಇರಬೇಕು. ಅಷ್ಟೆ ನೀವು ಅದನ್ನು ನೋಡಿಕೊಳ್ಳಿ ಇಷ್ಟೆಲ್ಲಾ ದುಡ್ಡು ಖರ್ಚು ಮಾಡುತ್ತೇವೆ. ಬಡತನವೇ ಹೋಗದಿದ್ದರೆ ಹೇಗೆ ? 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕದಲ್ಲಿ ಬಡತನ 12% ಗೆ ಇಳಿಯಬೇಕೆಂದು ಹೇಳಿದ್ದರು. ಈಗ ಮಾರ್ಚ್ ಕೊನೆಗೆ 11ನೇ ಪಂಚ ವಾರ್ಷಿಕ ಯೋಜನೆ ಮುಗಿಯುತ್ತಿದೆ. ಬಡತನ ಎಷ್ಟು ಇಳಿದಿದೆ ? ಇನ್ನೂ 25% ಬಡತನ ಇದೆ. 12%ಗೆ ಇಳಿಸಬೇಕೆಂದು ಹೇಳಿತ್ತು. 11th Five Year Plan is going to complete by March end. ಇನ್ನು 12ನೇ ಪಂಚವಾರ್ಷಿಕ ಯೋಜನೆ ಶುರುವಾಗುತ್ತದೆ. ಎಷ್ಟು ದುಡ್ಡನ್ನು ಖರ್ಚು ಮಾಡಿದ್ದೇವೆ? 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರೆ ಬಡತನ ಹೋಗೇ ಇಲ್ಲ. ಅಲ್ಲೇ ಇದೆ. ಮುಂದಿನ ವರ್ಷಕ್ಕೆ, 12ನೇ ಪಂಚವಾರ್ಷಿಕ ಯೋಜನೆಗೆ 1 ಲಕ್ಷ 95 ಸಾವಿರ ಕೋಟಿ resources ಅನ್ನು ಮಾಡಿಕೊಳ್ಳಬೇಕೆಂದು plan ನಲ್ಲಿ ಹೇಳಲಾಗಿದೆ. ಏಪ್ರಿಲ್‌ನಲ್ಲಿ ಶುರುವಾಗುತ್ತದೆ. ಬಡತನ ಅಲ್ಲೇ ಇದೆ. ಹೋಗುವುದೇ ಇಲ್ಲ. Education ಗೆ ಸಂಬಂಧಪಟ್ಟಂತೆ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದೇವೆ. Agriculture ಗೆ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಕರ್ನಾಟಕದಲ್ಲಿ ಹಳ್ಳಿಗಳಲ್ಲಿ ಎಷ್ಟು ಜನ ವಾಸ ಮಾಡುತ್ತಿದ್ದಾರೆ. ಪಟ್ಟಣದಲ್ಲಿ ಎಷ್ಟು ಜನ ವಾಸ ಮಾಡುತ್ತಿದ್ದಾರೆ ಎನ್ನುವುದು ಗೊತ್ತಿದೆಯೇ ಮಾನ್ಯ ಉಮೇಶ್ ಕತ್ತಿಯವರೆ? ಅದು ಕಡಿಮೆಯಾಗುತ್ತಿದೆಯೋ ಅಥವಾ ಹೆಚ್ಚಾಗುತ್ತಿದೆಯೋ ಮಾನ್ಯ ಉದಾಸಿಯವರೆ? ಹಳ್ಳಿಯಲ್ಲಿ ಕಡಿಮೆಯಾಗುತ್ತಿದೆ ಏಕೆ? ಅಲ್ಲಿ ಅಭಿವೃದ್ಧಿ ಜಾಸ್ತಿ ಆಯಿತು ಎಂದೇ ? ಹಳ್ಳಿಯಲ್ಲಿ ಅಭಿವೃದ್ಧಿ ಜಾಸ್ತಿಯಾಯಿತು. ಕೃಷಿ ಉತ್ಪನ್ನ ಜಾಸ್ತಿಯಾಯತು. ತಲಾದಾಯ ಜಾಸ್ತಿಯಾಯಿತು. ಬದುಕುವುದಕ್ಕೆ ಎಲ್ಲಾ ಸವಲತ್ತುಗಳು ಸಿಕ್ಕಿವೆ ಎಂದು ಹಳ್ಳಿಗಳನ್ನು ಬಿಟ್ಟು ಪಟ್ಟಣಕ್ಕೆ ಬರುತ್ತಿದ್ದಾರೆಯೇ ? ಕರ್ನಾಟಕದ ಬಗ್ಗೆ

ಹೇಳಿ ಸ್ವಾಮಿ. ಕರ್ನಾಟಕ ಬಿಟ್ಟು ಇಡೀ ದೇಶದ ಬಗ್ಗೆ ಬೇಡ. Why do you take shelter under the national economy ? ಈ ರೀತಿ ಆದರೆ ಕರ್ನಾಟಕವನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ ನಾನು ಹೇಳುವುದೇನೆಂದರೆ, see we are part and parcel of the county. I am one of the citizen of the country. it is a different aspect. ಆದರೆ ನಾವು ಕರ್ನಾಟಕವನ್ನೂ ಅಭಿವೃದ್ಧಿ ಮಾಡಬೇಕಲ್ಲವೇ ? ಅಭಿವೃದ್ಧಿ ಮಾಡಿದರೆ ತಾನೇ National average ಜಾಸ್ತಿಯಾಗುವುದು. ಕರ್ನಾಟಕದ ಅಭಿವೃದ್ಧಿಯೂ ಸೇರಿಕೊಂಡರೆ National average ಜಾಸ್ತಿಯಾಗುವುದು. Literacy ಪ್ರಮಾಣ ಹೆಚ್ಚಾಗುವುದು. Mortality percentage ಕಡಿಮೆಯಾಗುವುದು. ಇವೆಲ್ಲಾ ಹೋಗಬೇಕಾದರೆ, ಚೆನ್ನಾಗಿ ಮಾಡಿದರೆ ಅಲ್ಲವೆ ಮಾನ್ಯ ಉದಾಸಿಯವರೆ ? ನಾವು ಏನೂ ಮಾಡದೇ ಅಲ್ಲಿ ಆಗಲಿ ಎಂದು ಸುಮ್ಮನೆ ಇದ್ದರೆ ಹೇಗೆ ? ಅದಕ್ಕೊಂದು ಬೇರೆ ದೇಶ ಇದೆಯೇ? ಎಲ್ಲಾ ರಾಜ್ಯಗಳಲ್ಲೂ ಕೂಡ ಅವರವರ ರಾಜ್ಯ ಅಭಿವೃದ್ಧಿಪಡಿಸಿದರೆ National Average ಹೆಚ್ಚಾಗುತ್ತದೆ. Literacy Percentage National Level ನಲ್ಲಿ ಹೆಚ್ಚಾಗುತ್ತದೆ. National Food Production ಅಂದರೆ Central Government ನವರು ಭತ್ತ ಬೆಳೆಯುತ್ತಾರೆಯೇ? ನಾವೆಲ್ಲಾ ಬೆಳೆಯುವುದನ್ನು ಸೇರಿಸಿಕೊಂಡು Food Production in national level ನಲ್ಲಿ ಎಂದು ಹೇಳುವುದು.

ನಾನು ಏನು ಹೇಳುತ್ತಿದ್ದೇನೆಂದರೆ, ಇವತ್ತು ನಾವು ಇಷ್ಟೊಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೆ Literacy ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ. ಬಡತನ ನಿರೀಕ್ಷಿತ ಮಟ್ಟದಲ್ಲಿ ಕೆಳಗೆ ಇಳಿಯುತ್ತಿಲ್ಲ. ಉದ್ಯೋಗ ನಿರೀಕ್ಷಿತ ಮಟ್ಟದಲ್ಲಿ ಸೃಷ್ಟಿಯಾಗುತ್ತಿಲ್ಲ. That's why I am mentioning all these aspects. ಒಂದು ಕಾಲದಲ್ಲಿ 78% ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದರು. 20–22% ಪಟ್ಟಣಗಳಲ್ಲಿ ಇದ್ದರು. Today 62% in Karnataka, whereas all India level 68%. All India Level ನಲ್ಲಿ ಮಾನ್ಯ ಉದಾಸಿಯವರೆ, ಶೇಕಡ 68 ರಷ್ಟು ಹಳ್ಳಿಗಾಡಿನಲ್ಲಿ ಇದ್ದಾರೆ. ಕರ್ನಾಟಕ ರಾಜ್ಯದಲ್ಲಿ It has been reduced to 62% Am i correct Mr. Udasi, Mr. Katthi ಈಗಲೂ ಶೇಕಡ 62 ಇಲ್ಲ 61.8% ಇದೆ. ಜನರು ಏಕೆ

ಹಳ್ಳಿಯನ್ನು ಬಿಡುತ್ತಿದ್ದಾರೆ. ನಾವು ಒಂದು ಕಡೆ ಭಾಷಣ ಮಾಡುತ್ತಿರುತ್ತೇವೆ. ಹಳ್ಳಿ ಜನರು ಹಳ್ಳಿಯಲ್ಲಿ ಇರುವಂತೆ ಮಾಡಬೇಕು. ಹಳ್ಳಿಯಿಂದ ವಲಸೆ ಹೋಗುವುದನ್ನು ತಪ್ಪಿಸಬೇಕು. ಪಟ್ಟಣಗಳಲ್ಲಿ Slum ಗಳು develop ಆಗುತ್ತಿವೆ. ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದೆ. ಬೇರೆ ಬೇರೆ ವಸತಿ ಸೌಕರ್ಯಕ್ಕೆ ತೊಂದರೆಯಾಗುತ್ತಿದೆ. Food ಸಮಸ್ಯೆಯಾಗುತ್ತಿದೆ. Infrastructure ಗೆ ತೊಂದರೆಯಾಗುತ್ತಿದೆ. ಮಾಲಿನ್ಯ ಆಗುತ್ತಿದೆ. ಎಲ್ಲೋ ಒಂದು ಕಡೆ ಈ ರೀತಿ ಭಾಷಣ ಮಾಡುತ್ತೇವೆ. ಇನ್ನೊಂದು ಕಡೆ ಹಳ್ಳಿಯಿಂದ ವಲಸೆ ಹೋಗುತ್ತಿದ್ದಾರೆ. ಹಳ್ಳಿಯಿಂದ ಬೆಂಗಳೂರಿಗೆ ವಲಸೆ ಹೋಗುವುದು It is steadily increasing, particularly in Karnataka. ಹಳ್ಳಿಯಲ್ಲಿ ವಾಸ ಮಾಡತಕ್ಕಂಥ ಜನ ಕಡಿಮೆಯಾಗುತ್ತಿದ್ದಾರೆ. At one point of time, it was 78% Today it is 61.8% Why ?

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರಾದ ಮಾನ್ಯ ಎನ್. ಯೋಗೀಶ್ ಭಟ್‌ರವರು ಅಧ್ಯಕ್ಷ ಪೀಠವನ್ನು ಆಲಂಕರಿಸಿದರು.)

1970ರಲ್ಲಿ ಒಬ್ಬರ holding hectare 3.2 ಇತ್ತು today it has been reduced to 1.63. In Karnataka it has been reduced to 1.63. ಆ ಜನರು ಬದುಕುವುದಕ್ಕೆ ಏನು ಮಾಡಿ ಕೊಡಬೇಕೋ ಅದನ್ನು ಮಾಡಿಕೊಡಬೇಕು. 1.63 average ಇದೆಯಲ್ಲಾ 10 ಹೆಕ್ಟೇರ್‌ಗಿಂತ ಜಾಸ್ತಿ ಇರುವವರು ಎಷ್ಟಿದ್ದಾರೆ. ಮಾನ್ಯ ಉದಾಸಿಯವರೆ ? ಬಹಳ ಕಡಿಮೆ Average 1.63 ಇರುವವರಿಗೆ ಮಾಡಬೇಕಲ್ಲವೇ ? 75.5 Lakh small and marginal holdings farmers ಇದ್ದಾರೆ. But ಇವರದ್ದೂ ಸೇರಿ total land ನಲ್ಲಿ ಎಷ್ಟಿದೆ ಅಂದರೆ 37% 10 acre and above ಇರುವವರು middle and big farmers 63%. Though their number is small, holding is more. That is the situation in Karnataka. ಒಣಬೇಸಾಯ ಮಾಡುವವರು 75% ಇದ್ದಾರೆ. ಇಷ್ಟೆಲ್ಲಾ ನಾವು ಖರ್ಚು ಮಾಡಿ ನೀರಾವರಿಗೆ ಎಷ್ಟು ಮಾಡಿದ್ದೇವೆ ? Total capacity ನಮಗೆ ಇರತಕ್ಕಂಥದ್ದು 45 ಲಕ್ಷ ಹೆಕ್ಟೇರ್. Am I correct ? 25 ಲಕ್ಷ Medium and Large irrigation, Minor Irrigation 9-10 ಲಕ್ಷ ಹೆಕ್ಟೇರ್. ಕರ್ನಾಟಕದಲ್ಲಿ ಒಟ್ಟು 45 ಲಕ್ಷ ಹೆಕ್ಟೇರ್‌ಗೆ ಗರಿಷ್ಠ ನೀರು ಕೊಡಲು ಸಾಧ್ಯವಾಗಿದೆ. So far, we could able

to give water both from Minor, Major and Medium all put together only 31 lakh hectare. How can we improve the production ? we have been telling this since 3-4 years. ಇದು ಒಂದು ಕಡೆ. ಇನ್ನೊಂದು ಕಡೆ productivity ಹೆಚ್ಚಾಗಬೇಕಲ್ಲವೇ ? ಮಾನ್ಯ ಯಡಿಯೂರಪ್ಪನವರು ಸಾವಯವ ಕೃಷಿ ಭೂ ಚೇತನ ಕೃಷಿ, ಸುವರ್ಣ ಭೂಮಿ ಎಲ್ಲಾ programmes announce ಮಾಡಿದ್ದಾರೆ. What is the impact of it ? What is the return from all these programmes ? Negative growth ಅಂದ ಮೇಲೆ What is the return ? ಈ ಬಾರಿ ಬಜೆಟ್‌ನಲ್ಲಿ ಭೂ ಚೇತನ ಯೋಜನಯಡಿಯಲ್ಲಿ dry land cultivation ನಲ್ಲಿ 30 ಲಕ್ಷದಿಂದ 50 ಲಕ್ಷ ಹೆಕ್ಟೇರ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಹೋದ ವರ್ಷ 30 ಲಕ್ಷ ಹೆಕ್ಟೇರ್ ಮಾಡಿದ್ದೇವು. ಮುಂದಿನ ವರ್ಷ 50 ಲಕ್ಷ ಃಹೆಕ್ಟೇರ್ ಮಾಡುತ್ತೇವೆ. But food production is falling. ಆಹಾರದ ಉತ್ಪಾದನೆ ಬಿದ್ದು ಹೋಗಿದೆ. I don't agree with the figures mentioned in the Economic Survey 124 ಲಕ್ಷ ಟನ್ ಬರುತ್ತದೆ ಎಂದು ಹೇಳಿದ್ದಾರಲ್ಲಾ. I don't agree. ಏಕೆಂದರೆ ಮುಂಗಾರು 71 ಲಕ್ಷದಲ್ಲಿ 5 ಲಕ್ಷ ಹೆಕ್ಟೇರ್ ಬಿತ್ತನೆಯಾಗಲಿಲ್ಲ. ಹಿಂಗಾರು 36 ಲಕ್ಷದಲ್ಲಿ 9 ಲಕ್ಷ ಆಗಲಿಲ್ಲ. ಇವರೆಡೂ ಸೇರಿದರೆ ಎಷ್ಟು ಆಯಿತು ? 14 ಲಕ್ಷ ಆಯಿತು. ಮುಂಗಾರಿನಲ್ಲಿ 1 ಲಕ್ಷ ಹೆಕ್ಟೇರ್‌ನಲ್ಲಿ 22 ಲಕ್ಷ ಟನ್ ಬೆಳೆಯು ಒಣಗಿ ಹೋಯಿತು. 12 ಲಕ್ಷ ಹೆಕ್ಟೇರ್‌ನಲ್ಲಿ ಹಿಂಗಾರಿನಲ್ಲಿ ಒಣಗಿ ಹೋಯಿತು. ತೋಟದ ಬೆಳೆಗಳು 2.5 ಲಕ್ಷ ಹೆಕ್ಟೇರ್ ನಲ್ಲಿ ಅವೂ ಸಹ ಒಣಗಿಹೋದವು. ಹಾಗಾದರೆ food production 124 ಲಕ್ಷ ಟನ್ ಹೇಗೆ ಬರುತ್ತದೆ ? ಇಷ್ಟೆಲ್ಲಾ ಒಣಗಿ ಹೋದ ಮೇಲೆ ಅದು ಹೇಗೆ ಬರುತ್ತದೆ. ? You are expecting that for the year 2011-12, food production will be 124 lakh tonnes of food grains. ಅದನ್ನೆ ನಾನು ಹೇಳುತ್ತಿರುವುದು. They are expecting ಅಂದರೆ expected ಅಂತ ತಾನೇ ? ಡಾ॥ ಶರಣ ಪ್ರಕಾಶರವರೆ, ನಾನು ಹೇಳುತ್ತಿರುವ ಇಂಗ್ಲೀಷ್ ಸರಿಯಿಲ್ಲವೇ? ಇದು ಬರಿ ಅಂದಾಜುಗಳು. ಕನ್ನಡದಲ್ಲಿಯೇ ಹೇಳಿಬಿಡೋಣ ಈ ತಾಪತ್ರಯವೇ ಬೇಡ. ಇದು ನಿರೀಕ್ಷೆ ಆಗಿದೆ. ಇವರು 130 ಲಕ್ಷ ಮೆಟ್ರಿಕ್ ಟನ್ ಗುರಿ ಇಟ್ಟುಕೊಂಡಿದ್ದಾರೆ. ಅದು 124 ಲಕ್ಷ ಟನ್ ಆಗುತ್ತದೆ ಎಂದು Economic Surveyನಲ್ಲಿ ಹೇಳಿದ್ದಾರೆ. ಅದು ಹೇಗೆ ಆಗುತ್ತದೆ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :– 4 ಲಕ್ಷ ಟನ್ ಉತ್ಪಾದನೆಯಾಗುತ್ತದೆ ಎಂದು ಅಂದಾಜಿಸಲಾಗಿದೆ. ಅದು ಆಗದೆ ಇದ್ದರೆ ಇವತ್ತು ಬೆಲೆಗಳು ಗಗನಕ್ಕೆ ಹೋಗಬೇಕಾಗಿತ್ತಲ್ಲ. ತೊಗರಿ ಬೆಲೆ, ಭತ್ತದ ಬೆಲೆ, ಈರುಳ್ಳಿಯ ಬೆಲೆ ಇರಬಹುದು. ಆಲೂಗಡ್ಡೆ ಇರಬಹುದು.

ಶ್ರೀ ಸಿದ್ದರಾಮಯ್ಯ :– ನಾನು 130 ಲಕ್ಷ ಟನ್ ಆಗಲಿ ಎಂದೇ ಆಸೆ ಪಡುವವನು.

ಶ್ರೀ ಉಮೇಶ ವಿ. ಕತ್ತಿ :– ಉತ್ಪಾದನೆಯಾಗಿರುವ ಕಾರಣದಿಂದಾಗಿಯೇ ಬೆಲೆಗಳು ಕುಸಿಯುತ್ತಿರುವುದು ಕಾಣುತ್ತಿದೆ.

Sri Siddaramaiah :- No I want 140 lakh tonnes.

ಶ್ರೀ ಉಮೇಶ್ ವಿ. ಕತ್ತಿ :– ನಾವು ಮತ್ತು ನೀವೆಲ್ಲರೂ ಸೇರಿಕೊಂಡು ದೇವರಲ್ಲಿ 140 ಲಕ್ಷ ಟನ್ ಆಗಲಿ ಎಂದು ಬೇಡಿಕೊಳ್ಳೋಣ. ಬರಗಾಲದ ಛಾಯೆ ಇರುವಂತಹ ಸಂದರ್ಭದಲ್ಲಿಯೂ ಸರ್ಕಾರದ ಸುವರ್ಣ ಭೂಮಿ ಇರಬಹುದು. ಭೂಚೇತನಾ ಕಾರ್ಯಕ್ರಮ ಇರಬಹುದು. ಇದರೆಲ್ಲದರ ಫಲವಾಗಿ 124 ಲಕ್ಷ ಟನ್ ಉತ್ಪಾದನೆಯಾಗುತ್ತದೆ. ಎಂದು ಅಂದಾಜು ಮಾಡಲಾಗಿದೆ. ಆ ಗುರಿಯನ್ನು ನಾವು ಮುಟ್ಟುತ್ತೇವೆ. ಇದೇ ಕಾರಣದಿಂದಾಗಿಯೇ ಬೆಲೆಗಳು ಕುಸಿಯುತ್ತಿದೆ. ನೀವು ಹೇಳಿದ ಹಾಗೆ ಅದು ಆಗುವುದಿಲ್ಲ. ಸರಿಯಿಲ್ಲವೆಂದರೆ ಬೆಲೆಗಳು ಗಗನಕ್ಕೆ ಹೋಗಬೇಕಾಗಿತ್ತು. ಈ ಬೆಲೆಗಳು ಗಗನಕ್ಕು ಮುಟ್ಟುವಾಗಿಲ್ಲ. ಉತ್ಪಾದನೆ ಇಲ್ಲದೆ ಬೆಲೆಗಳು ಕುಸಿಯುತ್ತದೆಯೇ ?

Sri Siddaramiah :- I can understand your logic.

ಶ್ರೀ ಉಮೇಶ ವಿ. ಕತ್ತಿ :– Production Less ಇದೆ. Production Less ಆದಾಗ that is the growth.

ಶ್ರೀ ಸಿದ್ದರಾಮಯ್ಯ :– ಕಡಿಮೆಯಾಗುತ್ತದೆ ಎಂದು ನಾನು ಹೇಳಿರುವುದು, in view of all these deficiencies. ಮಳೆ ಬರಲಿಲ್ಲ. ಬೆಳೆ ಹಾನಿಯಾಯಿತು. ಬಿತ್ತನೆಯನ್ನು ಮಾಡಲಿಲ್ಲ. ಈ ಎಲ್ಲಾ ಕಾರಣಗಳಿಂದ 124 ಲಕ್ಷ ಟನ್ ಆಗುವುದು ಕೂಡ ಕಷ್ಟ ಎಂದು ಹೇಳುತ್ತಿದ್ದೇನೆಯೇ ಹೊರತು ಬೆಳೆ ಜಾಸ್ತಿ. ಅದರೆ ಸಂತೋಷ. 130 ಲಕ್ಷ ಟನ್ ಆದರೂ ಕೂಡ ಸಂತೋಷವಾಗುತ್ತದೆ. ಹಾಗೆಂದು ಹೇಳುತ್ತಾ ಕೃಷಿಯಲ್ಲಿ ಇನ್ನೊಂದು sentence ಏನು ಬರೆದಿದ್ದೀರೆಂದರೆ, ಕಳೆದ ವರ್ಷ 13.3% growth ಇದ್ದದ್ದು –2.9% ಗೆ ಬಂದಿದೆ. ಅದನ್ನು ಏತಕ್ಕಾಗಿ ಬರೆದಿದ್ದೀರಿ ? ಇದನ್ನು ತಾವು ಹೇಳಿ ? If such being the case ಹೇಗೆ ಈ ತರಹ ಬರೆದುಕೊಂಡಿದ್ದೀರಿ ? ಅದು

ಸುಳ್ಳೋ ತಪ್ಪೋ ? ಒಂದಕ್ಕೊಂದು ತಾಳೆ ಇರಬೇಕಲ್ಲಾ ಮಾನ್ಯ ಉದಾಸಿಯವರೆ ? ನೀವೆಲ್ಲಾ ವ್ಯಾಪಾರವನ್ನು ಮಾಡುತ್ತಿದ್ದವರು. ಈ ಬಗ್ಗೆ ನಿಮಗೆ ಗೊತ್ತಿದೆ. ನೀವು ಬಾಯಿಯಲ್ಲಿಯೇ ಲೆಕ್ಕವನ್ನು ಹೇಳಿಬಿಡುತ್ತೀರಿ. ನೀವು economics ಅನ್ನು ಓದದೇ ಹೇಳುತ್ತೀರಿ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :– ನೀವು ಪ್ರಶ್ನೆಯನ್ನು ಹೇಗೆ ಪ್ರಸ್ತಾಪ ಮಾಡುತ್ತಿದ್ದೀರೆಂದರೆ ಬೆಳೆಯ ಕುಸಿಯುತ್ತಿದೆ!

ಶ್ರೀ ಸಿದ್ದರಾಮಯ್ಯ :– ನಾನು ಈಗ ಅಲಿಗೇಷನ್ ಮಾಡಿದ್ದೀನಾ?

ಶ್ರೀ ಸಿ.ಎಂ. ಉದಾಸಿ :– Estimate ತಪ್ಪಾಗಿದೆ ಎಂದು ನೀವು ಹೇಳುತ್ತಿರಬೇಕಾದರೆ ಬೆಲೆ ಕುಸಿಯುತ್ತಿರಲಿಲ್ಲ. Demand ಗಿಂತ production ಕಡಿಮೆಯಾಗಿದ್ದರೆ expected ಗಿಂತ ಕಡಿಮೆ production ಅಗಿದ್ದರೆ ಬೆಲೆ ಜಾಸ್ತಿಯಾಗಬೇಕಾಗಿತ್ತು. ಎಂದು ಲಾಜಿಕ್‌ನಲ್ಲಿ ಅವರು ಮಾತನಾಡಿದರು. ನೀವು ಒಂದು ಸಲಹೆಯನ್ನು ಕೊಟ್ಟು ಮಾತನಾಡುತ್ತಿದ್ದೀರಿ. ಈ ಸಣ್ಣ ಹಿಡುವಳಿದಾರರ ಸಂಖ್ಯೆ, ವಿಭಾಗ ಮತ್ತು ತಲೆಮಾರಿನ ಸಂಖ್ಯೆಗಳು, ಹೆಚ್ಚಾದಾಗ ಜನಸಂಖ್ಯೆ ಬೆಳೆದಹಾಗೆ ಸಣ್ಣ ಹಿಡುವಳಿದಾರರ ಸಂಖ್ಯೆ ಹೆಚ್ಚಾಗುತ್ತದೆ. ಸಣ್ಣ ಹಿಡುವಳಿದಾರರ ಸಂಖ್ಯೆ ಹೆಚ್ಚಾದಾಗ ನಿಮ್ಮ ಸಲಹೆಯನ್ನು ಇದರಲ್ಲಿ ತರಬೇಕಲ್ಲ ? Economically ಅವರಿಗೆ viability ಆಗಬೇಕಲ್ಲ ? ಸಣ್ಣ ಹಿಡುವಳಿದಾರರು ಆರ್ಥಿಕವಾಗಿ ಲಾಭದಾಯವಾದಂತಹ ಬೆಳೆಯನ್ನು ಬೆಳೆಯಬೇಕಾದ ವಿಚಾರಕ್ಕೆ ಕ್ಷುಲ್ಲಕವಾದಂತಹ ಸಲಹೆ ಇರಬೇಕಲ್ಲಾ ? ಅದು ಏನು ಮಾಡುವುದಕ್ಕೆ ಸಾಧ್ಯವೆನ್ನುವಂತಹ ಪ್ರಶ್ನೆ ಇದೆ. ಜನರು ಇವತ್ತು ಏನಾಗುತ್ತಿದ್ದಾರೆ ? ಸಣ್ಣ ಹಿಡುವಳಿದಾರ economically vialability ಆಗದೆ ಇರುವುದರಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆಂದು ನನ್ನ ಭಾವನೆ ಇದೆ. ಇದು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ. ಇದು ಇಡೀ ದೇಶಾದ್ಯಂತ ನಡೆಯುತ್ತಿದೆ ಎಂಬ ಭಾವನೆಯಿಂದ ನಾವು ವ್ಯಕ್ತಮಾಡಿದ್ದೇವೆಯೇ ಹೊರತು ಬೇರೆ ಉದ್ದೇಶವಿಲ್ಲ. ಹೀಗೆ ಇರಬೇಕಾದಾಗ ಸಣ್ಣ ಹಿಡುವಳಿದಾರರನ್ನು ನಾವು ನೋಡುತ್ತಿದ್ದೇವೆ. ಇವತ್ತು ಅವರು 1.68 ಹೆಕ್ಟೇರ್ ಎಂದು ಹೇಳಿದ್ದೀರಿ. ಇದರ ಬಗ್ಗೆ ತಲಾವಾರು ಲೆಕ್ಕ ಹಾಕಿದರೆ 2 – 2.5 ಎಕರೆ ಜಮೀನು ಇದ್ದಂತಹ ರೈತ ಎರಡು ಎತ್ತುಗಳನ್ನು ಇಟ್ಟುಕೊಂಡು ಕೃಷಿ ಮಾಡುವುದಕ್ಕೆ ಹೊರಟರೆ 365 ದಿವಸದಲ್ಲಿ hardly 50 ದಿವಸ ಮಾತ್ರ ಎತ್ತುಗಳಿಗೆ ಕೆಲಸ ಇರುತ್ತದೆ. 50 ದಿವಸಗಳಿಗೆ ಎತ್ತುಗಳಿಗೆ ಕೆಲಸ ವಿದ್ದರೆ ಇನ್ನೂ 300 ದಿವಸಗಳು ಆ ಎತ್ತುಗಳನ್ನು ಸಾಕುವುದಕ್ಕೆ ಸಾಧ್ಯವೇ ? ಅದು Economically viability

ಆಗುತ್ತದೆಯೆ ಅನ್ನುವಂತಹ ಪ್ರಶ್ನೆನನ್ನ ಎದುರುಗಡೆ ಬರುತ್ತಿದೆ ಹೀಗಿರಬೇಕಾದಾಗ ನೀವು ಸಲಹೆ ಹೇಳುತ್ತೀರೆಂದು ನಾವು ನಿರೀಕ್ಷೆಯನ್ನು ಮಾಡುತ್ತಿದ್ದೇವು ಎಂದು ನಾವು ಹೇಳುವುದಕ್ಕೆ ಬಯಸುತ್ತೇನೆ.

Sri Siddaramaiah :- I understood your logic. Food production ಕಡಿಮೆಯಾಗಿದ್ದರೆ ಬೆಲೆ ಏರಬೇಕಾಗಿತ್ತು ಎಂದು ತಾವು ಹೇಳುತ್ತಿದ್ದೀರಿ. ಆದ್ದರಿಂದ food production ಬಗ್ಗೆ ನಾವು ಹೇಳಿರುವುದು ಹೆಚ್ಚು ಕಡಿಮೆ ಸರಿಯಾಗಿದೆ ಎಂದು ತಾವು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೆಂದು ತಾವು ಹೇಳಿದ ಮೇಲೆ, why there is so much reduction in agricultural growth? ಇದರ ಬಗ್ಗೆ ಉತ್ತರ ಹೇಳುವುದಕ್ಕೆ ನಿಮ್ಮ ಹತ್ತಿರ ಏನಾದರೂ ಇದೆಯಾ? ಅದು ಇಲ್ಲಾ. ಅದಕ್ಕಾಗಿ ನಾನು ಇವೆರಡನ್ನು ತಾಳೆ ಮಾಡಿ ಹೇಳುತ್ತಿದ್ದೇನೆ. ಹಾಗಾಗಿ ನಮ್ಮ GDP growth ಹೋದ ವರ್ಷ 8.9 ಇದ್ದದ್ದು, because of the low growth in agriculture it has been reduced to 6.4% ಎಂದು ನೀವು ಹೇಳಿದ್ದೀರಿ. ಇದನ್ನು ನಾನು ಹೇಳಿರುವುದಿಲ್ಲ. It has been said in the Economic survey made by Planning Department. ಅವರು ಹೇಳಿರುವುದನ್ನು ನಾನು ಹೇಳುತ್ತಿದ್ದೇನೆ. Agriculture ನಲ್ಲಿ ಏನಾಗಿದೆ ಎಂದರೆ ಅಲೋಕೇಷನ್‌ನಲ್ಲಿ ಬಹಳ ಕಡಿಮೆ ರಿಲೀಸ್ ಆಗಿದೆ ಖರ್ಚು ಬಹಳ ಕಡಿಮೆಯಾಗಿದೆ. ಆಲೋಕೇಷನ್ ಪ್ರತಿ ವರ್ಷವು ಕಡಿಮೆಯಾಗುತ್ತಾ ಹೋಗುತ್ತಿದೆ. ಈ ಸಾವಯವ ಕೃಷಿಗೆ ತಾವು 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ನೀವು ವಾರ್ಷಿಕ ಗುರಿಯನ್ನು 75 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ. 50 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ. ಅದರೆ ಖರ್ಚು ಆಗಿರುವುದು 25 ಕೋಟಿ ರೂಪಾಯಿಗಳು ಈ ರೀತಿಯಾದರೆ ಹೇಗೆ ಅದು ಅಭಿವೃದ್ಧಿಯಾಗುತ್ತದೆ ಹೇಳಿ. ನೀವು 200 ಕೋಟಿ ರೂಪಾಯಿಗಳಿಗೆ ಲೆಕ್ಕ ಹಾಕಿಕೊಂಡಿದ್ದೀರಿ. 50 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಆದರೆ 25 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಇದು ಹೇಗೆ ಆಗುತ್ತದೆ ? ಹಾಗೆಯೇ ಸುವರ್ಣಭೂಮಿ ಗೆ ಒಂದು ಸಾವಿರ ಕೋಟಿ ರೂಪಾಯಿಗಳು ಇಟ್ಟಿದ್ದು ಇದರಲ್ಲಿ 258 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಇದು ಹೇಗೆ ಆಗುತ್ತದೆ ? ಇವೆಲ್ಲವನ್ನು ಏತಕ್ಕಾಗಿ ಕೊಟ್ಟಿರುವುದು ಎಂದರೆ, food productivity ಜಾಸ್ತಿಯಾಗಲಿ ಎನ್ನುವ ಕಾರಣಕ್ಕಾಗಿ. ರೈತನು ಹೆಚ್ಚು ಬೆಲೆ ಸಿಗುವಂತಹ ಬೆಳೆಯನ್ನು

ಬೆಳೆಯಲಿ, deviation ಆಗಲಿ, traditional crops ಬಿಟ್ಟು ಬೇರೆ crops ಬೆಳೆಯಲಿ ಹೆಚ್ಚು food production ಆಗಲಿ. ಅವನಿಗೆ ದುಡ್ಡು ಜಾಸ್ತಿ ಸಿಗಲಿ ಎಂದು ತಾನೇ ಉದ್ದೇಶ ಇಟ್ಟುಕೊಂಡು ಮಾಡಿರುವುದು ?

ಶ್ರೀ ವೆಂಕಟರಾವ್ ನಾಡಗೌಡ :- ಸಾವಯವ ಕೃಷಿಯಿಂದ ಸುವರ್ಣ ಭೂಮಿಗೆ ಎಂದು 100 ಕೋಟಿ ರೂಪಾಯಿಗಳನ್ನು ಶಿಫ್ಟ್ ಮಾಡಿದ್ದಾರೆ. ಆದರೆ ಬಜೆಟ್ ಪ್ರಾವಿಜನ್‌ನಿಂದ ಒಂದು ನಯಾಪೈಸೆಯನ್ನು ರಿಲೀಸ್ ಮಾಡಿರುವುದಿಲ್ಲ. ಸಾವಯವ ಕೃಷಿಯಿಂದ ಅದಕ್ಕೆ 100 ಕೋಟಿ ರೂಪಾಯಿಗಳನ್ನು ಹಾಕಿದ್ದಾರೆ. ಇನ್ನುಳಿದಿರುವುದನ್ನು ನಿಮ್ಮ horticulture ನಿಂದ ತೆಗೆದುಹಾಕಿದ್ದಾರೆ. ಒಟ್ಟಾರೆ agriculture ಗೆ 2011-12ನೇ ಸಾಲಿನ ಬಜೆಟ್ ಎಸ್ಟಿಮೇಟ್ ನೀವು ಕೊಟ್ಟಿರುವ figure 1741 ಕೋಟಿ ರೂಪಾಯಿಗಳ ಗುರಿ. Revised Estimate ನಲ್ಲಿ ಅದು ರೂ. 1714 ರಿಂದ 1200 ಕೋಟಿ ರೂಪಾಯಿಗಳಿಗೆ ಕಡಿಮೆ ಆಯಿತು. Release ಆಗಿರುವುದು 900 ಕೋಟಿ ರೂಪಾಯಿಗಳು. Further reduced. ಖರ್ಚು 684 ಕೋಟ ರೂಪಾಯಿಗಳು. ಹೀಗಾದರೆ ಕೃಷಿ ಹೇಗೆ ಅಭಿವೃದ್ಧಿ ಆಗುತ್ತದೆ? ನೀವು ಕೊಟ್ಟಿರುವ figure ಇದು. 1714.00 ಕೋಟಿ ರೂಪಾಯಿಗಳಲ್ಲಿ 650 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದರೆ ಎಷ್ಟು ಪರ್ಸೆಂಟ್ ಆಯಿತು? About 30-35% ಹೀಗಾದರೆ ಕೃಷಿ ಹೇಗೆ growth ಆಗುತ್ತದೆ. production ಹೇಗೆ ಆಗುತ್ತದೆ? That is my point. ನಿಮಗೆ ಇದನ್ನು ಏಕೆ ಹೇಳುತ್ತಿದ್ದೇನೆಂದರೆ allocation ಬೇರೆ, release ಬೇರೆ, expenditure ಬೇರೆ ನಿಮ್ಮ PWD ಗೆ ಹೀಗೆ ಕಡಿಮೆ ಆಗಿದೆ. ನನಗೆ ಬಹಳ ಆಶ್ಚರ್ಯವೆಂದರೆ Backward Classes ನವರಿಗೆ ಕಳೆದ ವರ್ಷ 760 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. Total Population ನಲ್ಲಿ ಹಾವನೂರು ಆಯೋಗದವರ ಪ್ರಕಾರ ಹಿಂದುಳಿದವರು 44% ಮಂಡಲ್ ಕಮೀಷನ್‌ರವರ ವರದಿಯ ಪ್ರಕಾರ 52% ಬಜೆಟ್ ಇರುವುದು ಒಂದು ಲಕ್ಷ ಚಿಲ್ಲರೆ ಕೋಟಿ ರೂಪಾಯಿಗಳು. ಹೋದ ವರ್ಷ 80 ಸಾವಿರ ಕೋಟಿ ಈ ಸಾರಿ ಒಂದು ಲಕ್ಷ ಮೂರು ಸಾವಿರ ಕೋಟಿ ರೂಪಾಯಿಗಳಿವೆ. ಅದರಲ್ಲಿ 760 ಕೋಟಿ ರೂಪಾಯಿಗಳು ಹೋದ ವರ್ಷ ಬಜೆಟ್ ಆಲೋಕೇಷನ್ ಇತ್ತು. 1000 ಕೋಟಿ ರೂಪಾಯಿಗಳು ಮಾಡಿದ್ದೇವೆಂದು ಏನು ತಮಟೆಯನ್ನು ಹೊಡೆಯುತ್ತಿದ್ದಾರೆ. ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ, ಅದು ಎಲ್ಲಿ ಸಿಕ್ಕಿತು ನಿಮಗೆ ಆ ತಮಟೆ ಹೊಡೆಯಲಿಕ್ಕೆ? ಎಲ್ಲಾ

ಆಗಿಹೋಯಿತೇ? ಎಲ್ಲಾ ಉದ್ಧಾರ ಆಗಿಬಿಟ್ಟರೆ? As the growth of the budget increases, the allocation should also be increased. ಹೌದಲ್ಲವೇ? ಏನು ಸ್ವಾಮೀಜಿಗಳನ್ನೆಲ್ಲಾ ಕರೆದುಕೊಂಡು ಬಂದು ವಿಧಾನಸೌಧದಲ್ಲಿ ಕೂರಿಸಿಕೊಂಡು ಅವರಿಗೆ ಏನೆಲ್ಲಾ ಮಾಡಿ. See how you are misleading the people, Backward classes MLAs ಆ ಕಡೆ ಇರುವವರು. ಈ ಕಡೆ ಇರುವವರು ದೊಡ್ಡದಾಗಿ ಪ್ರಚಾರ. ಹಾಗಾದರೆ ಇಲ್ಲಿ 75. ಕೋಟಿ ರೂಪಾಯಿಗಳನ್ನು ಕೊಟ್ಟುಬಿಟ್ಟಿದ್ದಾರೆ. ಯಡಿಯೂರಪ್ಪನವರು ಬೇರೆ ಬೇರೆ ಮಠಗಳಿಗೆ ಕೊಟ್ಟರೆಂದು ನಮ್ಮ ಮುಖ್ಯಮಂತ್ರಿಗಳು ಸಹ ಮಠಗಳಿಗೆಲ್ಲಾ ಕೊಟ್ಟಿದ್ದಾರೆ. ರಂಭಾಪುರಿ ಮಠ, ಪಂಚಮಸಾಲಿ ಮಠಗಳು, ಆಮೇಲೆ ಇನ್ನಾವುದೋ ಮಠಗಳಿಗೆಲ್ಲಾ ಕೊಟ್ಟಿದ್ದಾರೆ. ಕುರುಬರ ಮಠಗಳಿಗೆಲ್ಲಾ ಕೊಟ್ಟಿದ್ದಾರೆ. ಶ್ರೀಶೈಲಪ್ಪ ನೀವು ಪಂಚಮಸಾಲಿಯವರೇ, ನಮ್ಮ ಸಿದ್ದನಗೌಡರು ಇದ್ದರು. ಅವರು ಪಿಲಿಪ್ ಎಂದು ಹೇಳುತ್ತಿದ್ದರು. ಬೊಮ್ಮಾಯಿವರಿಗೆ ಏನೋ ಹೇಳುತ್ತಿದ್ದರು.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ :- ನಿಮ್ಮ ಕುರುಬ ಜನಾಂಗದಲ್ಲಿ ಯಾವ್ಯಾವ sub-castes ಇವೆ ?

ಶ್ರೀ ಸಿದ್ದರಾಮಯ್ಯ :- ಭಾರಿ ಕುರುಬರು ಇದ್ದಾರೆ. ಅವರಲ್ಲಿಯೂ sub-casteಕಿ ಬಹಳಷ್ಟು ಇವೆ. ಹೌದ್ರೀ, ಇವೆ. ಎಲ್ಲ ಜಾತಿಯಲ್ಲಿಯೂ ಇವೆ. ನಮ್ಮ ಜಾತಿಯಲ್ಲಿಯೂ ಇವೆ. What is your problem, I want to know. ಕಾಡು ಕುರುಬರು, ಜೇನು ಕುರುಬರು, ಗೋಂಡಾಗಳು, ರಾಜಗೋಂಡಾಗಳು ಎಲ್ಲ ರೀತಿ ಕುರುಬರು ಇದ್ದಾರೆ. ನೀವು ಕುಳಿತುಕೊಳ್ಳಿ, ಹೇಳುತ್ತೇನೆ. ಆಯಿತು.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಕುಳಿತುಕೊಳ್ಳಿ ಎಂದು ನೀವು ಹೇಳಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಆಯಿತು, ಅವರನ್ನು ಕೂರಿಸಿ ಸ್ವಾಮಿ,

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ಸದಸ್ಯರೇ, ಚರ್ಚೆ ನಡೆಯುತ್ತಿದೆ. ಕುಳಿತುಕೊಳ್ಳಿ

(ಗೊಂದಲ)

ಶ್ರೀ ಸಿದ್ದರಾಮಯ್ಯ :- ನಾನು yield ಆಗಿಲ್ಲ. ನೀವು ಕುಳಿತುಕೊಳ್ಳಿ, ನಿಮಗೆ ಅವಕಾಶ ಸಿಕ್ಕಿದಾಗ ನೀವು ಮಾತನಾಡಿ.

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ಸದಸ್ಯರು ಸ್ವಲ್ಪ sportive ತೆಗೆದುಕೊಳ್ಳಿ. ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ :- ಮಾತನಾಡಲಿ, ಪಿಲಿಪ್, ಬುಷ್ ಏನದು ? ಏಕೆ ಆ ರೀತಿ ಹೇಳಬೇಕು.

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ಸದಸ್ಯರು ಕುಳಿತುಕೊಳ್ಳಿ, ಶಿವಲಿಂಗೇಗೌಡರೆ ಕುಳಿತುಕೊಳ್ಳಿ.

ಶ್ರೀ ಎನ್. ಸಂಪಂಗಿ :- ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ. ಪಂಚಮಸಾಲಿಗಳು ಎಂದು ಹೇಳುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ಸದಸ್ಯರುಗಳು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಉಪಾಧ್ಯಕ್ಷರೆ, ಈ ಮಾತನ್ನು ನಾನು ಯಾರಿಗೂ Refer ಮಾಡಿ ಹೇಳಿದ್ದಲ್ಲ. ಅಥವಾ ಯಾರಿಗೂ ಅಗೌರವ ಮಾಡಬೇಕೆಂದು ಹೇಳಿದ್ದು ಅಲ್ಲ. ಪಂಚಮಸಾಲಿ ಮಠ ಎಂದು ಬಜೆಟ್‌ನಲ್ಲಿ ಬರೆದಿದ್ದಾರೆ. ನಾನು ಹೇಳಿದ್ದಲ್ಲ. ಬಜೆಟ್‌ನಲ್ಲಿ ಬರೆದಿದ್ದಾರೆ. ಕುರುಬರ ಮಠ, ಕಾಗಿನೆಲೆ ಮಠ ಎಂದು ಬರೆದಿದೆ. ಬೋವಿಗಳ ಮಠ ಎಂದು ಬರೆದಿದೆ. ಆದಿ ಜಾಂಬವವರದು ಎಂದು ಬರೆದಿದೆ. ಏನು ಜಾತಿ ಹೊರಟು ಹೋಗುತ್ತದೋ ? ಜಾತಿ ಇರುವುದು ಸತ್ಯ. ಇದನ್ನೆಲ್ಲಾ ನೀವೇ ಬರೆದಿರುವುದು ನಾನು ಇದನ್ನು ಹೇಳಿದ್ದೇನೆ. ?

For renovation and development works at the central place of Balehonnuru Shri Jagadguru Rambhapuri Peetha. ಇದನ್ನು ನಾನು ಹೇಳಿದ್ದೀನಾ? For construction of Sandesh Bhavan

at Mysore by Shri Shri Jagadguru Shankaracharya Mahasanstanam, Sringeri. For construction of Kumbar Bhavan. For construction of Bhavasara Kshatriya Samja Amba Bhavani Bhavan and Shivaji Hostel. For development of Ganga Matastara Nija Sharanara Ambigara Chowdaiah Smarak Aikya Sthala. ಇದೆಲ್ಲಾ ಇವರೇ ಬಟೆಟ್‌ನಲ್ಲಿ ಬರೆದಿರುವುದು.

For construction of community centre By Vishwakarma Samaj. For Vishwa Ganigara Samudaya Trust (R) Samudaya Bhavan and Hostel. For all round development of Balija Samaj. For Dashmanostava Celebrations of Backward Classes Federation. To Kaginele Authority for Development of Doddakere. To Shri Kaginele Mahasamsthan Kanakaguru Peetha. For all round development of Hema-Vema Sadbhavana Bidyapeeth, Hire-Hosahalli, Harihara Taluka. For all round development of Shri Shri Jagadguru Marulashankara Devara Gurupeetha. Jevargi, Gulbarga District. For establishment of Kanaka Adhayanapeetha at Karnataka University. Dharwar. For all round development of Shri Siddharooda Swami Seva Trust. For establishing Hadapaa Appana Devara Mahasamsthana, Tangadagi, Gangavathi Taluk, Shri Shiva Sharanara Hadapada Appana, Shivasharanara Hadapada Lingammathayi Adhyanapeetha, Gulbarga University. For all round development of Shri Shri Purushottamanadapura Uppara Samajapeetha. For all round development of Bhageeratha Samaja Mahasamsthanamath, Bangalore. For construction of community Hall, Nityannadasoha, Orphange and Goshala at Shri Kashi Annapurneshwari Sukhsethra Temple Development sava Trust (R). To Shri Mahalaxmi Tigala Mahasamsthana Trust. Shivagange, Nelamangala Taluk. For establishing State Tigalara Samaj Flower and Fruit Development Authority. For Construction of hostel building by Hindu Sadara Kshema Abhivrudhi Sangha, Mahalaxmipura, Bangalore. ಇನ್ನು ಬೇಕಾದಷ್ಟು ಬರೆದಿದ್ದಾರೆ. ಇದನ್ನು ಯಾರಿಗೂ ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ. ಕ್ಷಮಿಸಬೇಕು. I am not a man of that type. There are castes, sub-castes. It is a reality in our society. ಬಸವಣ್ಣ

ಹೇಳಿಬಿಟ್ಟರು ಎಂದರೆ ಎಲ್ಲಾ ಮುಗಿದು ಹೋಯಿತೆ ? "ಇವನಾರವ, ಇವನಾರವ ಎಂದು ಎಣಿಸದಿರು, ಇವ ನಮ್ಮವ, ಇವ ನಮ್ಮವ ಎಂದು ಏಣಿಸಯ್ಯಾ" ಎಂದರೆ ಆಗಿ ಹೋಯಿತೆ ? ಆ ರೀತಿ ಆಗುವ ಹಾಗಿದ್ದರೆ ಹೀಗೇಕೆ ಬರೆಯಬೇಕಿತ್ತು ? ವಸುಸ್ಥಿತಿ ಬೇರೆ ಮಾತನಾಡುವುದು ಬೇರೆ. ನಾನು ಉದ್ದೇಶಪೂರ್ವಕವಾಗಿ ಅಲ್ಲ. I am making it very very clear, not with any malafide intention. It is a ground reality.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ :- ಸುಮ್ಮನೆ ಇಲ್ಲದ್ದನ್ನು ಮಾತನಾಡಬೇಡಿ ನೀವು. ನಿವೇನು ಮಾತನಾಡುತ್ತೀರಿ ?

(ಗೊಂದಲ)

ಶ್ರೀ ಎನ್.ಎ. ಹ್ಯಾರೀಸ್ :- ನೀವೇನು ಮಧ್ಯದಲ್ಲಿ ಮಾತನಾಡುವುದು?

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ :- ಸರಿಯಾಗಿ ಮಾತನಾಡಿ ನೀವು.

(ಗೊಂದಲ)

ಶ್ರೀ ಎನ್. ಸಂಪಂಗಿ :- ಲೀಡರ್ ಮಾತನಾಡುತ್ತಿದ್ದಾರೆ, ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು :- ಶ್ರೀ ಸಂಪಂಗಿಯವರೆ, ಶ್ರೀ ನರೇಂದ್ರ ಬಾಬುರವರೆ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು :- ನಾನು ಚರ್ಚೆಗೋಸ್ಕರ ಕೇಳುತ್ತಿದ್ದೇನೆ. ತೋಟಗಾರಿಕೆಯಲ್ಲಿ stability ಇದೆ. ಯಾವುದೇ ನಷ್ಟವೆಂದು negative ಆಗಿ growth ಆಗಿಲ್ಲ. ತಾವು ಕೃಷಿ ಬಗ್ಗೆ ವಿಶ್ಲೇಷಣೆ ಮಾಡಿದ್ದೀರಿ. ತೋಟಗಾರಿಕೆಯಲ್ಲಿ rather plus ಇದೆ. ಅದರ ವಿಶೇಷತೆ ಏನೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :- Animal Husbandry, ತೋಟಗಾರಿಕೆ, sericulture ಎಲ್ಲವನ್ನು ನಾನು ಹೇಳುವುದಕ್ಕೆ

ಹೋಗಿಲ್ಲ. ಕೃಷಿ ಎಂದರೆ, it includes all. Agriculture and allied subjects. ಎಲ್ಲಾ ಬರುತ್ತವೆ. ನೀರಾವರಿ, Power ಇವೆಲ್ಲಾ ಸೇರಿಕೊಂಡು ನಾನು ಹೇಳಿದ್ದೇನೆ. Agriculture growth ಬಗ್ಗೆ ಹೇಳುತ್ತಿದ್ದೇನೆ. Agriculture growth, as such it has come down drastically. It has not just come down, drastically come down. Why, when all these programmes have been launched, so much money has been earmarked, so much money has been spent ? That is my question.

ಉಪಾಧ್ಯಕ್ಷರು :- I can understand. Particularly ಇದರಲ್ಲಿ ಮಾತ್ರ ಇನ್ನೂ stability ಕಾಣುತ್ತಿದೆ.

ಶ್ರೀ ಸಿದ್ದರಾಮಯ್ಯ :- Even ತೋಟಗಾರಿಕೆಯಲ್ಲಿ 69 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ನಷ್ಟವಾಗಿದೆ because of the drought. 20 ಲಕ್ಷ ಹೆಕ್ಟೇರ್‌ನಲ್ಲಿ ತೋಟ ಬೆಳೆಯುತ್ತೇವೆಂದು ನಾವು ಹೇಳಿಕೊಂಡಿದ್ದೇವೆ. ಅದರಲ್ಲಿ 300 ಕೋಟಿ ರೂ.ಗಳ ಬೆಳೆ ನಷ್ಟವಾಗಿದೆ even in Horticulture also.

ಉಪಾಧ್ಯಕ್ಷರು :- But still ಈಗ 162 ಲಕ್ಷ ಟನ್‌ಗಳನ್ನು ನಿರೀಕ್ಷೆ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ :- ಇರಬಹುದು. ಬೆಳೆಯಲ್ಲಿ ಇಳುವರಿ ಸ್ವಲ್ಪ ಜಾಸ್ತಿಯಾಗಿರಬಹುದು. I am not disputing all those things if you go through the Economic Survey, Economic Survey ಯಲ್ಲಿ ಕಳೆದ ವರ್ಷ Agriculture, Sericulture, Animal Husbandry, Rural Development, Irrigation, Power Sector ನಲ್ಲಿ ಏನಾಯಿತೆಂಬ ಬಗ್ಗೆ ಎಲ್ಲವನ್ನು ಕೊಟ್ಟಿದ್ದಾರೆ. ನಾನು ಅದನ್ನೇ ಹೇಳುತ್ತಿದ್ದೇನೆ. ಇವರು ಹೇಳಿರುವುದೊಂದು, ಅಲ್ಲಿ ಆಗಿರುವುದು ಇನ್ನೊಂದು. That is my point. ಇಷ್ಟೆಲ್ಲಾ ಕೋಟಿಗಟ್ಟಲೆ ಖರ್ಚು ಮಾಡಿದ ಮೇಲೆ ಅದಕ್ಕೆ returns ಇರಬೇಕಲ್ಲ outcome ಇರಬೇಕಲ್ಲಾ? Corresponding outcome ಇಲ್ಲಾ ಎನ್ನುವುದು ನನ್ನ ಅಭಿಪ್ರಾಯ. ಅದಕ್ಕೆ ನಮ್ಮ implementation ನಲ್ಲಿ ತಪ್ಪಿದೆ. ಭ್ರಷ್ಟಾಚಾರ ಜಾಸ್ತಿಯಾಗಿದೆ. supervision ಕಡಿಮೆಯಾಗಿದೆ. Administration ಕುಸಿದು ಹೋಗಿದೆ. ಯಾರೂ ಯಾರ ಮಾತನ್ನು ಕೇಳುತ್ತಿಲ್ಲ. These are the points I am stressing. Mere allocation will not bring the result. Mere Rs. 1 lakh crore budget will not bring the result. That is my

point. ಇವತ್ತು ಈ ರಾಜ್ಯದಲ್ಲಿ ಇಷ್ಟೆಲ್ಲಾ ಆದರೂ ಕೂಡ ಕೃಷಿ ಉತ್ಪನ್ನ ಕಡಿಮೆಯಾಗಿದೆ. Agriculture production ಕಡಿಮೆಯಾಗಿದೆ GDP ಕಡಿಮೆಯಾಗಿದೆ. ಆದರೆ Service Sector ಸ್ವಲ್ಪ ಜಾಸ್ತಿಯಾಗಿದೆ ಹಿಂದಿನ ವರ್ಷಕ್ಕೂ ಈಗಿನ ವರ್ಷಕ್ಕೂ ಹೋಲಿಸಿದರೆ 9.1 ಇದ್ದದ್ದು ಈಗ 10.06 ಆಗಿದೆಯೆಂದು. ನಾನು ಆಗಲೆ ಹೇಳಿದ್ದೇನೆ. ಅಕ್ಷರ ದಾಸೋಹ, ಸೈಕಲ್ ಕೊಟ್ಟಿದ್ದೇವೆ, ಬಿಪಿಎಲ್/ಎಪಿಎಲ್ ಕಾರ್ಡ್‌ಗಳನ್ನು ಕೊಟ್ಟಿದ್ದೇವೆ. ಎಲ್ಲವನ್ನೂ ಮಾಡಿದ ನಂತರವೂ Why ? ಮಕ್ಕಳಿಗೆ ICDS Programme implement ಮಾಡುತ್ತಿದ್ದೇವೆ. ಆದರೂ ಮಕ್ಕಳಿಗೆ mal-nutirition percentage ಜಾಸ್ತಿಯಾಗುತ್ತಿದೆ. Why ? ಅದು ಕಡಿಮೆ ಆಗಬೇಕಲ್ಲ ? ರಾಯಚೂರಿನಲ್ಲಿ ಸತ್ತು ಹೋದರು ಇದು ಕೇವಲ ಕರ್ನಾಟಕದಲ್ಲಿಯೆಂದು ಹೇಳುವುದಿಲ್ಲ. ಇಡೀ ದೇಶದಲ್ಲಿದೆ. ಆದಕ್ಕೆ Prime Minister ಭಾಷಣ ಮಾಡುತ್ತಾ It is a national shame ಎಂದು ಹೇಳಿದರು. ನಾವು ಇಷ್ಟೆಲ್ಲ gender equality ಬಗ್ಗೆ ಹೇಳುತ್ತಿದ್ದೇವೆ. What is the literacy percentage of woman ? ಕರ್ನಾಟಕದ average ಇರುವುದು 58% ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಎಲ್ಲರನ್ನೂ ಸೇರಿಸಿ 75%, ಬೆಂಗಳೂರು ಸಿಟಿ, ಉಡುಪಿ, ಮಂಗಳೂರು ಇವೆಲ್ಲಾ ಇಲ್ಲದೆ ಹೋಗಿದ್ದರೆ ಇನ್ನೂ ಕಡಿಮೆಯಾಗುತ್ತಿತ್ತು. ಗುಲ್ಬರ್ಗಾ, ರಾಯಚೂರು, ಬೀದರ್, ಬಿಜಾಪುರ ಆ ಕಡೆ ಹೋದರೆ 58% ಅಥವಾ 59% ಇರಬಹುದು. They are giving mid-day meal, they are giving cycles, they are giving free text books, they are giving uniforms. ಆಗಿಲ್ಲವೆಂದು ಹೇಳುವುದಿಲ್ಲ, ಆಗಿದೆ Five year plan ನಲ್ಲಿ ಸ್ವಲ್ಪ ಆಗಿದೆ. ಆದರೆ ಎಷ್ಟು ನಿರೀಕ್ಷೆ ಮಾಡಿಕೊಂಡಿದ್ದೆವು.? 85% ಆಗಬೇಕೆಂದು ಇತ್ತು Literacy, you could not able to reach it. 85% ಗೆ our average literacy percentage is in Karnataka 75% ಎಂದು ಹೇಳುತ್ತೇವೆ. 10th Plan ನಲ್ಲಿ 68% ಇತ್ತು 11th Plan ನಲ್ಲಿ 75% ಆಗಿದೆ. 85% ಆಗಬೇಕು. ಅದು ಆಗಲಿಲ್ಲ. ಇನ್ನೂ ಹತ್ತು ವರ್ಷದಲ್ಲಿ 100% literacy ಮಾಡಬೇಕೆಂದಿದ್ದೇವೆ. ಈ ಕಾನೂನುಗಳನ್ನು ಮಾಡಿರುವುದು ಏಕೆ ? Manifesto ನಲ್ಲಿ ಇವರೆ ಹೇಳಿದರು. ನಾನು ಇವರ manifesto ತೆಗೆದುಕೊಂಡು ಬಂದಿದ್ದೇನೆ. BJP ಯವರು manifesto ಅನ್ನು ಮರೆತಿರಬಹುದು ಎನಿಸುತ್ತದೆ. ಶ್ರೀ ಕಾರಜೋಳರವರೆ ಇದನ್ನು ಓದಿದ್ದೀರಾ ? ಬಡವರಿಗೆ ರೂ. 11,800/– ಗಳನ್ನು

ಯಾವುದೋ ಕಾಲದಲ್ಲಿ income-c ಇಟ್ಟುಕೊಂಡು ಬಿಟ್ಟಿದ್ದಾರೆ. ಅದು ಸರಿಯಿಲ್ಲ. ಕಡುಬಡವರು ಎಂದು ಒಂದು ಕ್ಯಾಟಗರಿ ಮಾಡತ್ತೀವಿ. ಬಡವರು ಎಂದು ಇನ್ನೊಂದು ಕ್ಯಾಟಗರಿ ಮಾಡುತ್ತೀವಿ. ಬಡವರಿಗೆ 30,000 ರೂ.ಗಳ income ಮಾಡುತ್ತೀವಿ. ಕಡು ಬಡವರಿಗೆ 60,000 ರೂ.ಗಳ income ಮಾಡುತ್ತೀವಿ. ಇದನ್ನು ಮಾಡಿ ನಾಲ್ಕು ವರ್ಷವಾಯಿತಲ್ಲ. 40 ಲಕ್ಷ ಕಾರ್ಡ್‌ನ್ನೆ ಕಿತ್ತು ಹಾಕಿಬಿಟ್ಟಿದ್ದೀರಿ. ಎಲ್ಲಿ ಮಾಡುತ್ತೀರಿ ? ಮತ್ತೆ 30 ಲಕ್ಷ ಅರ್ಜಿಗಳು online ನಲ್ಲಿದೆ. No action has been taken so far. You have cut down 40 Lakhs BPL cards whereas another 30 lakhs applications are pending through online. ಎಂದು ಹಾಕಿದ್ದಾರೆ. ಬಿಜೆಪಿಯ ರಾಜ್ಯದಲ್ಲಿ ವಾರ್ಷಿಕ ರೂ. 30,000/– ದವರೆಗಿನ ಆದಾಯವಿರುವ ಕುಟುಂಬಗಳನ್ನು ಕಡುಬಡವರೆಂದು ರೂ. 30,000/– ದಿಂದ ಮೇಲ್ಪಟ್ಟು ರೂ. 60,000/– ವರೆಗಿನವರನ್ನು ಬಡವರೆಂದು ನಾವು ಗುರುತಿಸುತ್ತೇವೆ. ಸುರಕ್ಷಿತ ಆಸ್ಪತ್ರೆಯಲ್ಲಿ ಹಾಗೂ ಪ್ರತಿಯೊಂದು ಹೆರಿಗೆಗೂ ರೂ. 1,000/– ಕೊಡುತ್ತೇವೆ ಎಂದಿದ್ದೀರಿ, ಕೊಡಲಿಲ್ಲ. ಕನ್ಯಾದಾನದವರಿಗೆ ಮಾಂಗಲ್ಯ ಕೊಡುತ್ತೇವೆ ಎಂದಿದ್ದಿರಿ, ಕೊಡಲಿಲ್ಲ. ಬಡ ವಿಧವೆಯವರಿಗೆ ಮಕ್ಕಳಿದ್ದರೂ ರೂ. 400/– ಮಾಸಾಶನ ಕೊಡುತ್ತೇವೆ ಎಂದಿದ್ದೀರಿ ಕೊಡಲಿಲ್ಲ. ಹಳ್ಳಿಗೊಂದು ಸೈಬರ್ ಕೆಫೆ ಮಾಡಿದ್ದೀರಾ ? ಸರ್ವಾಂಗಿಣ ಅಭಿವೃದ್ಧಿಗೆ ಮಹಿಳಾ ಸ್ವ–ಸಹಾಯ ಸಂಘಗಳಿಗೆ ಮೂಲಧನ ರೂ. 5,000/– ದಿಂದ ರೂ. 10,000/– ಕ್ಕೆ ಏರಿಸುತ್ತೇವೆ ಎಂದಿದ್ದೀರಿ ಏರಿಸಿದ್ದೀರಾ ? ಕುಡಿಯುವ ನೀರು ಹಾಗೂ ಸಣ್ಣ ನೀರಾವರಿ ಸಹಿತ ನೀರಾವರಿಗೆ ಮುಂದಿನ ಐದು ವರ್ಷಗಳಲ್ಲಿ ಒಟ್ಟು 40 ಸಾವಿರ ಕೋಟಿ ಖರ್ಚು ಮಾಡುತ್ತೇವೆಂದು ಹೇಳಿದ್ದಿರಿ, ಮಾಡಿದಿರಾ ? ಮೂಲಭೂತ ಸೌಕರ್ಯಗಳಿಗೆ 25 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದಿರಿ, ಮಾಡಿದಿರಾ? ನಾನು ಏಕೆ ಹೇಳುತ್ತಿದ್ದೇನೆಂದರೆ, ಎಲ್ಲವನ್ನೂ ಮಾಡುವುದಕ್ಕಾಗದೇ ಇರಬಹುದು. ನಾವು ಸರ್ಕಾರಗಳನ್ನು ನಡೆಸಿದ್ದೇವೆ. ಜನಗಳಿಗೆ ಹೇಳಿ ನಂತರ ಅದನ್ನು ಮಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಹೇಗೆ ಬರುತ್ತದೆ. ಎನ್ನುವುದು ನಮಗೂ ಗೊತ್ತು. ಶ್ರೀ ಯಡಿಯೂರಪ್ಪನವರು ವಿರೋಧ ಪಕ್ಷದಲ್ಲಿದ್ದು, ಈ ಕಡೆ ಕುಳಿತಿದ್ದಾಗ ಬಿಜೆಪಿಯವರು ಭೂಮಿ–ಆಕಾಶವೆಲ್ಲ ಒಂದೇ ಮಾಡಿ ಬಿಡುತ್ತಿದ್ದರು. ಇನ್ನು Social Security Programme ಅದನ್ನು ನಿಲ್ಲಿಸಿ ಬಿಟ್ಟದ್ದೀರಿ. ನಾನು ತಿಳಿದುಕೊಂಡಿರುವ ಹಾಗೆ ನಮ್ಮ ಕ್ಷೇತ್ರದ ತಹಶೀಲ್ದಾರ್ ರವರ ಜೊತೆಗೆ ಮಾತನಾಡಿರುವ ಹಾಗೆ ಕಳೆದ ಫೆಬ್ರವರಿಯಲ್ಲಿ verification ಮಾಡುತ್ತೇವೆಂದು

ನಿಲ್ಲಿಸಿ ಬಿಟ್ಟರು. ಆವತ್ತಿನಿಂದ ಇವತ್ತಿನವರೆಗೂ ಕೊಡಲಿಲ್ಲ. ಈಗ ಕೊಟ್ಟಿದ್ದೀರಿ. Am I correct ? ಹೌದು ಎಂದಾದರೆ ಹೌದು ಎನ್ನಿ. ಇಲ್ಲವೆಂದರೆ ಇಲ್ಲ ಎನ್ನಿ. ಬಡವರ ಪರವಾಗಿ ಐದು ಹಕ್ಕುಗಳನ್ನು ಒದಗಿಸಲಾಗುವುದು. ಆಹಾರದ ಹಕ್ಕು, ಆರೋಗ್ಯದ ಹಕ್ಕು, ಶಿಕ್ಷಣದ ಹಕ್ಕು, ವಸತಿಯ ಹಕ್ಕು, ಶಾಂತಿ ಹಾಗೂ ಸಾಮಾಜಿಕ ನ್ಯಾಯದ ಹಕ್ಕು. ಬಸವ ವಸತಿ ಆಶ್ರಯ ಮನೆಗಳನ್ನು ಈಗ ಕೊಟ್ಟಿರುವುದು ಬಿಟ್ಟರೆ ಮೂರು ವರ್ಷದಿಂದ ಒಂದೇ ಒಂದು ಮನೆಯನ್ನು ಕೊಟ್ಟಿಲ್ಲ. ಈಗ ಬಸವ ವಸತಿ ಮಂಜೂರಾಗಿದೆ. ಅದು ಆಗುತ್ತದೆಂದು ವಿಶ್ವಾಸವನ್ನು ಇಟ್ಟುಕೊಳ್ಳೋಣ. But, ಮೂರು ವರ್ಷ ಒಂದೇ ಒಂದು ಆಶ್ರಯ ಮನೆಯನ್ನು ಕೊಡಲಿಲ್ಲ. ಕಾರ್‌ಜೋಳ್ ಅವರೆ ಇದೇ ಏನು ಅಭಿವೃದ್ಧಿ ಮಂತ್ರ ಎಂದರೆ ? ಇದು ನನಗೆ ಹೊಸ definition ಅಭಿವೃದ್ಧಿ ಮಂತ್ರ ! ವಸತಿ ಚಾಪ್ಟರ್‌ನ್ನು ತೆಗೆದು ನೋಡಿ. ಮೂರು ವರ್ಷದಿಂದ ಒಂದು ಮನೆ ಕೊಡಲಿಲ್ಲ. ಮಾನ್ಯ ಉಪಾಧ್ಯಕ್ಷರೆ ನಿಮ್ಮ ಕ್ಷೇತ್ರದಲ್ಲೂ ಕೊಟ್ಟಿರುವ ಹಾಗೆ ಕಾಣುವುದಿಲ್ಲ. ಒಂದು ಸೈಟ್ ಏನಾದರೂ ನಿಮ್ಮ ಮಂಗಳೂರಿಗೆ ಕೊಟ್ಟಿದ್ದಾರಾ ? ಕೊಟ್ಟಿಲ್ಲ ಮಾನ್ಯ ಉಪಾಧ್ಯಕ್ಷರೆ, ಎಂತಹ ಪರಿಸ್ಥಿತಿ ಬಂದಿದೆ ನೋಡಿ ನಮಗೆ. ಮಾನ್ಯ ಸೋಮಣ್ಣನವರು ಈಗ ನಮ್ಮ ಕ್ಷೇತ್ರಕ್ಕೆ ಜಾಸ್ತಿ ಕೊಟ್ಟಿದ್ದಾರೆ.

ಶ್ರೀ ಕರಡಿ ಸಂಗಣ್ಣ :- ಹಿಂದಿನ ಮೂರು ವರ್ಷದ್ದು ಸೇರಿ ಈ ವರ್ಷ ಕೊಟ್ಟಿದ್ದಾರೆ.

ಶ್ರೀ ಸಿದ್ದಾರಾಮಯ್ಯ :- ಕರಡಿ ಸಂಗಣ್ಣ ಅವರೆ ನೀವು ಆ ಕಡೆ ಹೋದ ತಕ್ಷಣವೇ ಹೀಗೆ ಆದರೆ ಹೇಗೆ ? ಇಲ್ಲಿದ್ದಾಗ ನಾನೇ ಕೇಳಿದಾಗ ಮನೆ ಕೊಟ್ಟಿಲ್ಲ ಎಂದು ಹೇಳಿದಿರಿ. ನಮ್ಮ ಜೊತೆಯಲ್ಲಿಯೇ 4 ದಿನ ಇಲ್ಲೇ ಮಲಗಿದ್ದಿರಿ.

ಶ್ರೀ ಕರಡಿ ಸಂಗಣ್ಣ :- ಈ ವರ್ಷ ಕೊಟ್ಟಿರುವುದನ್ನು ನೀವು ಒಪ್ಪುತ್ತೀರಾ ಇಲ್ಲವಾ ?

ಶ್ರೀ ಸಿದ್ದರಾಮಯ್ಯ :- ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೇನೆ. ನಾನು ಸುಳ್ಳು ಹೇಳುವುದಕ್ಕೆ ತಯಾರಿಲ್ಲ. ಇಲ್ಲಿ ಏನೀದೆಯೋ ಅದನ್ನು ಹೇಳುತ್ತಿದ್ದೇನೆ. ಮೂರು ವರ್ಷಗಳೂ ಗುರಿ ನೀಡಿರುವುದಿಲ್ಲ, ಗುರಿ ನೀಡಿರುವುದಿಲ್ಲ ಎಂದು Economic Survey ಅಲ್ಲಿದೆ. ನಾನು ಬರೆದಿರುವುದು ಅಲ್ಲ. ಗುರಿ ನೀಡಿರುವುದಿಲ್ಲ ಎಂದು ನಿಮ್ಮ ಸರ್ಕಾರ ಬರೆದು ಕೊಟ್ಟಿರುವುದು. what does it mean ? ಅಥವಾ ಗುರಿ ಕೊಡದೆನೇ ಸಚಿವರೇ ಮನೆಗಳನ್ನು ಮಾಡಿಕೊಂಡು ಬಿಟ್ಟರಾ? ಹೇಳುವುದಕ್ಕಾಗುವುದಿಲ್ಲ. ಮೂರು ವರ್ಷ ಗುರಿ

ನೀಡಿರುವುದಿಲ್ಲವೆಂದು Economic Survey ನಲ್ಲಿದೆ. ಪ್ರತಿ ವರ್ಷ 2 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದಿರಿ, ಎಲ್ಲಿ ಕಟ್ಟಿದ್ದೀರಿ? ಜನಗಳಿಗೆ ಕೊಟ್ಟ ಭರವಸೆ ಎಲ್ಲಿ ಹೋಯಿತು. Mr. ಲಿಂಬಾವಳಿ ಅವರೇ, ? ಮಾನ್ಯ ಉಪಾಧ್ಯಕ್ಷರೆ ಮಾಡಲಿಲ್ಲ. urban ಅಲ್ಲಿ ಸೈಟ್‌ಲೆಸ್ ಪೀಪಲ್‌ಗೆ ಇವತ್ತಿನವರೆಗೂ ಒಂದೇ ಒಂದು ಸೈಟು ಹಂಚಿಕೆ ಮಾಡಲಿಲ್ಲ, ಇವರು ಬಂದ ಮೇಲೆ not a single site ಕೂಡ ಇವತ್ತಿನವರೆಗೆ disturibute ಮಾಡಲಿಲ್ಲ.

ಶ್ರೀ ಅರವಿಂದ ಲಿಂಬಾವಳಿ :- ಆಸರೆ ಯೋಜನೆಯಡಿ ಹೊಸ ಮನೆಗಳನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಸಿದ್ದರಾಮಯ್ಯ :- ತಾವು ಕುಳಿತುಕೊಳ್ಳಿ, ಆಮೇಲೆ ಅದರ ಬಗ್ಗೆ ಹೇಳುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್ :- ಆಸರೆ ಬಗ್ಗೆ ನೀವು ಮಾತನಾಡಬೇಡಿ. ಅದು ಒಂದು ದೊಡ್ಡ ಕಥೆ. 1800 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ, 450 ಕೋಟಿ ಸಾರ್ವಜನಿಕ ಹಣವನ್ನೇ ನೀವು ಉಪಯೋಗ ಮಾಡಿಲ್ಲ, ಮನೆಗಳನ್ನು ಕಟ್ಟಿರುವುದಿಲ್ಲ, ಆಸರೆ ಬಗ್ಗೆ ಮಾತನಾಡುವುದಕ್ಕೆ ಹೋಗಬೇಡಿ. ಅದು ಆಸರೆ ಅಲ್ಲ.

(ಗೊಂದಲ)

ಶ್ರೀ ಸಿದ್ದು ಸವದಿ :- ಮೀನುಗಾರರಿಗೆ ಆಶ್ರಯ ಕೊಟ್ಟಿದ್ದೇವೆ, ಜವಳಿಗಾರರಿಗೆ ಆಶ್ರಯ ಕೊಟ್ಟಿದ್ದೇವೆ. ಇಲ್ಲ ಎಂದರೆ ಹೇಗೆ ? ನೇಕಾರರಿಗೆ ಹಾಗೂ ಮೀನುಗಾರರಿಗೆ ಮನೆಗಳನ್ನು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಮೊದಲು ಕುಳಿತುಕೊಳ್ಳಿ. ನೀವು ಸವದಿಯವರೇ ನೀವು ಅಲ್ಲೇ ಕುಳಿತಿರಬೇಕಾಗಿತ್ತು. ನೀವು ತಪ್ಪು ಮಾಡಿದಿರಿ. ಅಲ್ಲಿಂದ ಬಿಟ್ಟು ಬಂದ ಮೇಲೆ ನಮಗೆ ಸ್ಫೂರ್ತಿನೇ ಹೋಗಿ ಬಿಟ್ಟಿದೆ. ಈಗಲೂ ರಾಜಿನಾಮೆ ಕೊಟ್ಟು ಬನ್ನಿ ಈ ಕಡೆಗೆ. ಮಾನ್ಯ ಅಧ್ಯಕ್ಷರೆ ಆಸರೆ ಮನೆಗಳ ಬಗ್ಗೆ ಮಾನ್ಯ ಲಿಂಬಾವಳಿಯವರು ಮಾತನಾಡಿದರು. 'ಆಸರೆ' ಎಂದರೆ ಪ್ರವಾಹದಲ್ಲಿ ಮುಳುಗಡೆಯಾದ ಹಳ್ಳಿಗಳಿಗೆ ಆಶ್ರಯ ನೀಡುವುದು ತಾನೇ? ಇದು ಸುಮಾರು 15–16 ಜಿಲ್ಲೆಗಳಲ್ಲಿ ಆಗಿದೆ. 2009–10 ರ ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಪ್ರವಾಹ ಬಂತು. ಭಾರೀ ಭೀಕರವಾದಂತಹ ಪ್ರವಾಹ ಬಂದಿದ್ದು, ಯಾವತ್ತೂ ಆ ರೀತಿಯ ಪ್ರವಾಹ ಬರಬಾರದು. ಕರ್ನಾಟಕದಲ್ಲೇ ಅಲ್ಲಾ, ಇಡೀ

ದೇಶದಲ್ಲಿಯೂ ಕೂಡ ಯಾರೂ ಆ ರೀತಿಯ ಸಂಕಷ್ಟಕ್ಕೆ ಸಿಲುಕಿಕೊಳ್ಳಬಾರದು. ಇಡೀ ಜಗತ್ತಿನಲ್ಲಿಯೂ ಈ ರೀತಿಯ ಪರಿಸ್ಥಿತಿಯಾಗಬಾರದು. ಪ್ರವಾಹ ಸ್ಥಳಗಳಿಗೆ ನಾವೆಲ್ಲಾ ಭೇಟಿ ಕೊಟ್ಟಿದ್ದೆವು. ಅಲ್ಲಿನ ಜನಗಳು ಬಹಳ ತೊಂದರೆಯಲ್ಲಿದ್ದು, ಆಗತಾನೇ ಹೆರಿಗೆಯಾಗಿರುವವರಿದ್ದರು, ವಯಸ್ಸಾದವರು ಕಾಯಿಲೆಯಿಂದ ನರಳುತ್ತಿದ್ದು, ಅಲ್ಲಿಯೇ ಮಲಗಿಕೊಳ್ಳಬೇಕು. ಬಹಳ ದೊಡ್ಡದಾಗಿ ಸರ್ಕಾರದವರು 289 ಹಳ್ಳಿಗಳನ್ನು shift ಮಾಡುತ್ತೇವೆಂದು ಹೇಳಿದ್ದರು. ಆ ಹಳ್ಳಿಗಳನ್ನು shift ಮಾಡುವುದಕ್ಕೆ ಅಲ್ಲಿನ ಸೈಟುಗಳನ್ನು, ಜಮೀನುಗಳನ್ನು ಖರೀದಿ ಮಾಡಿದರು. ಸೈಟ್‌ಗಳೆಲ್ಲವನ್ನು formation ಮಾಡುವುದಕ್ಕೆ NREGS ಹಣವನ್ನು ಖರ್ಚು ಮಾಡಿದರು. ಆ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ 1,649 ಕೋಟಿ ರೂ.ಗಳ NCCF Grants ಬಂತು. ಬೆಂಗಳೂರಿನಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಒಟ್ಟಾಗಿ ಕೊಟ್ಟವರು ಹಾಗೂ ಸಾರ್ವಜನಿಕರಿಂದ 439 ಕೋಟಿ ರೂ.ಗಳು ಸಂಗ್ರಹವಾಗಿತ್ತು. Out of 59,000 ಆಸರೆ ಮನೆಗಳಲ್ಲಿ ಸುಮಾರು 30,000 ಮನೆಗಳನ್ನು ದಾನಿಗಳು ಕಟ್ಟಿಸಿದರು. ಉಳಿದ ಮನೆಗಳಲ್ಲಿ ಇಲ್ಲಿಯವರೆಗೆ ನೀವು complete ಮಾಡಿರುವುದು 47,000 ಮನೆಗಳು ಕೇಂದ್ರ ಸರ್ಕಾರ ಇಲ್ಲಿಯವರೆಗೆ ರೂ. 2,000 ಚಿಲ್ಲರೆ ಕೋಟಿ ಹಾಗೂ ದಾನಿಗಳು ಕೊಟ್ಟಿರುವುದು ರೂ. 400 ಚಿಲ್ಲರೆ ಕೋಟಿ ಮತ್ತೆ ಸುಮಾರು 30,000 ಮನೆಗಳನ್ನು ದಾನಿಗಳು ಕಟ್ಟಿಸಿರುವುದು. ನಿಮ್ಮ treasury ಯಿಂದ ಕೊಟ್ಟಿರುವ ದುಡ್ಡು ಯಾವುದಿದೆ ಹೇಳಿ ? ಎಷ್ಟು ಕೋಟಿ ಕೊಟ್ಟಿದ್ದೇವೆಂದು ಹೇಳಿ ?

ಶ್ರೀ ಅರವಿಂದ ಲಿಂಬಾವಳಿ :- ಸರ್ಕಾರ ಉತ್ತರ ಕೊಡುತ್ತದೆ. Real Estate ಎಲ್ಲಾ ನಿಮ್ಮ ಹತ್ತಿರ ಇರುವುದು. Builders ಎಲ್ಲಾ ನಿಮ್ಮ area ದಲ್ಲೇ ಇರುವುದು.

ಶ್ರೀ ಸಿದ್ದರಾಮಯ್ಯ :- ಕೇಳಿದವರು ನೀವು ತಾನೇ, ನೀವೇ ಉತ್ತರ ಕೊಡಿ. ಅವರು ಉತ್ತರ ಕೊಡುತ್ತಾರೆಂದರೆ ಹೇಗೆ ?

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ :- ದುಡ್ಡು ಬಂದಿರುವ ವಿಚಾರ ಮಾತ್ರ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಬಾಗಲಕೋಟೆ ಉಸ್ತುವಾರಿ ಸಚಿವನಾಗಿದ್ದೆ. ಪ್ರವಾಹವಾದ ಪ್ರತಿಯೊಂದು ಹಳ್ಳಿಗೂ visit ಮಾಡಿರುವ ಮಂತ್ರಿಗಳ ಪೈಕಿ ನಾನೂ ಒಬ್ಬ. ಹಾಗಾಗಿ ಆ ನೀರು ಬಂದಾಗಿನಿಂದ ಅವರನ್ನು

ನೀರಿನಿಂದ ಆಚೆ ತೆಗೆದು ಹೆಲಿಕಾಪ್ಟರ್ ಮುಖಾಂತರ ಆಗಿರಬಹುದು, ದೋಣಿಗಳ ಮುಖಾಂತರ ಆಗಿರಬಹುದು, ಮತ್ತೊಂದು ಕಡೆ rehabilitate ಮಾಡಿ ಅವರಿಗೆ ಊಟ ಉಪಹಾರಗಳ ವ್ಯವಸ್ಥೆಗಳನ್ನು ಮಾಡಿ, temporary shelters ಗಳನ್ನು ಮಾಡಿ, ನಂತರ permanent shelter ಗಳನ್ನು ಮಾಡಲು Lay-out ಗಳನ್ನು ಮಾಡಿ ಅದಕ್ಕೆ infrastructure develop ಮಾಡುವುದಕ್ಕೆ ಇವತ್ತು ಲೆಕ್ಕ ಹಾಕಿಬಿಟ್ಟರೆ, ರಾಜ್ಯ ಸರ್ಕಾರದಿಂದ ಏನೂ contribution ಇಲ್ಲ ಎನ್ನತಕ್ಕಂಥ ಮಾತು ತಪ್ಪು ಅರ್ಥವಾಗುತ್ತದೆ. ಅದಕ್ಕೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಜನರ ದುಡ್ಡು, ಎಲ್ಲವೂ ಸೇರಿ ನಾವು ಮಾಡಿರತಕ್ಕಂಥದ್ದು. ಅದಕ್ಕೆ ಇಷ್ಟು ಸಾಧಿಸಲಿಕ್ಕೆ ಸಾಧ್ಯವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮಗೆ ಗೊತ್ತಿದೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ರಾಜ್ಯ ಸರ್ಕಾರದ ಹಣ ಏನೂ ಇಲ್ಲ. ಒಂದು ನಯಾ ಪೈಸೆನೂ ಇಲ್ಲ.

ಉಪಾಧ್ಯಕ್ಷರು :– ಮಾನ್ಯ ಲಿಂಬಾವಳಿಯವರೆ, ಕುಳಿತುಕೊಳ್ಳಿ. ಮಾನ್ಯ ಸಿದ್ದರಾಮಯ್ಯನವರೆ, ತಾವು ನೇರವಾಗಿ ಮಾತನಾಡಿ.

ಶ್ರೀ ಸಿದ್ದರಾಮಯ್ಯ :– ನಾನು ನೇರವಾಗಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :– ಹೆಸರು ಹೇಳಿದ ತಕ್ಷಣ ಅವರು ಮಾತನಾಡಲು start ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ :– ಇದು ಬಹಳ dry subject ನೋಡಿ. ಇದನ್ನು ಓದುತ್ತಾ ಕುಳಿತರೆ ಎಲ್ಲರಿಗೂ ಅರ್ಥವಾಗುವುದಿಲ್ಲ. ಆನಂತರ bore ಆದರೆ ಎಲ್ಲರೂ ಎದ್ದು ಹೋಗಿಬಿಡುತ್ತಾರೆ ಮಾನ್ಯ ಉಪಾಧ್ಯಕ್ಷರೆ. ಆಸರೆ ಮನೆಗಳು 59,377 built only 47,863. Government of India has released Rs. 1,698 ಕೋಟಿ 99 ಲಕ್ಷ. ಇದು ದಾನಿಗಳು ಕಟ್ಟಲಿಲ್ಲವೆಂದು ಇಟ್ಟುಕೊಳ್ಳೋಣ. 60 ಸಾವಿರ ಮನೆಗಳನ್ನು ಮನೆಯೊಂದಕ್ಕೆ ರೂ. 1,40,000 ದಂತೆ ಕಟ್ಟಿರುವುದು. 60 ಸಾವಿರ ಮನೆ ಕಟ್ಟುವುದಕ್ಕೆ 1.50 ಲಕ್ಷ ಅಂಥ ತೆಗೆದುಕೊಂಡರೂ ಕೂಡ ರೂ. 900 ಕೋಟಿ ಆಯಿತು. ಕೇಂದ್ರ ಸರ್ಕಾರ ಎಷ್ಟು release ಮಾಡಿದೆ ? 1,698 ಕೋಟಿ. 900 ಕೋಟಿ ಖರ್ಚು ಮಾಡಿ ಇನ್ನೂ ಮನೆ ಕಟ್ಟುವುದಕ್ಕೆ ಆಗಿಲ್ಲ. Where this Rs. 1698 crore money has gone? ನೀವು ಏಕೆ ನಮಗೆ ಇಷ್ಟು ತೊಂದರೆ ಕೊಡುತ್ತೀರಿ ?

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರ Calamity Relief Fund ನಲ್ಲಿ 1600 ಚಿಲ್ಲರೆ ಕೋಟಿ ಕೊಟ್ಟಿರುವುದು ನಿಜ. ಆ ಹಣವನ್ನು ನಾವು ಬಿದ್ದ ಮನೆಗಳಿಗೆ 37,000 ರೂಪಾಯಿಯಂತೆ ಕೊಟ್ಟಿದ್ದೇವೆ. ಜನ ತಮ್ಮ ಆಸ್ತಿಪಾಸ್ತಿ ಅಲ್ಲದೆ ಪ್ರಾಣ ಹಾನಿಯಾದಂಥವರಿಗೆ ಹಣ, ಬೆಳೆ ನಾಶ ಆದವರಿಗೆ ಹಣ ಕೊಟ್ಟಿದ್ದೇವೆ. ಆಸರೆ ಮನೆಗೆ ಕೇಂದ್ರ ಸರ್ಕಾರದ ಹಣವನ್ನು ಸಂಪೂರ್ಣವಾಗಿ ಬಳಸಿಕೊಂಡಿಲ್ಲ. ನಾವು. ರಾಜ್ಯ ಸರ್ಕಾರ ಮತ್ತು ದಾನಿಗಳಿಂದ ಕಟ್ಟಿರತಕ್ಕಂಥದ್ದು ಆಸರೆ. ಕೇಂದ್ರ ಸರ್ಕಾರದಿಂದ ಹಣ ಏನು ಬಂದಿತ್ತು. ಸಾರ್ವಜನಿಕ ಆಸ್ತಿಪಾಸ್ತಿ ಹಾಳಾಗಿತ್ತು, ರಸ್ತೆ ಹಾಳಾಗಿತ್ತು. ಸೇತುವೆಗಳು ಹಾಳಾಗಿತ್ತು, ಕೆರೆ–ಕಟ್ಟೆಗಳು ಒಡೆದು ಹೋಗಿದ್ದವು. ಅದಕ್ಕೆ ನಾವು 1,600 ಕೋಟಿಯಲ್ಲಿ ಈ ಕೆಲಸ ಕಾರ್ಯಗಳನ್ನು ತೆಗೆದುಕೊಂಡಿದ್ದೇವೆ. ಅಷ್ಟೇ ಅಲ್ಲದೆ, ಜಾನುವಾರಗಳು ಹೋಗಿದ್ದವು. ಜನ ಪ್ರಾಣ ಕಳೆದುಕೊಂಡಿದ್ದರು. ಆ compensensation ಹಣವನ್ನು ಕೂಡ ಅದರಲ್ಲಿ ಕೊಟ್ಟಿದ್ದೇವೆ. ಇಷ್ಟನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಉಪಾಧ್ಯಕ್ಷರೆ, ನನಗೂ ಸ್ವಲ್ಪ information ಇದೆ. ಇಲ್ಲ ಅಂತ ಅಲ್ಲ. ಅವರು ಹೇಳಿದ ಉತ್ತರ ಸರಿ ಅಂತ ಇಟ್ಟುಕೊಳ್ಳೋಣ. ಕೇಂದ್ರ ಸರ್ಕಾರ ಕೊಟ್ಟಿರುವ ದುಡ್ಡು, ಸಾರ್ವಜನಿಕರು ಕೊಟ್ಟಿರತಕ್ಕಂಥ ವಂತಿಗೆ ಮತ್ತು ದಾನಿಗಳು ಮನೆ ಕಟ್ಟಿರತಕ್ಕಂಥದ್ದು, ಇವೆಲ್ಲಾ ದುಡ್ಡಿಗಿಂತ ಹೆಚ್ಚಾಗಿ ಅದು ಬಿಟ್ಟು, ಇವರು ಒಂದು ರೂಪಾಯಿ ಖರ್ಚು ಮಾಡಿದ್ದಾರಾ ನನಗೆ ತೋರಿಸಲಿ. ಸರ್ಕಾರದಿಂದ ಒಂದು ರೂಪಾಯಿ ಕೊಟ್ಟಿದ್ದೇವೆಂದು ಲೆಕ್ಕ ಇಡಲಿ. ಇವೆಲ್ಲಕ್ಕೂ ಸೇರಿಕೊಂಡು ಬೆಳೆ ಪರಿಹಾರಕ್ಕೆ, ಮನೆ ಬಿದ್ದು ಹೋದ ಪರಿಹಾರಕ್ಕೆ, ಸತ್ತವರ ಪರಿಹಾರಕ್ಕೆ flood ಆಗಿರುವುದಕ್ಕೆ ಕೆರೆ ಹೋಗಿರುವುದಕ್ಕೆ ಸೈಟ್ ಮಾಡಿರುವುದಕ್ಕೆ, ಜಮೀನು ಕೊಂಡುಕೊಂಡಿ–ರುವುದಕ್ಕೆ ಎಲ್ಲವೂ ಸೇರಿಸಿ ಎಷ್ಟಾಗಿದೆಂದು ಒಂದು paper ನಲ್ಲಿ black & white ನಲ್ಲಿ ಇಡಿ. ಇದಕ್ಕಿಂತ ಜಾಸ್ತಿ ಆಗಿಬಿಟ್ಟರೆ I will withdraw my statement. 60 ಸಾವಿರ ಮನೆಗಳಿಗೆ 1,40,000 ರೂಪಾಯಿಗಳೆಂದು ಲೆಕ್ಕ ಹಾಕಿದರೆ 840 ಕೋಟಿ ಆಗುತ್ತದೆ. ದಾನಿಗಳೇ 25 ಸಾವಿರ ಮನೆಗಳನ್ನು ಕಟ್ಟಿಕೊಟ್ಟಿದ್ದಾರಲ್ಲ? ಇನ್ನು ಉಳಿದದ್ದು ಎಷ್ಟು ? 439 ಕೋಟಿ ಸಾರ್ವಜನಿಕರು ಕೊಟ್ಟಿದ್ದಾರಲ್ಲ ಆ ದುಡ್ಡು ಎಲ್ಲಿ ? ಕೇಂದ್ರ ಸರ್ಕಾರ ಕೊಟ್ಟಿರುವ 1,698 ಕೋಟಿ ರೂಪಾಯಿ ಎಲ್ಲಿ ? ಇದೆಲ್ಲಾ ಬಿಟ್ಟು ಇವರು ಎಷ್ಟು ಖರ್ಚು ಮಾಡಿದ್ದಾರೆ ?

ಬೆಳೆ ಹಾನಿಗೆ ಎಷ್ಟು ಕೊಟ್ಟಿದ್ದಾರೆ ? ಜಾನುವಾರಗಳು ಸತ್ತುಹೋಗಿರುವುದಕ್ಕೆ ಎಷ್ಟು ಕೊಟ್ಟಿದ್ದಾರೆ ? ಮನುಷ್ಯರು ಸತ್ತುಹೋಗಿರುವುದಕ್ಕೆ ಎಷ್ಟು ಕೊಟ್ಟಿದ್ದಾರೆ ? ತಗಡಿನ ಟೆಂಟ್‌ಗಳನ್ನು ಹಾಕಿದ್ದಾರಲ್ಲ, ಅದಕ್ಕೆ ಎಷ್ಟು ಕೊಟ್ಟಿದ್ದಾರೆ ? 439 ಕೋಟಿ ಪ್ಲಸ್ 1,698 ಕೋಟಿ, ಇದರಲ್ಲಿ ಎಷ್ಟು ಖರ್ಚು ಆಗಿದೆ ? ಇವರು ಎಷ್ಟು ಕೊಟ್ಟಿದ್ದಾರೆ ? ನಾನು ಸುಮ್ಮನೆ ತಪ್ಪು ಮಾಹಿತಿ ಕೊಡುವುದಕ್ಕೆ ಹೋಗುವುದಿಲ್ಲ. I do not want to mislead the House. These are all facts.

ಶ್ರೀ ಅರವಿಂದ ಲಿಂಬಾವಳಿ :– ಆಸರೆ ಯೋಜನೆಯಲ್ಲಿ ಆಂಧ್ರ ಪ್ರದೇಶದಕ್ಕೆ ಏನು ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ :– ಆಂಧ್ರ ಕಟ್ಟಿಕೊಂಡು ಏನು ಮಾಡುತ್ತೀರಿ ? ಕರ್ನಾಟಕದ ಬಗ್ಗೆ ಹೇಳಿ.

ಶ್ರೀ ಅರವಿಂದ ಲಿಂಬಾವಳಿ :– ನಿಮ್ಮ ಸರ್ಕಾರ ಇತ್ತು. ನಿಮ್ಮ ತಪ್ಪು ಹೇಳಿದ ತಕ್ಷಣ ಅದೇನು ಹೇಳುತ್ತೀರಿ ಅಂತ ಹೇಳುತ್ತಾರೆ, ವಿರೋಧ ಪಕ್ಷದ ನಾಯಕರು.

(ಗೊಂದಲ)

Mr. Siddaramaiah :- Can I go and ask Andhra Chief Minister?

ಶ್ರೀ ಅರವಿಂದ ಲಿಂಬಾವಳಿ :– ನಾವು ಇಷ್ಟಾದರೂ ಮಾಡಿದ್ದೇವೆ. Appreciate ಮಾಡುತ್ತಾರೆ. ಅಭಿನಂದಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ. ವಿರೋಧ ಮಾಡಿದರೆ ಹೇಗೆ ? ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಸಿದ್ದರಾಮಯ್ಯ :– ಮಾನ್ಯ ಲಿಂಬಾವಳಿಯವರೆ What is this ? Can I go and ask Andhra Chief Minister ? Ask your people to ask him.

ಶ್ರೀ ಅರವಿಂದ ಲಿಂಬಾವಳಿ :– ವಿರೋಧಕ್ಕಾಗಿ ವಿರೋಧ ಮಾಡಿದರೆ ಹೇಗೆ ?

ಶ್ರೀ ಸಿದ್ದರಾಮಯ್ಯ :– ಯಾವುದೋ ತರ್ಕ ಯಾವುದೋ ಉತ್ತರ ಜಟ್ಟಿ ಬಿದ್ದರೂ ಕೂಡ ನನ್ನ ಮೀಸೆ ಮಣ್ಣಾಗಲಿಲ್ಲವೆಂದು ಹೇಳುತ್ತಾರಲ್ಲ ಇವರು ಆ ರೀತಿ.

ಶ್ರೀ ಅರವಿಂದ ಲಿಂಬಾವಳಿ :– ಮಾನ್ಯ ಸಿದ್ದರಾಮಯ್ಯನವರೆ, ನಿಮ್ಮಿಂದ ಸಣ್ಣ appreciation ಬರುತ್ತದೆಂದು ನಾನು ತಿಳಿದುಕೊಂಡಿದ್ದೇನು.

ನಮ್ಮ Failure ಅನ್ನು ಹೇಳುವುದು ತಮ್ಮ ಕರ್ತವ್ಯ. ಹೇಳಿ, ಅದನ್ನು ಬೇಡವೆಂದು ಹೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ :- ಆಂಧ್ರದವರು ಮಾಡಿದರಲ್ಲ ಅದೂ ಕೂಡ failure.

ಶ್ರೀ ಅರವಿಂದ ಲಿಂಬಾವಳಿ :- ಯಾವುದೇ ಸರ್ಕಾರವು ಮಾಡದಿರುವುದನ್ನು ನಾವು ಮಾಡಿದ್ದೇವೆ. ಇದಕ್ಕೆ ಸಣ್ಣ appreciation ಆದರೂ ಕೊಡಬೇಕಲ್ಲವೇ ?

ಶ್ರೀ ಸಿದ್ದರಾಮಯ್ಯ :- ಪ್ರವಾಹ ಆಗಿ ಮುಂದಿನ ಸೆಪ್ಟೆಂಬರ್‌ಗೆ 3 ವರ್ಷ, 60,000 ಮನೆ ಕಟ್ಟುವುದಕ್ಕೆ ಆಗಿಲ್ಲ. Appreciation ಹೇಳಬೇಕಂತೆ ಇವರಿಗೆ 3 ವರ್ಷ ಆಯಿತು ಮುಂದಿನ ಸೆಪ್ಟೆಂಬರ್‌ಗೆ. ಇದಕ್ಕೆ Appreciate ಮಾಡಬೇಕೆ? 60,000 ಮನೆ ಕಟ್ಟುವುದಕ್ಕೆ ಆಗಲಿಲ್ಲವಲ್ಲ ? ದುಡ್ಡು ಕೇಂದ್ರ ಸರ್ಕಾರದ್ದು ಜನಗಳದ್ದು, ಅದನ್ನು ಬಿಡಿ. ನೀವು ಮನೆ ಕಟ್ಟದೇ ಇರುವುದಕ್ಕೆ Appreciation ಮಾಡಬೇಕೆಂದರೆ ಬರೆದುಕೊಡುತ್ತೇನೆ ಬಿಡಿ.

ಶ್ರೀ ಇ. ತುಕರಾಂ :- ಸಂಡೂರಿನಲ್ಲಿ ಅಂಕಮನಾಳ್ ಕೆರೆ ಒಡೆದು ಹೋಗಿದೆ. ಇವತ್ತಿನವರೆಗೂ ಅಲ್ಲಿ ಮಣ್ಣು ಹಾಕುವುದಕ್ಕೆ ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಮಾನ್ಯ ಉಪಾಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, where they are erring ? Where they have committed mistakes ? Where they are trying to mislead the people ? where they are concealing the facts ? That is my concern ಅಷ್ಟೇ It is my duty. ರಾಜ್ಯದ ಜನರಿಗೆ ಹೇಳಬೇಕಲ್ಲಾ ? ಒಂದು ಲಕ್ಷ ಕೋಟಿ ಬಜೆಟ್ ಮಂಡಿಸಿದ್ದೇವೆ ಅಂತ ಅದನ್ನೇ ತಿಳಿದುಕೊಂಡು ಬಿಟ್ಟರೆ ಜನ? ಆಯಿತು, ಕರ್ನಾಟಕ ಸುಭಿಕ್ಷ ಆಗಿಬಿಟ್ಟಿತ್ತು. ಅಂತ ಆಗಿಬಿಡುತ್ತದೆಯೇ ? ಆ ರೀತಿ ಸುಭಿಕ್ಷ ಆಗುವ ರೀತಿ ಮಾಡಿಲ್ಲ ತಾವು. ಆ ರೀತಿ ಇಲ್ಲ ಇದು ವಾಸ್ತವಿಕವಾಗಿ. ನಿವೇಲ್ಲಾ ಭ್ರಮಾಲೋ-ಕದಲ್ಲಿದ್ದೀರಿ. ಜನರನ್ನೂ ಕೂಡ ಭ್ರಮಾಲೋಕಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರೆಂದು ಹೇಳುವುದಕೋಸ್ಕರ ಹೇಳುತ್ತಿದ್ದೇನೆ. ಇದೆಲ್ಲಾ ನಾನು ಹೇಳಿದ್ದೀನಾ ? ನಿಮ್ಮ manifesto ಅಲ್ಲವೇ ? paper ಎಲ್ಲಾ ಹುಡುಕುತ್ತಿದೆ, manifesto ಸಿಕ್ಕಿತು ತೆಗೆದುಕೊಂಡು ಬಂದಿದ್ದೇನೆ. ಇನ್ನೂ ಒಂದು ವರ್ಷದಲ್ಲಿ ಉಳಿದುದ್ದೆಲ್ಲ ಮಾಡುತ್ತಾರಾ ? ಮಾಡದೇ

ಹೋದರೆ ಜನ ಓಟು ಕೊಡುವುದಿಲ್ಲ. ಅದು ಬೇರೆ ವಿಚಾರ. ಆಮೇಲೆ ನಂಜುಂಡಪ್ಪನವರ ವರದಿ ಅಸಮಾನತೆ ಬಗ್ಗೆ. ಈ ಸಾರಿನೂ 2,800 ಕೋಟಿ ದುಡ್ಡು ಇಟ್ಟಿದ್ದಾರೆ. ಅಸಮಾನತೆ ನಿವಾರಣೆಗೋಸ್ಕರ ಇಲ್ಲಿಯವರೆಗೆ 2007–08, 2008–09, 2009–10, 2010–11 ಪ್ರತಿ ವರ್ಷ 1,500 ಕೋಟಿಯಿಂದ ಶುರು ಮಾಡಿ 2,700 ಕೋಟಿ, 2,800 ಕೋಟಿ, 2,900 ಕೋಟಿ, 2,300 ಕೋಟಿ ಹೀಗೆ allocation ಮಾಡಿಕೊಂಡು ಬಂದಿದ್ದಾರೆ.

ನಂಜುಂಡಪ್ಪ ವರದಿ ಏನು ಹೇಳುತ್ತದೆ ಅಂದರೆ 114 ತಾಲ್ಲೂಕುಗಳಲ್ಲಿ 35 ಹಿಂದುಳಿದವು. ಅತಿ ಹಿಂದುಳಿದವು 40, ಅತ್ಯಂತ ಹಿಂದುಳಿದವು 39, regional imbalance ಹೋಗಬೇಕು ಅನ್ನುವುದಾದರೆ, ನಂಜುಂಡಪ್ಪ ವರದಿಯಲ್ಲಿ ಏನು ಶಿಫಾರಸ್ಸು ಮಾಡಿದ್ದಾರೆ ಎಂದರೆ ರೂ. 31 ಸಾವಿರ ಕೋಟಿ ಖರ್ಚು ಮಾಡಬೇಕು. ಅದರಲ್ಲಿ 15 ಸಾವಿರ ಕೋಟಿ regular allocation ಮೂಲಕ ಬರುತ್ತದೆ. programmes ಮೂಲಕ, ಇನ್ನು ರೂ. 16 ಸಾವಿರ ಕೋಟಿಗಳನ್ನು 7 ವರ್ಷಗಳಲ್ಲಿ ಖರ್ಚು ಮಾಡಿ ಆ regional imbalance, education, infrastructure, health, roads ಇವೆಲ್ಲಾ ಮಾಡಿ ಎಲ್ಲಾ ಜಿಲ್ಲೆಗಳು ಕೂಡಾ inclusive growth ಆಗುವ ರೀತಿಯಲ್ಲಿ ಮಾಡಬೇಕು. This gap should be filled up ಎಂದು ಹೇಳಿದ್ದಾರೆ. ಇವರು ಮಾಡುತ್ತೇವೆ ಎಂದು ಶುರು ಮಾಡಿದರು. ದುಡ್ಡು ಬೇರೆ ಬಿಡುಗಡೆ ಮಾಡಲ್ಲ. ಒಟ್ಟು ರೂ. 12 ಸಾವಿರ ಕೋಟಿ ಚಿಲ್ಲರೆ allocation, ಖರ್ಚು ಮಾಡಿರುವುದು ರೂ. 7 ಸಾವಿರ ಕೋಟಿ ಚಿಲ್ಲರೆ, 5 ವರ್ಷದಲ್ಲಿ ಇದು ಎಷ್ಟು ಬರುತ್ತದೆ. ಅಂದರೆ 67% of the total allocation and the expenditure, ಯಾವಾಗ ಇದನ್ನೆಲ್ಲಾ ಮಾಡುವುದು. Allocation ತೋರಿಸಿರುವುದು ಅಷ್ಟು ನೋಡಿ ಯಡಿಯೂರಪ್ಪನವರು, ಸದಾನಂದಗೌಡರು ರೂ. 2800 ಕೋಟಿ ಇಟ್ಟಿದ್ದಾರೆ. Regional imbalance ಹೋಗಲಾಡಿಸುವುದಕ್ಕೆ ಬಿಡುಗಡೆ ಮಾಡುವುದೂ ಇಲ್ಲ. Only Rs. 7500 ಕೋಟಿ ರೂ. ನಷ್ಟು ಎಷ್ಟೋ ಖರ್ಚು ಮಾಡಿದ್ದೀರಿ, out of Rs. 12 thousand and odd, ರೂ. 5 ಸಾವಿರ ಕೋಟಿ ಖರ್ಚು ಮಾಡುವುದಕ್ಕೆ ಆಗಲಿಲ್ಲ. ಅದಕ್ಕೆ ನಾನು ಹೇಳುವುದು allocation ಬೇರೆ, release ಬೇರೆ, expenditure ಬೇರೆ. ಆಮೇಲೆ ಕೊನೆಯಲ್ಲಿ unspent money ಸಾವಿರಾರು ಕೋಟಿ. ಇನ್ನು ನನಗೆ 2010–11 ರ ಪ್ರತಿ ಸಿಕ್ಕಿಲ್ಲ, ಮಂಡಿಸಬೇಕಾಗಿತ್ತು, ಮಂಡಿಸಿಲ್ಲ ಇವರು, ಎ.ಜಿ. ವರದಿ ಬಂದಿಲ್ಲ, ಏಕೆಂದರೆ

ಅಧಿಕೃತವಾಗಿ ಲೆಕ್ಕ ಹಾಕುವವರು ಅವರೇ, 2008–09ರಲ್ಲಿ ರೂ. 10 ಸಾವಿರ ಚಿಲ್ಲರೆ ಕೋಟಿ unspent money. 2009–10ಕ್ಕೆ ರೂ. 13 ಸಾವಿರ ಕೋಟಿ ಚಿಲ್ಲರೆ, ಬಜೆಟ್‌ನಲ್ಲಿರುವುದು ರೂ. 62 ಸಾವಿರ ಕೋಟಿ, ಅದರಲ್ಲಿ ರೂ. 13 ಸಾವಿರ ಕೋಟಿ unspent money. Then what is the budget size ? ರೂ. 49 ಸಾವಿರ ಕೋಟಿ ಅಷ್ಟೇ. ಆದರೆ ಅವರು ತೋರಿಸಿರುವುದು ಎಷ್ಟು ? ನಾನು ಹೇಳುತ್ತಿದ್ದೇನೆ. ಇವತ್ತು ರೂ. 1 ಲಕ್ಷ 3 ಸಾವಿರ ಕೋಟಿ ಇದೆಯೆಲ್ಲ. ಇದರಲ್ಲಿ, ಕನಿಷ್ಠ 15 ರಿಂದ 18 ಸಾವಿರ ಕೋಟಿ unspent money ಆಗುತ್ತದೆ. ಆಮೇಲೆ ಪ್ರತಿ ವರ್ಷ ರೂ. 7 ಸಾವಿರ ಕೋಟಿ, ರೂ. 8 ಸಾವಿರ ಕೋಟಿ in addition to this supplementary estimates ಲೆಕ್ಕ. ಹೇಳಿದ್ದಾರೆ Resources mobilize ಆಗಲ್ಲ. ಖರ್ಚು ಮಾಡುವುದಕ್ಕೆ ಆಗಲ್ಲ. This is the budget ಇವತ್ತು. ಒಂದು ಲಕ್ಷ ಕೋಟಿ ಬಜೆಟ್ ಮಂಡಿಸಿ, ಜನಗಳಿಗೆ ನೋಡಿ ನಾವು ಭಾರತೀಯ ಜನತಾ ಪಕ್ಷ ಬಂದ ಮೇಲೆ ಎಂದು ಹೇಳುತ್ತಾರೆ. ಅದಕ್ಕೆ ದೊಡ್ಡ ಜಗಳ ನಡೆದು, ಈ ತರಹದ ಬಜೆಟ್‌ಗೆ ಜಗಳ ಆಡಬೇಕಿತ್ತಾ ? ನಾನು ಮಂಡಿಸಬೇಕು, ನಾನು ಮಂಡಿಸಬೇಕು ? ಯಾವ ಪುರುಷಾರ್ಥಕ್ಕೆ ? So, ನಾವು ಹೀಗೆ ಹೇಳುವುದಕ್ಕೆ ಬೇಕಾದಷ್ಟು ಇವೆ. Social Welfare Department, Backward Classes, Miniorities, Social Justice, ಹೀಗೆ 19 ಖಾತೆಗಳು. Chief Minister ಹತ್ತಿರ ಇವೆ. Can we expect justice? Is it humanly possible ? ಆ ದೇವರ ಕೈಯಲ್ಲೂ ಆಗುವುದಿಲ್ಲ. ನಾನು ಬರೀ Finance Minister ಆಗಿ ಒಂದು ದಿನ, ಎರಡು ದಿನ ಹೊರಗಡೆ ಇದ್ದರೆ 50 ಫೈಲ್ ಬರುತ್ತಿತ್ತು. ನಾನು 50 ಫೈಲ್‌ಗಳನ್ನು ನೋಡಬೇಕಾದರೆ ರಾತ್ರಿಯೆಲ್ಲಾ ನಿದ್ದೆ ಕೆಟ್ಟು ನೋಡಬೇಕಾಗುತ್ತಿತ್ತು. ಇವರು ಯಾವಾಗಲೂ ನಗುತ್ತಲೇ ಇರುತ್ತಾರೆ. 19 ಇಲಾಖೆಗಳನ್ನು ಇಟ್ಟುಕೊಂಡು, ಅದು ಯಾವಾಗ file clear ಮಾಡುತ್ತಾರೋ? ಅದು ಯಾವಾಗ function ಗಳಿಗೆ ಹೋಗುತ್ತಾರೋ, ಅದೇನು ಮಾಡುತ್ತಾರೋ ಗೊತ್ತೇ ಆಗುವುದಿಲ್ಲ. ಒಂದು ರೀತಿ miracle ತರಹ ನಡೆಯುತ್ತಿದೆ. 19 ಇಲಾಖೆ ಫೈಲ್‌ಗಳು ಅಂದರೆ ಕನಿಷ್ಠ ಒಂದು ದಿನಕ್ಕೆ 150 ರಿಂದ 200 ಫೈಲ್ ಬರಬೇಕು. 200 ಫೈಲ್‌ಗಳನ್ನು ನೋಡಬೇಕಾದರೆ minimum 8 ರಿಂದ 10 ಗಂಟೆ ಬೇಕು. ಅದ್ಯಾರು ಫೈಲ್ ನೋಡುತ್ತಾರೋ? ಯಾರು ಬರೆಯುತ್ತಾರೋ ? ಏನು ಆಗುತ್ತದೋ ನನಗಂತೂ ಗೊತ್ತಾಗುವುದಿಲ್ಲ. So how can we expect a good governance ? How can this Government deliver goods to the

people of Karnataka, how can we expect a good outcome from the Programmes ? So, this is the position. ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಇಲಾಖೆಗಳದ್ದೂ ಕೂಡಾ ಇದೇ ಪರಿಸ್ಥಿತಿ. Whether it is Power OR Energy, ರೂ. 10 ಸಾವಿರ ಕೋಟಿ ಇಟ್ಟಿದ್ದೇವೆ energyಗೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ 50% subsidy, 50% investment, Purchase ಅದು ಇದು ಎಲ್ಲಾ, ಕಲ್ಲಿದ್ದಲು purchase, generation ಅಂತೂ ಇಲ್ಲ, power generation ಇಲ್ಲ. ಬಳ್ಳಾರಿಯದ್ದು ಒಂದು first unit ಆದ ಮೇಲೆ ಇವರು ಬಂದ ಮೇಲೆ not asingle megawatt power is generated ಬಳ್ಳಾರಿಯಲ್ಲಿ ಫಸ್ಟ್ unit, 500 mega watt ಬಿಟ್ಟರೆ ನಾವು ಉಳಿದುದನ್ನು purchase ಮಾಡುತ್ತೇವೆ. ಏಕೆ ? Is it a prudent management of the finances ? Can we call this as a prudent management of the finances ? Adjust ಮಾಡ್ಕೋಬೇಕು, ವಿಧಿ ಇಲ್ಲದೇ ಮಾಡಬೇಕು T & D Loss ಕಡಿಮೆ ಮಾಡಿಲಿಲ್ಲ. Theft ಕಡಿಮೆ ಮಾಡಲಿಲ್ಲ, ಹೊಸದಾಗಿ sub-stations ಮಾಡಲಿಲ್ಲ. System improvement, ಮಾಡಲಿಲ್ಲ. How can I reduce these subsidies? It is not just subsidies to the farmers, it includes theft, it includes T & D loss, it includes technical loss. 2005–06 ರಲ್ಲಿ ರೂ. 1900 ಕೋಟಿ ಇದ್ದ subsidies ಹೇಗೆ ರೂ. 5300 ಕೋಟಿ ಆಗುತ್ತದೆ. What is the growth ? ಎರಡೂವರೆ ಪಟ್ಟು, more than two and half times subsidy. Can any Government survive ? This is the trend of the wasteful expenditure, unproductive expenditure. This total expenditure of Rs. 5100 crore is unproductive expenditure. ಅಲ್ಲಿ ಹಳ್ಳಿಯಲ್ಲಿ ಕುಡಿಯುವುದಕ್ಕೆ ನೀರಿಲ್ಲ, ನೀರಿಗೆ ದುಡ್ಡು ಕೊಡಿ ಅಂದರೆ ಜಗಳ, ರೂ. 30 ಲಕ್ಷ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ರೂ. 30 ಲಕ್ಷದಲ್ಲಿ ಏನು ಮಾಡಬೇಕು ಹಳ್ಳಿಗಳಲ್ಲಿ ಆಮೇಲೆ ಬರೀ 123 ತಾಲ್ಲೂಕುಗಳಲ್ಲಿ ಮಾತ್ರವಲ್ಲ. ಬೇರೆ ತಾಲ್ಲೂಕಿನಲ್ಲೂ ಕುಡಿಯುವ ನೀರಿನ ಸಮಸ್ಯೆ ಇದೆ. ಪಟ್ಟಣಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಸಿಟಿಯಲ್ಲಿ ಇದೆ. Rural Development ನಲ್ಲಿ Ombudsman ಗಳನ್ನು ಮಾಡಲಿಲ್ಲ. NREGs ಹಣ, ಕೊಟ್ಟ ದುಡ್ಡನ್ನು ಖರ್ಚು ಮಾಡಲ್ಲ. ರೂ. 3000 ಕೋಟಿ ಇದ್ದದ್ದು, ರೂ. 1800 ಕೋಟಿಗೆ ಬಂದು ಬಿಟ್ಟಿತು, ಅದರಲ್ಲಿ release ರೂ. 1200 ಕೋಟಿ, ಖರ್ಚು ಅದಕ್ಕಿಂತ ಕಡಿಮೆ. ನಾನು ಅದಕ್ಕೆ suggest

ಮಾಡಿದೆ. ಕೂಲಿಯವರು ಬರುವುದಿಲ್ಲ. ಸ್ವಲ್ಪ ಜಾಸ್ತಿ ಮಾಡಿ. ಕೇರಳದವರು ಮಾಡುತ್ತಿದ್ದಾರಲ್ಲ ? 125 ಕ್ಕೆ ನೀವು 25 ಸೇರಿಸಿ 150 ಕೊಡಿ. ಬಡವರು ಹೊಟ್ಟೆ ತುಂಬಾ ಊಟ ಮಾಡಲಿ. When Kerala Government is doing. Why not our government ? In order to utilizethe grants from Government of India. ಖರ್ಚು ಮಾಡುವುದನ್ನು ಕಲಿತುಕೊಳ್ಳಬೇಕಲ್ಲ. ಹೀಗಾಗಿ ನಮಗೆ ಬರುವಂತಹ grants ಕೂಡಾ ಕಡಿಮೆ ಆಗಿದೆ. Utilization Certificate ಕೊಟ್ಟಿಲ್ಲ. ಖರ್ಚು ಮಾಡಲು ಆಗುವುದಿಲ್ಲ ಇವರ ಕೈಯ್ಯಲ್ಲಿ. ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳಿಲ್ಲ, ಪಿ.ಡಿ.ಓ.ಗಳಿಲ್ಲ. How can they implement the programme ? ಎರಡೆರಡು ಪಂಚಾಯಿತಿಗಳಿಗೆ ಒಬ್ಬೊಬ್ಬರನ್ನು ಹಾಕಿ ಬಿಡುತ್ತಾರೆ. ಅವನು ಇಲ್ಲೂ ಸಿಗುವುದಿಲ್ಲ ಅಲ್ಲೂ ಸಿಗವುದಿಲ್ಲ. ಪಾಪ ಬಹಳ ಜನ P.D.O. ಗಳು Suicide ಮಾಡಿಕೊಂಡು ಬಿಟ್ಟರು. ಬಹಳ ಜನ resign ಮಾಡಿ ಬಿಟ್ಟರು. ಹೊಸದಾಗಿ appoint ಮಾಡಲಿಲ್ಲ. ಆ ಸುವರ್ಣ ಗ್ರಾಮೋದಯದ ಮೊದಲನೇ ಕಂತಿನದೇ ಇನ್ನೂ ಮುಗಿದಿಲ್ಲ.

ಶ್ರೀ ಬಿ.ಸಿ. ಪಾಟೀಲ್ :- ಸರ್ಕಾರ ಬಂದಾಗ ಮೊದಲನೇ ಕಂತು ಕೊಟ್ಟಿದ್ದು, ಆಮೇಲೆ ಕೊಡಲೇ ಇಲ್ಲ.

ಶ್ರೀ ಸಿದ್ದರಾಮಯ್ಯ :- ನಾನು ಮುಖ್ಯಮಂತ್ರಿಗಳಿಗೆ ಹೋದ ವರ್ಷದಿಂದ ಹೇಳುತ್ತಿದ್ದೇನೆ. ಯಡಿಯೂರಪ್ಪನವರಿಗೂ ಹೇಳಿದೆ, ಇವರಿಗೂ ಹೇಳಿದೆ. ಇವತ್ತು ಬೆಲೆಗಳೆಲ್ಲಾ ಹೆಚ್ಚಾಗಿವೆ, M.L.A. ಗಳ grants 2 ಕೋಟಿ ಮಾಡಿ ಎಂದರೆ ಮಾಡುತ್ತಿಲ್ಲ. ಒಂದು ಲಕ್ಷ ಕೋಟಿ ಬಜೆಟ್ ಮಾಡಿದ ಮೇಲೆ ಎಂ.ಎಲ್.ಎ. ಗಳಿಗೆ 2 ಕೋಟಿನಾದರೂ ಮಾಡಬೇಕಲ್ಲ. ನನ್ನ ಪ್ರಕಾರ 3 ಕೋಟಿ ಮಾಡಬೇಕು. 3 ಕೋಟಿ minimum. ನೀವು ಆಡಳಿತ ಪಕ್ಷದ ಸದಸ್ಯರು influence ಮಾಡಲಿ ಎಂದು ಎಲ್ಲವನ್ನೂ ಹೇಳುತ್ತಿರುವುದು. ನಿಮಗೆ 3 ಕೋಟಿ ಬೇಕೋ, ಬೇಡವೋ ? ಹೇಳಿ ಮತ್ತೆ ಸ್ವಲ್ಪ ಜೋರಾಗಿ ಆಗ ಎಲ್ಲರಿಗೂ ಗೊತ್ತಾಗುತ್ತದೆ. ನೀವು ಹೇಳಿದರೆ ಸ್ವಲ್ಪ ಕಿಮ್ಮತ್ತು ಜಾಸ್ತಿ 3 ಕೋಟಿ ಮಾಡಲಿ. 1 ಲಕ್ಷ ಕೋಟಿಯಲ್ಲಿ 3 ಕೋಟಿ ಮಾಡಿದರೂ ಕೂಡಾ 300 ಜನರಿಗೆ 900 ಕೋಟಿ ಆಯಿತು. ಮಾನ್ಯ ಅಧ್ಯಕ್ಷರೆ, 2010-11ಕ್ಕೆ Excise ನಲ್ಲಿ ಒಂಬತ್ತುವರೆ ಸಾವಿರ ಕೋಟಿ ಬರುತ್ತದೆ ಎಂದು ಹೇಳಿದ್ದಾರೆ. ಮುಂದಿನ ಸಲಕ್ಕೆ 11 ಸಾವಿರ ಚಿಲ್ಲರೆ ಕೋಟಿ, 12 ಸಾವಿರ ಕೋಟಿ ಬರುತ್ತದೆ ಎಂದು ಹೇಳಿಕೊಂಡಿದ್ದಾರೆ. Excise ಸ್ವಲ್ಪ tight ಮಾಡಿದರೆ ಸಾಕು ಇನ್ನೂ ಒಂದು ಸಾವಿರ ಕೋಟಿ ಜಾಸ್ತಿ

ಬಂದು ಬಿಡುತ್ತದೆ. ಯಾಕೆಂದರೆ ಈಗೆಲ್ಲಾ ಕುಡಿಯುವವರು ಜಾಸ್ತಿ. Whisky ಬೆಲೆ ಜಾಸ್ತಿ ಆಗಿದೆಯೆಲ್ಲ ರವೀಂದ್ರನಾಥ್ ಅವರೆ? ಹಳ್ಳಿಗಳಲ್ಲಿ ಸಾರಾಯಿ ನಿಲ್ಲಿಸಿದ ಮೇಲೆ ಇದನ್ನೇ ಕುಡಿಯುವುದು.

ಶ್ರೀ ಗೋವಿಂದ. ಎಂ. ಕಾರಜೋಳ :– ನಮ್ಮ ಕಡೆ ಹೇಳುತ್ತಾರೆ. ತೊಘಲಕ್‌ನೇನ್ ಬಲ್ಲ ತಿಮ್ಮಣ್ಣ ಅಂತ. ಇದರ ಬಗ್ಗೆ ಅವರನ್ನ ಕೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ :– ಗೊತ್ತಿಲ್ಲವಾ ಅವರಿಗೆ? 'ಯಾರಿಗೆ ಕೇಳಲಿ'? ಉಮೇಶ್ ಕತ್ತಿಗೆ ಕೇಳಲಾ!

ಶ್ರೀ ಗೋವಿಂದ. ಎಂ. ಕಾರಜೋಳ :– ಉದಾಸಿಯವರನ್ನು ಕೇಳಿ.

ಶ್ರೀ ಸಿದ್ದರಾಮಯ್ಯ :– ಪಾಪ, ಉದಾಸಿಯವರಿಗೆ ಗೊತ್ತಿಲ್ಲ. Mr. Umesh Katthi is the right man. Mr. Renuakacharya ಈಗ ಹಳ್ಳಿಗಳಲ್ಲಿ Whisky ಕುಡಿಯುವವರು ಜಾಸ್ತಿಯಾಗಿಲ್ಲವೇನು? ನಿಮ್ಮದು Tax ಒಂಬತ್ತುವರೆ ಸಾವಿರ ಕೋಟಿ ಆಗಿದೆ ಅಲ್ಲವಾ ಈ ವರ್ಷಕ್ಕೆ 10 ಸಾವಿರ ಕೋಟಿನೋ, ಒಂಬತ್ತುವರೆ ಸಾವಿರಾನೋ ?

ಶ್ರೀ ಎಂ.ಪಿ. ರೇಣುಕಾಚಾರ್ಯ :– ಒಂಬತ್ತೂವರೆ ಸಾವಿರ ಕೋಟಿ ಆಗಿದೆ.

ಶ್ರೀ ಸಿದ್ದರಾಮಯ್ಯ :– ಒಂಬತ್ತುವರೆ ಸಾವಿರ ಕೋಟಿ ಆಗಿದೆ. ಮುಂದಿನ ವರ್ಷಕ್ಕೆ ಹನ್ನೊಂದುವರೆ ಸಾವಿರ ಕೋಟಿ ಆಗುತ್ತದೆ ಅಲ್ಲವಾ ? ಹಳ್ಳಿಗಳಲ್ಲಿ ಸಾರಾಯಿ ಕುಡಿಯುತ್ತಿದ್ದವರೆಲ್ಲಾ whisky ಕುಡಿಯುತ್ತಿದ್ದಾರಲ್ಲವಾ ಈಗ ? ಹೇಳ್ರಿ ಸತ್ಯನಾ ?

ಶ್ರೀ ಕಳಕಪ್ಪ ಬಂಡಿ :– ಸರ್, ಸಿದ್ದರಾಮಯ್ಯನವರೆ, ತಾವು ಉದಾಸಿಯವರಿಗೆ ಪಾಪ ಗೊತ್ತಿಲ್ಲ ಎಂದು ಹೇಳಿದಿರಿ. ನಿಮ್ಮ ಭಾವನೆ ತಪ್ಪು.

ಶ್ರೀ ಸಿದ್ದರಾಮಯ್ಯ :– ನನಗೆ ಗೊತ್ತಿಲ್ಲ. ಅವರದು ಇದೆಯಾ.

ಶ್ರೀ ಕಳಕಪ್ಪ ಬಂಡಿ :– ಸರ್, ನೀವು ಕೇಳಿ ಸರ್, ಎಲ್ಲಾ ಗೊತ್ತಿದೆ ಅವರಿಗೆ 6–8 ಭಾಷೆ ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ :– ಕುಡಿದವರೆಲ್ಲಾ ಅವರು, ಪಾಪ ನೀನು ಸಿಕ್ಕಿ ಹಾಕಿಕೊಂಡ್ಯಲ್ಲ !

ಶ್ರೀ ಎಂ.ಪಿ. ರೇಣುಕಾಚಾರ್ಯ :– ಸರ್, ಇಲ್ಲ ನಾನು ಯಾವುದರಲ್ಲೂ ಸಿಕ್ಕಿ ಹಾಕಿಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ :– ಪೇಪರ್‌ನಲ್ಲಿ ಬಂದಿದೆಯಲ್ರಿ.

ಶ್ರೀ ಎಂ.ಪಿ. ರೇಣುಕಾಚಾರ್ಯ :– ಮೊನ್ನೆ ಪ್ರಸ್ತಾಪ ಮಾಡಿದಿರಂತೆ ನಾನು ಇರಲಿಲ್ಲ. ನಾನು ಗುಲ್ಬರ್ಗಾಕ್ಕೆ ಹೋಗಿದ್ದೆ.

ಶ್ರೀ ಸಿ.ಎಂ. ಉದಾಸಿ :– ಕುಡಿಯುವವರು, ಕುಡಿಯದವರ ಬಗ್ಗೆ ಇಲ್ಲಿ ಏಕೆ ಚರ್ಚೆ ?

ಶ್ರೀ ಸಿದ್ದರಾಮಯ್ಯ :– ನಾನು ಉಮೇಶ್ ಕತ್ತಿ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. He is a good friend. ನಾವೆಲ್ಲಾ ಜೊತೆಯಲ್ಲಿ ಕುಡಿದಿದ್ದೇವೆ. ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಸಿ.ಎಂ. ಉದಾಸಿ :– ಅಲ್ಲ, ಕುಡಿಯುವವರೆಲ್ಲಾ ಸಭ್ಯಸ್ಥರಲ್ಲ ಎಂದು ನಾನು ತಿಳಿದುಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ :– ನಾನು ಕುಡೀತಿನಪ್ಪ ನಾನು ಒಂದೊಂದು ಸಾರಿ ಕುಡಿಯುತ್ತೇನೆ.

ಶ್ರೀ ಸಿ.ಎಂ. ಉದಾಸಿ :– ಪ್ರಶ್ನೆ ಅದಲ್ಲ. ಅದರ ಬಗ್ಗೆ ಏಕೆ ಚರ್ಚೆ? ಪಾಪ, ನನ್ನ ಬಗ್ಗೆ ಏಕೆ ಮಾತನಾಡುವುದು?

ಶ್ರೀ ಸಿದ್ದರಾಮಯ್ಯ :– ಪಾಪ ಬೇಡ ತಪ್ಪು.

ಶ್ರೀ ಉಮೇಶ್ ಕತ್ತಿ :– ಹಳ್ಳಿಗಳಲ್ಲಿ ಸಾರಾಯಿ ಕುಡಿಯವರು ಹೆಚ್ಚು, ನಿಜ. ಅದಕ್ಕೆ ಕಾರಣಗಳು ಬಹಳ ಇವೆ. ಒಂದು ಕಡೆ ಬರಗಾಲದ ಛಾಯೆ. ಬೆಲೆ ಕುಸಿತ. ಆಮದು ನೀತಿ ಇವೆಲ್ಲಾ ಕಾರಣಗಳಿಂದ ಜನ ಕುಡಿಯದೆ ಏನು ಮಾಡುತ್ತಾರೆ ? ಕುಡಿಯದೆ ಬೇರೆ ಮಾರ್ಗವಿಲ್ಲ. ಹಾಗಾಗಿ ಹಳ್ಳಿ ಜನ ಕುಡಿಯುತ್ತಿದ್ದಾರೆ. ಅದನ್ನು ಅರ್ಥ ಮಾಡಿಕೊಂಡು ತಾವು ಕೇಂದ್ರ ಸರ್ಕಾರಕ್ಕೆ ತಿಳಿಸುವಂತಹ ಕೆಲಸ ಮಾಡಿ.

ಶ್ರೀ ಸಿದ್ದರಾಮಯ್ಯ :– ನಾನು ಸುಮ್ಮನೆ ಏಕೆ ಹೇಳಿದೆ ಎಂದರೆ ಹಳ್ಳಿಗಳಲ್ಲಿ ಎಲ್ಲರಿಗೂ ಅನುಭವವಿದೆ. ಸಾರಾಯಿ ನಿಲ್ಲಿಸಿದ ಮೇಲೆ ಎಲ್ಲಾ Whisky ಕುಡಿಯುವುದಕ್ಕೆ ಶುರು ಮಾಡಿದ್ದಾರೆ. ಏನಾಗಿದೆ ಎಂದರೆ ಸಿ.ಎಲ್.–2 ಶಾಪ್‌ಗಳಲ್ಲಿ ಸಾರಾಯಿ ನಿಲ್ಲಿಸುವ ಮೊದಲು ಎಷ್ಟು ಖರ್ಚಾಗುತ್ತಿತ್ತು, ಅದರ ಮೂರು ಪಟ್ಟು ಖರ್ಚಾಗುತ್ತಿದೆ Whisky, ಅಲ್ವಾ ರೇಣುಕಾಚಾರ್ಯರೇ ?

ಶ್ರೀ ಉಮೇಶ್ ಕತ್ತಿ :– ಸಾರಾಯಿ ಮತ್ತು ಐ.ಎಂ.ಎಲ್. ಬಂದ ಮೇಲೆ ಕುಡಿಯುವವರು ಹೆಚ್ಚಾಗಿಲ್ಲ. ಆದರೆ ವಿಸ್ಕಿಯಾಗಿ ಪರಿವರ್ತನೆಯಾದ ಮೇಲೆ I.M.L., ಅರ್ರ್ಯಾಕ್, ಐ.ಎಂ.ಎಲ್.ಗಳ ಲೆಕ್ಕ ಮಾಡಿದಾಗ 25 ಕೋಟಿ ಲೀಟರ್‌ನಷ್ಟು ಸಾರಾಯಿಯನ್ನು ರಾಜ್ಯದ ಹಳ್ಳಿಗಾಡಿನಲ್ಲಿ ಅಥವಾ ಶಹರಗಳಲ್ಲಿ ಕುಡಿಯುತ್ತಿದ್ದರು. ಇವತ್ತಿಗೂ 25 ಕೋಟಿ, 28 ಕೋಟಿ bulk ಲೀಟರ್

ಸಾರಾಯಿಯನ್ನು ಕುಡಿಯುತ್ತಿದ್ದಾರೆ. ಸಾರಾಯಿ Quantity ಯಲ್ಲಿ ವ್ಯತ್ಯಾಸವಾಗಿಲ್ಲ. Quantity is the same.

ಶ್ರೀ ಸಿದ್ದರಾಮಯ್ಯ :– I totally agree with Mr. Umesh Katthi. Because he is having a distillery, ಅವರು authenticated ಆಗಿ ಹೇಳುತ್ತಾರೆ. It is a fact. ಎಲ್ಲಿ ಒಂದು ಸಾವಿರ ಕ್ವಾರ್ಟರ್ ಮಾರಾಟವಾಗುತ್ತಿತ್ತು. ಅಲ್ಲಿ 3 ಸಾವಿರ ಕ್ವಾರ್ಟರ್ ಮಾರಾಟ ಆಗುತ್ತಿದೆ. ಎಲ್ಲಿ ಒಂದು ಸಾವಿರ ಕೇಸ್ ಮಾರಾಟ ಆಗುತ್ತಿತ್ತೋ ಅಲ್ಲಿ 3 ಸಾವಿರ ಕೇಸ್ ಮಾರಾಟ ಆಗುತ್ತಿದೆ. 1:3 ಅನುಪಾತ ಆಗಿದೆ. ಅದರಲ್ಲಿ ಒಂದು ಸಾವಿರಕ್ಕಿಂತ ಹೆಚ್ಚಾಗಿ ಹಳ್ಳಿಗಳಲ್ಲಿ license ಇಲ್ಲದೆ ಮಾರಾಟ ಮಾಡುತ್ತಿದ್ದಾರೆ. ಅದೊಂದು amendment ಮಾಡಿರಿ. ನಾನು ಅದನ್ನೇ suggest ಮಾಡೋಣ ಅಂತಿದ್ದೆ.

ಶ್ರೀ ಉಮೇಶ್ ಕತ್ತಿ :– ಮೊದಲು ಈ ರಾಜ್ಯದಲ್ಲಿ ಒಟ್ಟು 2 ಕೋಟಿ ಲೀಟರ್ ನಷ್ಟು ಸಾರಾಯಿ ಮಾರಾಟವಾಗುತ್ತಿತ್ತು. ಸಿದ್ದರಾಮಯ್ಯನವರು ಹಣಕಾಸಿನ ಮಂತ್ರಿಯಾಗಿದ್ದಾಗ ನಾವು ನೀವು ಜೊತೆಯಲ್ಲಿದ್ದಾಗ ಕಟ್ಟುನಿಟ್ಟಾಗಿ ಏನು ಸಾರಾಯಿ ನೀತಿ ತಂದರೋ 25 ಕೋಟಿ ಲೀಟರ್‌ಗೆ ಹೋಯಿತು. ಆದರೆ ಐ.ಎಂ.ಎಲ್. ನಲ್ಲಿ same quantity ಇದೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್ :– ವಿಸ್ಕಿ, ಈಗ ಬಡವರಿಗೆ ತೆರಿಗೆ ಬೀಳುತ್ತಿದೆ. ಅದಕ್ಕೆ ಸಾರಾಯಿ ಪ್ರಾರಂಭ ಮಾಡಿ ಎಂದು ಹೇಳುತ್ತಿದ್ದೇನೆ. ಹಳ್ಳಿಯಲ್ಲಿ ಬಡವರಿಗೆ ಬೆಲೆ ಜಾಸ್ತಿಯಾಗುತ್ತಿದೆ.

ಶ್ರೀ ಬಿ. ರಮಾನಾಥ ರೈ :– ಎಂ.ಎಸ್.ಐ.ಎಲ್.ಗೆ shop ಕೊಡುತ್ತಿದ್ದೀರಿ. ಒಂದೊಂದು ತಾಲ್ಲೂಕಿಗೆ 10 ಕೊಟ್ಟರೆ ನಿಮಗೂ ಅನುಕೂಲವಾಗುತ್ತದೆ. ಅನಧಿಕೃತ ಮಾರಾಟವೂ ಕಡಿಮೆಯಾಗುತ್ತದೆ.

ಶ್ರೀ ಎಂ.ಪಿ. ರೇಣುಕಾಚಾರ್ಯ :– ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಉಪಾಧ್ಯಕ್ಷರೆ, ನಾನೇನು ಹೇಳುತ್ತೇನೆ ಎಂದರೆ, ಸಾರಾಯಿಯಿಂದ ಉತ್ಪನ್ನ ಜಾಸ್ತಿಯಾಗಿದೆ. ಇನ್ನೂ ಸ್ವಲ್ಪ tight ಮಾಡಿದರೆ, ಇನ್ನೂ ಸ್ವಲ್ಪ ಜಾಸ್ತಿ ಆದಾಯ ಬರುತ್ತದೆ. MLA ಗಳ grants ಇದೆಯಲ್ಲಾ ಅದನ್ನು 300 ಕೋಟಿ ರೂ.ಗಳಿಂದ 900 ಕೋಟಿ ರೂ.ಗಳಿಗೆ ಏರಿಸಿ. ಏಕೆಂದರೆ MP ಗಳಿಗೆಲ್ಲಾ 2 ಕೋಟಿ ರೂ.ಗಳು ಇದ್ದದ್ದನ್ನು 5 ಕೋಟಿ ರೂ.ಗಳಿಗೆ ಏರಿಸಿದ್ದಾರೆ. ಅವತ್ತು ಇದ್ದ ಬೆಲೆಗೂ, ಇವತ್ತಿನ ಬೆಲೆಗೂ ಬಹಳ ಹೆಚ್ಚು ಕಡಿಮೆಯಾಗಿದೆ. ನಾವು ಇವತ್ತು 2 ಲಕ್ಷ ಅಥವಾ 3 ಲಕ್ಷ ರೂ.ಗಳನ್ನು ಯಾವ ಊರಿಗೂ ಕೊಡುವುದಕ್ಕಾಗುವುದಿಲ್ಲ. 5 ರಿಂದ 6 ಲಕ್ಷ ರೂ.ಗಳನ್ನು

ಕೊಡಬೇಕಾಗುತ್ತದೆ. ಸಮುದಾಯ ಭವನಕ್ಕೆ ಕೊಡಿ ಎನ್ನುತ್ತಾರೆ, ರಸ್ತೆ ಮಾಡಿಸಿ ಎನ್ನುತ್ತಾರೆ, ಕುಡಿಯುವ ನೀರಿಗೆ ಕೊಡಿ ಎನ್ನುತ್ತಾರೆ. MLA ಗಳಿಗೆ ಬಹಳ ಕಷ್ಟವಾಗಿದೆ, ಅವರುಗಳಿಗೆ ಒತ್ತಾಯ ಬಹಳ ಜಾಸ್ತಿಯಾಗಿದೆ. ಆದ್ದರಿಂದ, MLA ಗಳ grants ಅನ್ನು ಕನಿಷ್ಠ 3 ಕೋಟಿ ರೂ.ಗಳಿಗೆ ಏರಿಸಿ ಎಂದು ನಾನು ನಿಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ರಮಾನಾಥ ರೈ :– ಅಷ್ಟೇ ಹಣ ಕೊಟ್ಟಿಲ್ಲ. ಬಜೆಟ್ ಮೊತ್ತ ಜಾಸ್ತಿಯಾಗಿದ್ದರೂ ಏನೂ ಪ್ರಯೋಜನವಾದಂತಾಗುವುದಿಲ್ಲ. ಆದ್ದರಿಂದ ಹೆಚ್ಚಿಗೆ ಹಣ ಕೊಡಿ.

ಶ್ರೀ ಸಿದ್ದರಾಮಯ್ಯ :– Money value ಕಡಿಮೆಯಾಗುತ್ತಿದೆ. ಆ ಕಾರಣದಿಂದ 3 ಕೋಟಿ ರೂ.ಗಳಿಗೆ ಮಾಡುವುದು ಸೂಕ್ತವೆಂದು ನನಗನಿಸುತ್ತದೆ. This is a right demand also. I am making a reasonable demand. ಇದನ್ನು ಮಾಡುವುದರಿಂದ ಎಲ್ಲರಿಗೂ ಉಪಯೋಗವಾಗುತ್ತದೆ. ಆದ್ದರಿಂದ ಇದನ್ನು ಮಾಡಲೇಬೇಕು. ಇದರ ಜೊತೆಗೆ Housing Departmentಗೆ ಸೇರಿದಂತೆ ಇವರ manifesto ದಲ್ಲಿ ಒಂದು ಭರವಸೆ ನೀಡಿದ್ದರು. ಸರ್ಕಾರ ಕಡು ಬಡವರಿಗೆ ಮಂಜೂರು ಮಾಡಿದ ಆಶ್ರಯ, ಇಂದಿರಾ ಆವಾಸ್ ಇತ್ಯಾದಿ ಎಲ್ಲಾ ವಸತಿ ಸಾಲಗಳ ಮನ್ನಾ ಮಾಡಲಾಗುವುದು ಎಂದು ನೀವು ಭರವಸೆ ನೀಡಿದ್ದೀರಿ. ಅದನ್ನು ಈಗಲಾದರೂ ಮಾಡಿ. ಅದಕ್ಕೆ ಬಹಳ ದುಡ್ಡೇನೂ ಬೇಕಾಗಿಲ್ಲ. ಆಶ್ರಯ ಮನೆಗಳ ಫಲಾನುಭವಿಗಳಿಗೆ ಕೊಟ್ಟಿದ್ದಂತಹ ಸಾಲವನ್ನು ವಸೂಲಿ ಮಾಡುವುದು ಬಹಳ ಕಷ್ಟ. Backward Classes ನವರಿಗೆ ನೀರಾವರಿ ಬೋರ್‌ವೆಲ್ ತೆಗೆದಿರುವುದಕ್ಕೆ 25 ಸಾವಿರ ರೂ.ಗಳವರೆಗೆ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಅದರ ಜೊತೆಗೆ ವಿದ್ಯಾರ್ಥಿ ವೇತನಗಳೆಲ್ಲಾ ಬಾಕಿ ಇವೆ. ಅವುಗಳನ್ನೆಲ್ಲಾ ಕೂಡಲೇ ಬಿಡುಗಡೆ ಮಾಡಬೇಕು. ಕೆಲವೊಂದು ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಕೊಡಿ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಅದರ ಜೊತೆಗೆ, ಇವುಗಳಿಗೆಲ್ಲಾ priority ಮೇಲೆ ಕೊಡಿ. ಬಡವರ ಮನೆಗಳ ಮೇಲೆ ಇದ್ದಂತಹ ಸಾಲವನ್ನು ಮನ್ನಾ ಮಾಡುತ್ತೇವೆಂದು ನಿಮ್ಮ manifesto ದಲ್ಲಿ ನೀವೇ ಹೇಳಿದ್ದೀರಿ. ಅದನ್ನು ಕೂಡಲೇ ಮಾಡಬೇಕು. ಕೇವಲ ಬಡ್ಡಿ ಮನ್ನಾ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅಸಲು ಜೊತೆಗೆ ಬಡ್ಡಿ ಸೇರಿದಂತೆ ಎಲ್ಲವನ್ನೂ ಮನ್ನಾ ಮಾಡಬೇಕು. ತಾವೇ ಎಲ್ಲವನ್ನೂ ಮನ್ನಾ ಮಾಡುತ್ತೇವೆಂದು ಭರವಸೆ ನೀಡಿದ್ದೀರಿ. ಅದನ್ನು ಕಾರ್ಯಗತಗೊಳಿಸಿ.

ಕೊನೆಯದಾಗಿ, ಲೋಕಾಯುಕ್ತ ನೇಮಕದ ಬಗ್ಗೆ ಹೇಳುವುದಾದರೆ, ಲೋಕಾಯುಕ್ತರ ನೇಮಕವನ್ನು ಆದಷ್ಟು ಜಾಗ್ರತೆ ಮಾಡಬೇಕು. ಭ್ರಷ್ಟಾಚಾರದ ವಿರುದ್ಧ ನಾವು ಹೋರಾಟ ಮಾಡುತ್ತೇವೆ, ಲೋಕಾಯ್ತುಕವನ್ನು ಬಲವರ್ಧನೆ ಮಾಡುತ್ತೇವೆ ಎಂದು ಹೇಳಿ ಕೊಳ್ಳುವವರು. ಬಹಳ ದಿನಗಳವರೆಗೆ ಲೋಕಾಯುಕ್ತ ಹುದ್ದೆಯನ್ನು ಖಾಲಿ ಬಿಡುವುದು ಸರಿಯಲ್ಲ. ಆ ಕಾರಣದಿಂದ ಕೂಡಲೇ ಲೋಕಾಯುಕ್ತರನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ದಯಮಾಡಿ ಸರ್ವಜ್ಞ ಪ್ರಾಧಿಕಾರವೊಂದನ್ನು ರಚಿಸಿ ತಮಿಳುನಾಡಿನವರು ಸರ್ವಜ್ಞನನ್ನು ತೆಗೆದುಕೊಂಡು ಹೋಗಿ ಅಲ್ಲಿ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದಾರೆ. Why not we ? ಸರ್ವಜ್ಞ ನಮ್ಮವನು, ಧಾರವಾಡದ ಹಿರೇಕೆರೂರಿನಲ್ಲಿ ಹುಟ್ಟಿದವನು. ಸರ್ವಜ್ಞ ಪ್ರಾಧಿಕಾರವೊಂದನ್ನು ರಚಿಸಿ, ಅವರು ಹುಟ್ಟಿದಂತಹ ಸ್ಥಳ, ಅವರು ಓಡಾಡಿದಂತಹ ಸ್ಥಳಗಳನ್ನು ಅಭಿವೃದ್ಧಿಪಡಿಸುವಂತಹ ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಒಟ್ಟಾರೆಯಾಗಿ, ಈ ಬಜೆಟ್ ಚೆನ್ನಾಗಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ :– ನಾವು ಬಜೆಟ್‌ನಲ್ಲಿ SC / ST ಗಳಿಗೆ ಸಾಲ ಮನ್ನಾ ಮಾಡಿದ್ದೇವೆ. ಅದರ ಬಗ್ಗೆ ನೀವು ಮಾತನಾಡಲೇ ಇಲ್ಲ. ಆ ಬಗ್ಗೆ ನೀವು ಹೇಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಸಿದ್ದರಾಮಯ್ಯ :– ಅವರ ಸಾಲವನ್ನು ನೀವು ಮನ್ನಾ ಮಾಡಿಲ್ಲ. ಅವರ ಸಾಲವನ್ನು ಮನ್ನಾ ಮಾಡಿ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ :– ನಾವು ಸಾಲ ಮನ್ನಾ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ :– ಹಾಗಿದ್ದರೆ, thank you. 25 ಸಾವಿರ ರೂ.ಗಳವರೆಗೆ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಎಷ್ಟು ಸಾಲ ಇರುತ್ತದೋ, ಎಲ್ಲವನ್ನೂ ಮನ್ನಾ ಮಾಡಿ. ಇನ್ನೊಂದು ಸ್ವಲ್ಪ ಸಾಲವನ್ನು ಏಕೆ ಉಳಿಸಿಕೊಳ್ಳುತ್ತೀರಿ ?

ಶ್ರೀ ಗೋವಿಂದ ಎಂ. ಕಾರಜೋಳ :– ನಾವು ಎಲ್ಲವನ್ನೂ ನೋಡಿದ್ದೇವೆ. ಅದಕ್ಕಿಂತ ಹೆಚ್ಚು ಸಾಲ ಇಲ್ಲ. SC / ST ಗಳಿಗೆ ಬಹಳ ಕಡಿಮೆ ಸಾಲ ಕೊಡಲಾಗಿದೆ.

ಶ್ರೀ ಸಿದ್ದರಾಮಯ್ಯ :– ಏಕೆ ತಾಪತ್ರಯ ? ಇರುವ ಸಾಲವನ್ನೆಲ್ಲಾ ಮನ್ನಾ ಮಾಡಿಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ :– 25 ಸಾವಿರ ರೂ.ಗಳವರೆಗೆ ಅಸಲು + ಬಡ್ಡಿ ಮನ್ನಾ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ :– Backward Classes ನವರಿಗೆ ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಇವರಿಗೆ ಸಾಲ, ಅಸಲು ಮತ್ತು ಬಡ್ಡಿ ಎಲ್ಲವೂ ಸೇರಿ ಬರಬೇಕಾದಂತಹ ಬಾಕಿ ಒಟ್ಟು 323 ಕೋಟಿ 34 ಲಕ್ಷ ರೂ.ಗಳಿವೆ. Backward Classes ನವರಿಗೆ ಇದನ್ನು ಮನ್ನಾ ಮಾಡಿಬಿಡಿ. ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ ಏಕೆ ? Minorities ತೆಗೆದುಕೊಂಡಿರುವ ಸಾಲವನ್ನೂ ಕೂಡ ಮನ್ನಾ ಮಾಡಿ. Atleast, ಇದೆಲ್ಲವನ್ನೂ ಮಾಡಿದರೆ ಬಡವರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಅವರು ಸಾಲಗಾರರಾಗಿ ಬಿಡುತ್ತಾರೆ. ಆದ್ದರಿಂದ, ಇದನ್ನೆಲ್ಲಾ ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ಇದ್ದಾಗ, 1998ನಲ್ಲೋ ಅಥವಾ 2004ರಲ್ಲೋ, Minority ನವರಿಗೆ separate Directorate, separate Secretariat ಮಾಡಿದ್ದೆ. ನೀವೂ ಸಹಾ ಹಿಂದುಳಿದ ವರ್ಗಗಳವರಿಗೆ, separate Directorate, separate Secretariat ಮಾಡಿ. ಅದರಿಂದ speedy implementation of the programmes ಆಗುತ್ತದೆ. ಮೊದಲೆಲ್ಲಾ ಕಡಿಮೆ ದುಡ್ಡು ಇತ್ತು. ಈಗ ಬಜೆಟ್ ಗಾತ್ರ ಜಾಸ್ತಿಯಾಗಿದೆ. allocation ಜಾಸ್ತಿಯಾಗಿದೆ. To implement programmes effectively and speedily ಇದು ಬಹಳ ಮುಖ್ಯ. ಅಲ್ಲವೇ, ಮಾನ್ಯ ಕಾರಜೋಳರವರೇ ?

ಶ್ರೀ ಗೋವಿಂದ ಎಂ. ಕಾರಜೋಳ :– ಈಗಾಗಲೇ ಅದರ ಬಗ್ಗೆ ಆಲೋಚನೆ ನಡೆದಿದೆ.

ಶ್ರೀ ಸಿದ್ದರಾಮಯ್ಯ :– ಈಗಾಗಲೇ ಅದರ ಬಗ್ಗೆ ಆಲೋಚನೆ ನಡೆದಿದೆಯೇ ? ಹಾಗಿದ್ದರೆ, very good. ಅದನ್ನು ಮಾಡಿ. ಹಿಂದುಳಿದ ವರ್ಗಗಳವರಿಗೆ ಬಜೆಟ್‌ನಲ್ಲಿ ಒಂದು ಸಾವಿರ ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಬೆನ್ನು ತಟ್ಟಿಕೊಳ್ಳುವುದಕ್ಕೆ ಹೋಗಬೇಡಿ. ಅವರನ್ನು ತಪ್ಪು ದಾರಿಗೆ ಎಳೆಯಬೇಡಿ. ಅವರಿಗೆ ಎರಡು ಸಾವಿರ ಕೋಟಿ ರೂ.ಗಳನ್ನು ಕೊಡಿ. SC/ST ಗಳವರಿಗೆ ಅದಕ್ಕಿಂತ ಇನ್ನೂ ಜಾಸ್ತಿ ಕೊಡಿ. Minority ಯವರಿಗೆ ಇನ್ನೂ ಜಾಸ್ತಿ ಕೊಡಿ. We don't mind. Social Justice ಆಗಬೇಕು. ಇಷ್ಟನ್ನು ಹೇಳಿ, ಈ ಬಜೆಟ್ ಏನಿದೆಯೋ, it is not pro-growth oriented. ಒಂದು ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡಿಸಿದ್ದೇವೆ ಎಂದು ಸುಮ್ಮನೆ ಜನರನ್ನು

ಭ್ರಮಾಲೋಕದಲ್ಲಿ ಇಡುವುದಕ್ಕೆ ಹೋಗಬೇಡಿ. Debt burden ಜಾಸ್ತಿಯಾಗುತ್ತಿದೆ. ಒಂದು ದಿನ debt trap ಗೆ ಹೋಗುವ ಸಾಧ್ಯತೆ ಜಾಸ್ತಿ ಇದೆ. Ex-Chief Secretary ಮಾನ್ಯ ಭಟ್ಟಾಚಾರ್ಯರ ಅಧ್ಯಕ್ಷತೆಯಲ್ಲಿ ರಚಿಸಿದಂತಹ Expenditure Commissions ನ ನಾಲ್ಕು reports ಏನಿವೆ. ಅವುಗಳಲ್ಲಿಯ ಶಿಫಾರಸ್ಸುಗಳನ್ನು ಜಾರಿಗೆ ತರಬೇಕು. Commission ವೊಂದನ್ನು ರಚಿಸಿ, ಅದರಿಂದ report ತೆಗೆದುಕೊಂಡು, ಅದನ್ನು ಕಪಾಟಿಗೆ ಹಾಕಿ ಕುಳಿತರೆ ಏನು ಪ್ರಯೋಜನ ಆಗುವುದಿಲ್ಲ. ಆ ವರದಿಗಳಲ್ಲಿಯ ಶಿಫಾರಸ್ಸುಗಳನ್ನು ಜಾರಿಗೆ ತರಬೇಕು. Prudent management of the finances ಆದಂತೆ ಇಲ್ಲಿ ಕಾಣುತ್ತಿಲ್ಲ. ಅದನ್ನು ನಾವು ಎಲ್ಲೂ ಕೂಡ ಕಾಣುತ್ತಿಲ್ಲ. ಕೃಷಿ ಬಜೆಟ್‌ನಿಂದ ರೈತರಿಗೆ ಏನೂ ಉಪಯೋಗವಾಗಿಲ್ಲ. ಈ ವರ್ಷದ್ದೂ ಕೂಡ ಹಿಂದಿನ ವರ್ಷದ ತರಹದ್ದೇ ಇದೆ. ಅದೇ ಹಳೆಯ programmes ಅನ್ನೇ ಇದರಲ್ಲೂ repeat ಮಾಡಿದ್ದಾರೆ. ಆ ಕಾರಣದಿಂದ, it is not pro-growth. ಬಜೆಟ್ ರಾಜ್ಯದ ಬೆಳವಣಿಗೆಗೆ ಪೂರಕವಾಗಿಲ್ಲ. ಈ ಬಗ್ಗೆ ಆಗಲೇ ಅನೇಕ ಅಂಕಿ ಅಂಶಗಳನ್ನು ಕೊಟ್ಟು ನಾನು ಹೇಳಿದ್ದೇನೆ. Growth ಗೆ ಇದು ಪೂರಕವಾಗಿಲ್ಲ. ಬಡತನ ಕಡಿಮೆ ಮಾಡಲಿಕ್ಕೆ ಅನುಕೂಲಕರವಾಗಿಲ್ಲ, ಸಾಮಾನ್ಯ ಜನರ ಜನಜೀವನ ಮೇಲಕ್ಕೆ ಹೆಚ್ಚಿಸುವುದಕ್ಕೆ ಅನುಕೂಲ ಆದಂತೆ ಕಾಣಿಸುವುದಿಲ್ಲ. ಎಲ್ಲವೂ ಕೂಡ ಒಂದು ರೀತಿಯಲ್ಲಿ ಸರಿಯಿಲ್ಲ. ನಿಮ್ಮ ಜಗಳದಲ್ಲಿ administration ಎಲ್ಲವೂ collapse ಆಗಿದೆ. ಆದ್ದರಿಂದ ಇದೆಲ್ಲವೂ ಆಗುತ್ತಿದೆ. ಭ್ರಷ್ಟಾಚಾರ ವ್ಯಾಪಕವಾಗಿದೆ. ಆದ್ದರಿಂದ programmes ಸರಿಯಾಗಿ implement ಆಗುತ್ತಿಲ್ಲ. KDP meetings ಆಗುತ್ತಿಲ್ಲ. Proper supervision ಆಗುತ್ತಿಲ್ಲ. ಯಾವುದೇ ಸರ್ಕಾರದಲ್ಲಿ ಎರಡು ಗುಂಪುಗಳಾಗಿದ್ದಾರೆ, ಆ ಗುಂಪುಗಳು ಪರಸ್ಪರ ಜಗಳವಾಡುತ್ತವೆ ಎನ್ನುವುದಾದರೆ, ಅಧಿಕಾರಿಗಳು ಯಾರ ಮಾತನ್ನೂ ಕೇಳುವುದಿಲ್ಲ. I am submitting this, with my experience. ಅಧಿಕಾರಿಗಳು ಯಾರ ಮಾತನ್ನೂ ಕೇಳುವುದಿಲ್ಲ, ಯಾರೂ ಕೂಡ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಈ ರೀತಿ ಎಲ್ಲಾ ಆಗಿದೆ. ನಾನು ಹೇಳಿದಂತಹ ಸಲಹೆಗಳನ್ನು ಸ್ವಲ್ಪ ಜಾರಿಗೆ ತರಬೇಕು. ಈ ಬಜೆಟ್ ಭಾರಿ ಒಳ್ಳೆಯ ಬಜೆಟ್ ಆಗಿದೆ ಎಂದು ಅವರು ಅಂದುಕೊಂಡಿದ್ದಾರೆ. ಬಹಳ progressive budget ಅನ್ನು ನಾವು ಕೊಟ್ಟಿದ್ದೇವೆ ಎಂದು ಏನು ಅಂದುಕೊಂಡಿದ್ದೀರಿ, ಇದು ಅದು ಯಾವುದೂ

ಅಲ್ಲ. ನಾನು ಆ ಕಾರಣದಿಂದ, ಈ ಬಜೆಟ್ ಅನ್ನು ವಿರೋಧ ಮಾಡುತ್ತಿದ್ದೇನೆ. ನಾನು ಇನ್ನೂ ಬೇಕಾದಷ್ಟು ವಿಚಾರಗಳನ್ನು ಹೇಳಬೇಕಾಗಿತ್ತು. ನಾನೊಬ್ಬನೇ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಬಾರದು ಎಂಬ ಉದ್ದೇಶದಿಂದ, ಇಷ್ಟೇ ವಿಚಾರಗಳನ್ನು ಹೇಳಿ, ಈ ಬಜೆಟ್ ಅನ್ನು ವಿರೋಧ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) :- ಮಾನ್ಯ ಉಪಾಧ್ಯಕ್ಷರೆ, 2012–13ನೇ ವರ್ಷದ ಆಯವ್ಯಯದ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಂತಹ ತಮಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸತತವಾಗಿ ಹಣಕಾಸು ಸಚಿವರಾಗಿದ್ದವರು. ಈಗ ವಿರೋಧ ಪಕ್ಷದ ನಾಯಕರಾಗಿ ಎಲ್ಲಾ ಭಾಗವನ್ನೂ ಬಿಡಿಸಿ ಹೇಳಿದ್ದಾರೆ. ಬಹಳ ಸವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ. ಅವರು ಬಿಟ್ಟಿರತಕ್ಕಂಥ ಕೆಲವು ವಿಚಾರಗಳನ್ನು ಸ್ವಲ್ಪ ಮಟ್ಟಿಗೆ ಸದನದ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ಈ ಸಂದರ್ಭದಲ್ಲಿ ನಾನು ತರಲಿಕ್ಕೆ ಬಯಸುತ್ತೇನೆ. ಒಂದು ಲಕ್ಷ ಕೋಟಿ ರೂ.ಗಳಿಗಿಂತ ಮೇಲೆ ಬಜೆಟ್ ಅನ್ನು ಮಂಡಿಸಬೇಕು ಎನ್ನುವುದು ಸಾರ್ವಜನಿಕವಾಗಿಯೇ ಚರ್ಚೆಯಾಯಿತು. ರಾಜಕೀಯವಾಗಿ ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಬೇಕೆಂಬುದು ಒಂದು ಪ್ರತಿಷ್ಠೆಯ ಕಣವಾಗಿ ತೆಗೆದುಕೊಂಡು ಕೊನೆಗೂ ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡನೆ ಮಾಡಿದರು. ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ ಬಜೆಟ್ ಅಂದರೆ ಅಂದಾಜಿಸುವುದು ಎಂದರ್ಥ. ಅಂದಾಜು ಮಾಡುವುದಕ್ಕೂ ಒಂದು ಇತಿಮಿತಿ ಇದೆ. ಹಿಂದೆ ಯಾವ ರೀತಿ ಸಂಪನ್ಮೂಲವನ್ನು ಕ್ರೋಡಿಕರಿಸಿಕೊಂಡು ಬಂದಿರುತ್ತೇವೆ, ಅದರ ಇತಿಮಿತಿಯೊಳಗೇ ನಾವು ಅಂದಾಜಿಸಬೇಕು. ಯದ್ವಾತದ್ವಾ ರೀತಿ ನೀತಿ ಇಲ್ಲದೆ ಬಜೆಟ್ ಅನ್ನು ಅಂದಾಜಿಸಿ ಹೇಳಿದರೆ, ಅದಕ್ಕೆ ತಕ್ಕಂತೆ ನಡೆಯದೇ ಹೋದರೆ, ಬಹುಶಃ ಕರ್ನಾಟಕ ಜನತೆಗೂ ಅನ್ಯಾಯವಾಗುತ್ತದೆ ಮತ್ತು ಕರ್ನಾಟಕ ರಾಜ್ಯದ ಘನತೆ–ಗೌರವಕ್ಕೂ ಕೂಡ ಕುಂದು ಬರುತ್ತದೆನ್ನುವುದನ್ನು ನಾವು ಆಲೋಚನೆ ಮಾಡಬೇಕು. ನಮ್ಮ ಮೇಲೆ ಕೇಂದ್ರ ಸರ್ಕಾರವಿದೆ, ಹಣಕಾಸಿನ ಹಿಡಿತವನ್ನು ಹಿಡಿಯತಕ್ಕಂಥ ಸಂಸ್ಥೆಗಳಿವೆ, ಪ್ಲಾನಿಂಗ್ ಕಮಿಷನ್ ಇದೆ. ಆ ಪ್ಲಾನಿಂಗ್ ಕಮಿಷನ್‌ನಲ್ಲಿ ನಾವು ಎಲ್ಲವನ್ನು ಅನುಮೋದನೆ ಪಡೆಯಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಸುಮಾರು 22,000 ಕೋಟಿ ರೂಪಾಯಿಗಳ ಸಾಲವನ್ನು ನಾವು ಪಡೆಯುತ್ತೇವೆ ಮತ್ತು ಕೇಂದ್ರ ಸರ್ಕಾರದ ಅನುದಾನ ಮತ್ತು ತೆರಿಗೆ ಬಾಬ್ತು ಇದರಲ್ಲಿ ಬಹಳ ಮಟ್ಟಿಗೆ ಅಂದಾಜಿಸಿದ್ದಾರೆ. ಯೋಜನೆ ಮಾಡುವಾಗ

ಬಹಳಮಟ್ಟಿಗೆ ಅಂದಾಜು ಮಾಡಿದ್ದಾರೆ. ಸುಮಾರು 5–6 ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಬರಬಹುದೆಂದು ಅಂದಾಜು ಮಾಡಿದ್ದಾರೆ, ಅದು ಮಾಡಬೇಕು. ಕಳೆದ ವರ್ಷ ನೀವು ಅಂದಾಜಿಸಿರತಕ್ಕಂಥ ಹಣದ ಮೊತ್ತಕ್ಕಿಂತ ಈ ಸಾರಿ ಹೆಚ್ಚುವರಿ 6 ಸಾವಿರ ಕೋಟಿ ಹಣವನ್ನು ಕೇಂದ್ರ ಸರ್ಕಾರದಿಂದ ತರುತ್ತೇವೆನ್ನುವ ಭಾವನೆ ಇದೆಯೆಂದು ನೀವು ಅಂದಾಜು ಮಾಡಿದ್ದೀರಿ. ಬಹುಶಃ ಈ ರಾಜಕೀಯದ ವಾತಾವರಣದಲ್ಲಿ ಕೇಂದ್ರದಲ್ಲಿರುವ ರಾಜಕೀಯ ಪಕ್ಷದ ಸರ್ಕಾರವೇ ಬೇರೆ, ಇಲ್ಲಿರತಕ್ಕಂತ ರಾಜಕೀಯ ಪಕ್ಷದ ಸರ್ಕಾರವೇ ಬೇರೆ. ಹಿಂದೆ ಒಂದು ಸಾರಿ 20 ಸಾವಿರ ಕೋಟಿ ರೂಪಾಯಿಗಳನ್ನು ಯೋಜನೇತರ ವೆಚ್ಚದಲ್ಲಿ ಆಂಧ್ರ ಪ್ರದೇಶದ ಸರ್ಕಾರಕ್ಕೆ ಕೊಟ್ಟಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಅಂದರೆ ಎರಡೂ ಸರ್ಕಾರಗಳೂ ಇದ್ದಂಥ ಸಂದರ್ಭದಲ್ಲಿ ಯಾವುದೋ ಒಂದು ಮೂಲದಿಂದ ಹಣವನ್ನು ಫೋರ್ಸ್ ಮಾಡಿ ರಾಜ್ಯ ಸರ್ಕಾರಕ್ಕೆ ತುಂಬುತ್ತಾರೆ. ಆದರೆ ರಾಜ್ಯ ಸರ್ಕಾರವೇ ಬೇರೆ, ಕೇಂದ್ರ ಸರ್ಕಾರವೇ ಬೇರೆ. ಇಂಥ ಪರಿಸ್ಥಿತಿಯಲ್ಲಿ 6–7 ಸಾವಿರ ಕೋಟಿ ರೂಪಾಯಿಗಳ ಹಣವನ್ನು ನೀವು ಹೆಚ್ಚುವರಿಯಾಗಿ ನಿರೀಕ್ಷೆ ಮಾಡಿ, ಅಂದಾಜಿಸಿ, ಒಂದು ಎಸ್ಟಿಮೇಟ್ ಅನ್ನು ತಯಾರು ಮಾಡಿ ರಾಜ್ಯದ ಜನತೆಯ ಮುಂದಿಡುತ್ತೀರೆಂದರೆ ಬಹುಶಃ ಇದರ ಮಹತ್ವ ಎಂಥದ್ದು ಎಂದು ಗೊತ್ತಾಗುತ್ತದೆ. ನಿಮ್ಮ ಸ್ವಂತ ತೆರಿಗೆ ಹಣದಿಂದ ನಿಮ್ಮ ಸ್ವಂತ ಸಂಪನ್ಮೂಲ 51 ಸಾವಿರ ಕೋಟಿ. ಅಂದರೆ 50% ಆಯಿತು. ಇನ್ನು 50% ಹಣವನ್ನು ನೀವು ಪರರನ್ನು ಆಶ್ರಯಿಸಿ ಸಾಲ ತೆಗೆದುಕೊಳ್ಳುತ್ತೇವೆನ್ನುತ್ತೀರಿ. ಸಾಲ ತೆಗೆದುಕೊಳ್ಳುವುದಕ್ಕೇನು ನಿಗ್ರಹವಿಲ್ಲವೇ ? ಕಾನೂನು ಚೌಕಟ್ಟಿನಲ್ಲಿ ಏನು ವ್ಯವಸ್ಥೆ ಇಲ್ಲವೇ ? ಅದಕ್ಕೆಲ್ಲಾ ಇತಿಮಿತಿ ಇಲ್ಲವೇ ? ಎಷ್ಟು ಬೇಕಾದರೂ ಸಾಲ ತೆಗೆದುಕೊಳ್ಳಬಹುದೇ ? ಈಗಾಗಲೇ ಒಂದು ಲಕ್ಷದ 18 ಸಾವಿರ ಕೋಟಿ ಹಣಕ್ಕೆ ನೀವು ಸಾಲಕ್ಕೆ ಹೋಗುತ್ತೀರಿ ಎನ್ನುವುದಾದರೆ, ಸಾಲದ ಮಿತಿಗೆ ಕಡಿವಾಣ ಹಾಕತಕ್ಕಂಥವರು ಇಲ್ಲವೇ ? ನೀವು ಈ ರೀತಿ ಹೋದರೆ, ನಿಮ್ಮ ಬಜೆಟ್‌ನಲ್ಲಿ 25% ಹಣವನ್ನು ಸಾಲದ ಅಸಲು ಮತ್ತು ಬಡ್ಡಿಗೆ ಪ್ರತಿವರ್ಷ ರೀಪೇಮೆಂಟ್ ಮಾಡಬೇಕಾದ ಪರಿಸ್ಥಿತಿ ಅನಿವಾರ್ಯವಾಗುತ್ತಿದೆ. ಇದನ್ನು ಅರ್ಥ ಮಾಡಿಕೊಂಡು ಕೇವಲ ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಜನರನ್ನು ಮೆಚ್ಚಿಸುವುದಕ್ಕೋಸ್ಕರ ಮಾಡುವುದಲ್ಲ. ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ನಿಗದಿ ಮಾಡುತ್ತೀರೋ, ಪರಿಪಕ್ವವಾಗಿ, ಆ ಬೇಡಿಕೆಗೆ ಅನುಗುಣವಾಗಿ ಹಣವನ್ನು ವ್ಯಯ ಮಾಡತಕ್ಕಂಥದ್ದು ಒಂದು ಕಡೆಯಾಗಬೇಕು. ಆ ಇಲಾಖೆ ನಿಗದಿಪಡಿಸಿದಂಥ ಹಣ ಸರಿಯಾದ ರೀತಿಯಲ್ಲಿ ವ್ಯಯವಾದರೆ ಆ

ಇಲಾಖೆಯ ಪರಿಪೂರ್ಣತೆ ಉಂಟಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದುದರಿಂದ ಯಾವ ರೀತಿ ರೆವಿನ್ಯೂ ಡೆಫಿಸಿಟ್ ಆಗುತ್ತದೆ. ಈ ರೀತಿ ನಮ್ಮ ಸಂಪನ್ಮೂಲಕ್ಕೆ ವಿರುದ್ಧವಾಗಿ ನಾವು ಆಯವ್ಯಯವನ್ನು ಮಂಡನೆ ಮಾಡಿಕೊಂಡಾಗ, ನಮ್ಮ ಮೂಲ ಸಂಪನ್ಮೂಲದ ಕೊರತೆಯುಂಟಾದಾಗ ನಾವು ಕೇಂದ್ರವನ್ನು ನಂಬಿ, ಮತ್ಯಾವುದೋ ಹಣಕಾಸಿನ ಮೂಲವನ್ನು ನಂಬಿ ಈ ರೀತಿ ಒಂದು ಆಯವ್ಯಯವನ್ನು ಮಂಡನೆ ಮಾಡಿದಾಗ ನಿಜವಾಗಲೂ ಅದಕ್ಕೆ Sanctity ಎನ್ನುವ ಪದ ಅರ್ಥ ಕಳೆದುಕೊಳ್ಳುತ್ತದೆ ಎಂದು ಬಹಳ ಸೂಕ್ಷ್ಮವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ ವರ್ಷ ಎಷ್ಟಾಯಿತು ? ಆಚೆ ವರ್ಷ ಎಷ್ಟಾಯಿತು ? ಏಕೆ ಏನು, ಯಾವ್ಯಾವ ಇಲಾಖೆಗೆ ಏನೇನು ಖರ್ಚು ಮಾಡಿದಿರಿ ? ಅದನ್ನೆಲ್ಲಾ ಚರ್ಚೆ ಮಾಡುವುದಕ್ಕಿಂತ ಕೆಲವೊಂದು ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಬಯಸುತ್ತೇನೆ. ಕೃಷಿ ಬಜೆಟ್ ಪ್ರತ್ಯೇಕ ಎಂದು ಕಳೆದ ಸಾರಿಯಿಂದ ಮಂಡನೆ ಮಾಡಿದರು. ಸುವರ್ಣ ಭೂಮಿ ಸೇರಿದಂತೆ ಈ ರೀತಿ ಹೊಸ ಯೋಜನೆಗಳನ್ನು ಜಾರಿಗೆ ತಂದರು. ಇಲ್ಲಿ ನಮ್ಮ ಶಾಸಕ ಮಿತ್ರರೆಲ್ಲಾ ಇದ್ದಾರೆ. ಈಗ ಸುವರ್ಣ ಭೂಮಿ ಯೋಜನೆಯನ್ನು ಜಾರಿಗೆ ತಂದಾಗ ನಮ್ಮಲ್ಲಿರುವ ರೈತರ ಸಂಖ್ಯೆ ಎಷ್ಟಿತ್ತು ? ನಮ್ಮ ಕ್ಷೇತ್ರದಲ್ಲಿರುವ 5% ರೈತರಿಗೂ ನೀವು ಕೊಡುವ ಹಣ ಸಾಕಾಗಲಿಲ್ಲ. ಅಲ್ಲಿ ದಂಗೆ ಎದ್ದರು, ಹೊಡೆದಾಡಿದರು, ಆಮೇಲೆ ಲಾಟರಿ ಹಾಕಿದಿರಿ. ಆ ಲಾಟರಿಯಲ್ಲಿ ಯಾರು ಮೋಸ ಮಾಡಿ ಹಾಕಿದರೋ ಯಾರು ಗೆದ್ದರೋ ಯಾರು ಉಳ್ಳವರಿದ್ದರೋ ಅವರದ್ದೇ ಇತ್ತು. ಇಲ್ಲೆಲ್ಲಾ ರಾಜಕೀಯ ನಡೆಯಿತು ಎಂದು ಹೇಳಿದರು. ಆಮೇಲೆ Income Certificate ಮಾಡುವುದು, ಅಲ್ಲಿಂದ ಬರುವುದು ಹೋಗುವುದು, ತಿರುಗಾಡುವುದು, ಇದಕ್ಕೆ ಅವನಿಗೆ ತಲೆಕೆಟ್ಟು ಇದ್ದಂಥ 5 ಸಾವಿರ ರೂಪಾಯಿಗಳಿಗೆ ಕುಡಿದು, ನೀವೇನು ಕೊಟ್ಟಿರಿ ಅದನ್ನು ತೆಗೆದುಕೊಂಡು ಹೋಗಿ ಹೊಲ ಬಿತ್ತಿ ಬೆಳೆ ಬೆಳೆಯಲಿಲ್ಲ. ಇದು ನಿಜವಾಗಿಯೂ ಹೇಳಬೇಕೆಂದರೆ, ಈ ತರಹದ ಸಹಾಯದಿಂದ ನಿಜವಾಗಿಯೂ ರೈತ ಉದ್ಧಾರವಾಗುವುದಿಲ್ಲ. ರೈತರನ್ನು ಉದ್ಧಾರ ಮಾಡಬೇಕೆಂದರೆ ಬೇರೆ ಮಾರ್ಗಗಳಿವೆ. ಈ ರೀತಿ 5 ಸಾವಿರ ರೂಪಾಯಿಗಳನ್ನು ಕೊಡತ್ತೇವೆಂದರೆ, ಅದಕ್ಕೆ ಆ ಕಾನೂನು, ಆ ಬ್ಯಾಂಕ್ ಅಕೌಂಟ್, ಅವನು ಹತ್ತು ಸಾರಿ ಬಂದು ಆ ತಾಲ್ಲೂಕು ಕೇಂದ್ರದಲ್ಲಿ ಅಲೆದು ಹೋಗುವುದರೊಳಗೆ ಆ 5 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಹೋಗುತ್ತಾನೆ. ಇದರಿಂದ ರೈತರ ಉದ್ಧಾರವಾಗುವುದಿಲ್ಲ. ಇನ್ನು ಭೂಚೇತನದಲ್ಲಿ ಭೂಮಿಗೆ ಗೊಬ್ಬರ ಕೊಡುತ್ತೇವೆ, ಅದು ಕೊಡುತ್ತೇವೆ, ಇದು ಕೊಡುತ್ತೇವೆಂದು ಬೇಕಾದಷ್ಟು

ಯೋಜನೆಗಳನ್ನು ತಂದಿರಿ. ಆದರೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ, ಎಲ್ಲವನ್ನೂ ಕೊಡುವುದಕ್ಕೆ ಹೋಗುವುದಿಲ್ಲ. ರೈತರ ಬೀಜಗಳಿಗೆ 50% ಸಬ್ಸಿಡಿ ಕೊಡುತ್ತೀರಿ. ರಾಣೆಬೆನ್ನೂರಿನಲ್ಲಿ ಸೂರ್ಯಕಾಂತಿ ಬೀಜ ತಯಾರು ಮಾಡುತ್ತಾರೆ. ನಾನು ಆ ರಾಣಿಬೆನ್ನೂರಿಗೆ ಹೋಗಿದ್ದೆ. ಆ ರೈತನಿಗೆ ಕೊಡುವುದು ನೂರು ರೂಪಾಯಿ. ಕೃಷಿ ಮಂತ್ರಿಗಳು ಎದ್ದು ಹೋದರು. ನಾನು ಪ್ರತಿ ಸಾರಿ ಹೇಳುತ್ತೇನೆ, ಆ ಬೀಜ ತಯಾರು ಮಾಡುವ ಆ ಹೊಲದ ಮಾಲೀಕನಿಗೆ ನೂರು ರೂಪಾಯಿಗಳನ್ನು ಕೊಡುತ್ತಾರೆ, ನಮ್ಮ ಉದಾಸಿಯವರೆಲ್ಲ ತಿಳಿದುಕೊಂಡಿರಬಹುದು. ನೀವು 50% ಸಬ್ಸಿಡಿ ಸೇರಿ ರೈತರಿಗೆ ಒಂದು ಕೆ.ಜಿ. ಸೂರ್ಯಕಾಂತಿ ಬೀಜಕ್ಕೆ 400 ರಿಂದ 500 ರೂ.ಗೆ ಮಾರಾಟ ಮಾಡುತ್ತೀರಿ. ರೈತ ಬದುಕಿದ್ದಾನಾ ? ಇಲ್ಲಾ Multi - National Companyಗಳು ಬದುಕುತ್ತಿವೆ. ಆ ಬೀಜಗಳನ್ನು ತಯಾರು ಮಾಡತಕ್ಕಂತಹ ಕಂಪನಿಗಳು ಬದುಕತ್ತಿವೆ. ಬೇಕಾದಷ್ಟು ಅಗ್ರಿಕಲ್ಚರ್ ಯೂನಿವರ್ಸಿಟಿಗಳನ್ನು ಇಟ್ಟುಕೊಂಡಿದ್ದೀರಿ. ಬೀಜ ನಿಗಮ ಇದೆ, ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ದೊಡ್ಡ ಪ್ರೊಫೆಸರ್‌ಗಳು ಇದ್ದಾರೆ, ಆ ಪ್ರೊಫೆಸರ್‌ಗಳ ಮುಖಾಂತರ ಯೂನಿವರ್ಸಿಟಿಯಲ್ಲಿ ನಮ್ಮ ರೈತರ ಹತ್ತಿರ ನೀವು ಬೀಜ ಬೆಳೆಸುವುದಕ್ಕಾಗುವುದಿಲ್ಲವಾ? ಆ Multi National Company ಯಿಂದಲೇ ನೀವು ಬೀಜ ತಂದು ಇಲ್ಲಿ ಕೊಡಬೇಕಾ ? ಆ ಸಬ್ಸಿಡಿ ಹಣ 50% ನಿಜವಾಗಿಯೂ ರೈತರಿಗೆ ತಲುಪುತ್ತದಾ? ಯಾರೋ ಎ.ಸಿ. ರೂಮ್‌ನಲ್ಲಿ ಇರುವವರ ಪಾಲಾಗುತ್ತಿದೆ. ಇದು ರೈತನ ಉದ್ಧಾರ ಮಾಡುವುದಾ ? ಎರಡನೆಯದು, ಒಂದು cultivator ಗೆ ಭೂ ಚೇತನದಲ್ಲಿ ಸಹಾಯಧನ ಕೊಡುತ್ತೀರಿ. ಒಂದು ಕಲ್ಟಿವೇಟರ್ ಬೆಲೆಯನ್ನು ಹೊರಗಡೆ ಹೋಗಿ ಕೇಳಿದರೆ ನಿಜವಾದ ಬೆಲೆ 18,000 ರೂ. ಹೇಳುತ್ತಾರೆ. ಸರ್ಕಾರದಿಂದ 30,000 ರೂ. 50% ಸಬ್ಸಿಡಿ ಹಣ ಏನಾಯಿತು ? ಕಲ್ಟಿವೇಟರ್, ಮಾರುಕಟ್ಟೆ ದರದಲ್ಲಿ ಅಷ್ಟಕ್ಕೇ ಸಿಗುತ್ತದೆ. ರೈತರಿಗೆ ಸಿಗುವಂತಹ ಸಬ್ಸಿಡಿ 2,000 ರೂ. ಯಾವುದೇ ಪರಿಕರ ಆಗಲಿ, ರೈತರಿಗೆ ಕೊಡತಕ್ಕಂತಹ ಎಲ್ಲಾ 50% ಸಬ್ಸಿಡಿ ಹಣವನ್ನು ನುಂಗಿ ನೀರು ಕುಡಿಯುತ್ತಿದ್ದಾರೆ. ನಿಜವಾಗಿಯೂ ರೈತರಿಗೆ ಸಿಗುತ್ತಿಲ್ಲ. ಹನಿ ನೀರಾವರಿಯ sprinkler ಸೆಟ್ ಸಬ್ಸಿಡಿ ಸೇರಿ 17,000 ರೂ. ಎಂದು ಹೇಳುತ್ತೀರಿ. ಆದರೆ ಹನಿ ನೀರಾವರಿಗೆ ಕೊಡತಕ್ಕಂತಹ sprinkler set 9,000 ರೂ. ಗೆ ಮಾರುಕಟ್ಟೆಯಲ್ಲಿ ಸಿಗುತ್ತದೆ. ಅದಕ್ಕೆ 17,000 ರೂ. ಎಂದು ಹೇಳುತ್ತಾರೆ. ಉಳಿದಂತಹ ಹಣ ಏನಾಯಿತು? ರೈತನಿಗೆ ಏನು ಸಿಕ್ಕಿತು ? ಈ ರೀತಿ ರೈತರಿಗೆ ಕೊಡತಕ್ಕಂತಹ ಸವಲತ್ತುಗಳು ನಿಜವಾಗಿಯೂ ಮಧ್ಯವರ್ತಿಗಳ ಹಾಗೂ ಯಾರ್‍ಯಾರೋ ಉಳ್ಳವರ

ಪಾಲಾಗುತ್ತಿವೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ತಿಂದು ನೀರು ಕುಡಿಯುತ್ತಿದ್ದಾರೆ. ರೈತರಿಗೆ ಈ ಸಬ್ಸಿಡಿ ಹಣ ನಿಜವಾಗಿಯೂ ಸಿಗುತ್ತಿಲ್ಲ. 50% ಹಣ ಏನು ಸಬ್ಸಿಡಿ ಕೊಟ್ಟಿದ್ದೇವೆಂದು ಹೇಳುತ್ತೀರಿ ಅದು ಯಾವುದೂ ರೈತರಿಗೆ ಸರಿಯಾಗಿ ಸಿಗುತ್ತಿಲ್ಲ. ಇದು ನಿಜವಾಗಿಯೂ ರೈತರ ಕೈಗೆ ಸಿಗದೆ ಹೋದರೆ ನೀವು ಏನು ಈ ಭೂ ಚೇತನ ಮಾಡುತ್ತೇವೆ, ಸುವರ್ಣ ಭೂಮಿ ಮಾಡುತ್ತೇವೆಂದು ಹೇಳುತ್ತೀರಿ, ಇದ್ಯಾವುದೂ ಆಗುವುದಿಲ್ಲ. ದೊಡ್ಡದಾಗಿ ಬಡ್ಡಿ ರಹಿತ ಸಾಲ ಎಂದು ಹೇಳಿದಿರಿ. ಒಪ್ಪಿಕೊಳ್ಳೋಣ, ಅದನ್ನು ಸ್ವಾಗತ ಮಾಡೋಣ. ಬೇಡವೆಂದು ಹೇಳುವುದಿಲ್ಲ. ಎಷ್ಟು ಜನ ರೈತರಿಗೆ ಬಡ್ಡಿ ರಹಿತ ಸಾಲ ಕೊಡುತ್ತೀರಿ? ಎಷ್ಟು ಪರ್ಸೆಂಟ್‌ಗೆ ಕೊಟ್ಟಿದ್ದೀರಿ? ಒಂದು ಸೊಸೈಟಿಯಲ್ಲಿ ಯಾರೋ 50 ರಿಂದ 60 ಜನ ಸಾಲ ತೆಗೆದುಕೊಂಡಿತ್ತಾರೆ. ಅವರೇ 25,000 renewal ಮಾಡಿಸುತ್ತಾರೆ. ಸೆಕ್ರೆಟರಿ ಬಡ್ಡಿ ಕಟ್ಟಿಕೊಂಡು ಇರುತ್ತಾರೆ. ಮತ್ತೆ renewal ಆಗುತ್ತದೆ. ಅದು ಬಿಟ್ಟರೆ ರೈತರಿಗೆ ಹೊಸದಾಗಿ ಒಂದು ಪರ್ಸೆಂಟ್ ಬಡ್ಡಿ ರಹಿತವಾದ ಸಾಲ ಕೊಡುತ್ತೇವೆಂದು ಹೇಳುವುದಕ್ಕೆ ಸರ್ಕಾರಕ್ಕೆ ಬದ್ಧತೆ ಇದೆಯೇ? ಇಷ್ಟು ಕೋಟಿ ರೂಪಾಯಿಗಳನ್ನು ಹೊಸದಾಗಿ ಕರ್ನಾಟಕ ರಾಜ್ಯದ ರೈತರಿಗೆ ಬಡ್ಡಿ ರಹಿತವಾದ ಸಾಲವನ್ನು ನಾವು ಕೊಡುತ್ತೇವೆ ಎನ್ನತಕ್ಕಂತಹ ಘೋಷಣೆ ಮಾಡಬೇಕು. ಬಡ್ಡಿ ರಹಿತವಾದ ಸಾಲ ಎಂದು ಓದಿ ಸುಮ್ಮನೆ ಕುಳಿತು ಬಿಟ್ಟರೆ ಹೇಗೆ? ಎಷ್ಟು ಜನ ರೈತರಿಗೆ ನೀವು ಬಡ್ಡಿ ರಹಿತ ಸಾಲವನ್ನು ಕೊಡುತ್ತೀರಿ? ಇದುವರೆಗೂ ಎಷ್ಟು ಜನರಿಗೆ ಕೊಟ್ಟಿದ್ದೀರಿ? ವಾಣಿಜ್ಯ ಬ್ಯಾಂಕುಗಳಲ್ಲಿ ಬಡ್ಡಿ ರಹಿತ ಸಾಲ ಯಾರಿಗೆ ಕೊಡುತ್ತೀರಿ? ಊರ ಪಕ್ಕದಲ್ಲಿ ಯಾರೋ ಫಾರಂ ಹೌಸ್ ಮಾಡಿರುವವರು, ಯಾರೋ ಹೋಟೆಲ್ ಮಾಲೀಕರೋ ಯಾರೋ ಇರುತ್ತಾರೆ. ಅವರೆಲ್ಲಾ ಸೇರಿಕೊಂಡು ಅಲ್ಲಿ ಹೋಗಿ ಅರ್ಜಿ ಹಾಕುತ್ತಾರೆ. ವಾಣಿಜ್ಯ ಬ್ಯಾಂಕಿನವರು ಅವರಿಗೇ ಸಾಲ ಕೊಡುವುದು. ಅವರೆಲ್ಲಾ ಸೇರಿ 10–15 ಜನ ಒಂದು ಗುಂಪು ಮಾಡಿ ರೂ. 50,000 ಸಾಲ ತೆಗೆದುಕೊಳ್ಳುತ್ತಾರೆ. 3% ಗೆ ಸಾಲ ತೆಗೆದುಕೊಂಡು ಅದೇ ಬಡ್ಡಿಯನ್ನು ರೈತರ ಒಡವೆ ಇಟ್ಟುಕೊಂಡು ಫೈನಾನ್ಸ್ ಮಾಡಿ ಸಾಲ ಕೊಡುತ್ತಾರೆ. ಇಂತಹ ಪರಿಸ್ಥಿತಿ ಬಡ್ಡಿ ರಹಿತವಾದ ಸಾಲ ಎಂದು ಹೇಳಿದರೆ ಇದು ರೈತರಿಗೆ ನಿಜವಾಗಿಯೂ ದಕ್ಕಿದೆಯೇ ? ಆ ವಾಣಿಜ್ಯ ಬ್ಯಾಂಕಿನವರು ನಿಜವಾದ ರೈತನಿಗೆ ಸಾಲ ಕೊಡುತ್ತಾರಾ ? ಯಾರಾದರೂ ಒಬ್ಬರಿಗೆ ಸಾಲ ಕೊಟ್ಟಿದ್ದಾರಾ ? ನಾನು ಪರೀಕ್ಷೆ ಮಾಡಿದ್ದೇನೆ. ಆ ವಾಣಿಜ್ಯ ಬ್ಯಾಂಕಿನವರು MLA ಹೋದರೆ ಕುರ್ಚಿ ಹಾಕುವುದಿಲ್ಲ. ನಾವು ಕರೆದಿರುವ ಒಂದು ಮೀಟಿಂಗ್‌ಗೆ ಅವರು ಬರುವುದಿಲ್ಲ. ಅವರು ರೀಪೇಮೆಂಟ್ ಯಾರದು ಇದೆ ಅವರಿಗೆ ಕೊಡುತ್ತೇವೆಂದು ಹೇಳುತ್ತಾರೆ.

ಇಲ್ಲಿಂದ ಸಹಾಯಧನದ ರೂಪದಲ್ಲಿ SC/ST ಗಳಿಗೆ ಏನೋ ಸವಲತ್ತುಗಳನ್ನು ಕಾಡಿ ಬೇಡಿ ತೆಗೆದುಕೊಂಡು ಹೋಗುತ್ತೇವೆ. ಅಲ್ಲಿಗೆ ಹೋದರೆ ನಿಮ್ಮ ನಿಘಂಟಿನ ಪ್ರಕಾರ 5,000 ರೂ. ಸಬ್ಸಿಡಿಯ 10,000 ರೂ. ಸಾಲ ಕೊಡಬೇಕೆಂದರೆ ಒಂದು ಕಡೆಯಿಂದ ಎಲ್ಲಾ ಬ್ಯಾಂಕುಗಳಿಗೆ ತಿರುಗಿದರೂ ಯಾವ ಬ್ಯಾಂಕಿನವರೂ ಅವರಿಗೆ 10,000 ರೂ. ಸಾಲ ಕೊಡುವುದಿಲ್ಲ. ಸಬ್ಸಿಡಿ ಹಣ ಬಿಡಿಸಿ ಕೊಡಿ ಎಂದರೆ ಅದನ್ನೂ ಮಾಡುವುದಿಲ್ಲ. ಇಂತಹ ಹೀನ ಸ್ಥಿತಿಯಲ್ಲಿ ರೈತರನ್ನು ಕಾಡುತ್ತಿದ್ದಾರೆ ಎಂದರೆ, ನಾವು ಕಣ್ಣಾರೆ ಕಂಡಿರತಕ್ಕಂತಹ ನಿದರ್ಶನಗಳು ಇವು. ಬಾಕಿ ಎಲ್ಲಾ ಬೂಟಾಟಿಕೆ ಹಾಗೂ ಜಂಬಕ್ಕೆ ಹೇಳುವಂಥದ್ದು ಅಲ್ಲ. SC/ST corporation ನಲ್ಲಿ ನಾನು 3,500 ಕೋಟಿ ರೂ. ತೆಗೆದುಕೊಂಡು ಹೋದೆ. ಸಬ್ಸಿಡಿ ಹಣ ಕೊಟ್ಟರು. ಆದರೆ ಅದಕ್ಕೆ ತಕ್ಕಹಾಗೆ ಒಂದು ಸಾವಿರ ರೂಪಾಯಿ ಒಬ್ಬ ವ್ಯಕ್ತಿಗೆ ಸಾಲ ಕೊಡಬೇಕಾಗಿತ್ತು. ನಮ್ಮ ಕೈಯಲ್ಲಿ ಇವತ್ತಿನವರೆಗೂ ಕೊಡಿಸುವುದಕ್ಕಾಗಲಿಲ್ಲ. ವಾಣಿಜ್ಯ ಬ್ಯಾಂಕಿನವರ ಬಳಿ ಸಾಲಕ್ಕೆಂದು ಹೋದರೆ ಆ ಫಲಾನುಭವಿಗಳನ್ನು ನಂಬುವುದಕ್ಕೆ ತಯಾರಿಲ್ಲ. ರೈತರಿಗೆ ಇಂತಹ ಪರಿಸ್ಥಿತಿ ಇದೆ ಎಂದರೆ. ನೀವು ನಿಜವಾಗಿಯೂ ರೈತರನ್ನು ಉದ್ಧಾರ ಮಾಡುತ್ತೀರಾ? ರೈತರನ್ನು ಉದ್ಧಾರ ಮಾಡುವುದಕ್ಕಾಗುತ್ತಾ ? ಇಂತಹ ಪರಿಸ್ಥಿತಿಯಲ್ಲಿ ನಾವು ರೈತರಿಗೆ ಸಾಲ ಕೊಡಿಸುತ್ತೇವೆಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ ? ಬೆಲೆ ಬಗ್ಗೆ ಹೇಳುವುದಾದರೆ ಆವರ್ತ ನಿಧಿ ಒಂದು ಸಾವಿರ ಕೋಟಿ ಘೋಷಣೆ ಮಾಡುತ್ತೀರಿ. ನಿಮಗೆ ಕೈ ಎತ್ತಿ ಮುಗಿಯಬೇಕು, ಮುಗಿಯೋಣ. ಆದರೆ ಆ ಸಾವಿರ ಕೋಟಿಯಲ್ಲಿ ನಿಜವಾದ ರೈತ ಸಂಕಷ್ಟಕ್ಕೆ ಸಿಕ್ಕಿದಂತಹ ಸಂದರ್ಭದಲ್ಲಿ ಯಾವುದಾದರೂ ಸಂದರ್ಭದಲ್ಲಿ ಇವತ್ತು ಆಲೂಗಡ್ಡೆ ಬೆಳೆ ಕೇಳುವವರಿರಲಿಲ್ಲ, ನೀವು ಆವರ್ತ ನಿಧಿಯನ್ನು ಉಪಯೋಗಿಸಿದ್ದೀರಾ? ನಾನು ಮೂರು ವರ್ಷಗಳಿಂದ ಹೇಳಿದೆ, ನೀವು ಕೇಳಿದಿರಾ ? ಕೊಬ್ಬರಿ ಒಂದೊಂದು ಸಾರಿ ಹೆಚ್ಚಿಗೆ ಮಾಲು ಬಂದ ತಕ್ಷಣ ವರ್ತಕರೆಲ್ಲಾ ಮಾತನಾಡಿಕೊಂಡು ರೂ. 5000 ರಿಂದ 5,500 ಇದ್ದ ಕೊಬ್ಬರಿಯನ್ನು ನಾಲ್ಕು ಸಾವಿರ ರೂಪಾಯಿಗೆ ಇಳಿಸುತ್ತಾರೆ. ಅಂತಹ ಸಂದರ್ಭದಲ್ಲಿ ಎದ್ದು ನಿಂತು ನಾನು ಕೊಡುತ್ತೇನೆಂದು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಆವರ್ತ ನಿಧಿ ಇಟ್ಟು ಕೊಬ್ಬರಿ ಕೊಳ್ಳತಕ್ಕಂತಹ ಕೆಲಸ ಮಾಡುತ್ತೀರಾ? ಏತಕ್ಕೋಸ್ಕರ ಸಾವಿರ ಕೋಟಿಗಳನ್ನು ಆವರ್ತನಿಧಿ ಎಂದು ಹೇಳಿ ರೈತರ ಉಪಯೋಗಕ್ಕಾಗಿ ರೈತರಿಗೆ ಬೆಂಬಲ ಬೆಲೆ ಕೊಡಿಸುವುದಕ್ಕೋಸ್ಕರ ಎಂದು ಹೇಳಿ ಒಂದು ವ್ಯವಸ್ಥೆಯನ್ನು ನೀವು ಮಾಡುತ್ತೀರಿ? ಏನಾಯಿತು ಆವರ್ತ ನಿಧಿ ? ಸರ್ಕಾರಕ್ಕೆ ಏನು ಹೇಳಬೇಕು ? ಕೃಷಿ ಮಂತ್ರಿಗಳು ಇಲ್ಲಿ

ಕುಳಿತು ಕೇಳುತ್ತಿಲ್ಲ. ಯಾರಿಗೆ ಹೇಳುವುದು ಕೃಷಿ ಮಂತ್ರಿಗಳು ಇದೆಲ್ಲಾ ತಿಳಿದುಕೊಳ್ಳಬೇಕು. ಇಂತಹ ಅನೇಕ ನಿದರ್ಶನಗಳನ್ನು ಕೊಡಬಹುದು. ಅದರ ಜೊತೆಗೆ ಸನ್ಮಾನ್ಯ ಅಧ್ಯಕ್ಷರೆ, ಎಲ್ಲವನ್ನೂ ಮಾತನಾಡುವುದಕ್ಕಾಗುವುದಿಲ್ಲ. ನಮ್ಮ ಪಕ್ಷಕ್ಕೆ ಎರಡು ಗಂಟೆ ಕಾಲ ಕೊಟ್ಟಿದ್ದೀರಿ. ನಾವು ಕಾಲ ಮಿತಿಯೊಳಗೆ ಮಾತನಾಡಬೇಕಾಗಿದೆ. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀ ಶಕ್ತಿ ಸಂಘಗಳು ಅವರೇನು ಮನೆ ಬಿಟ್ಟು ಈಚೆ ಬಂದಿರಲಿಲ್ಲ. ನಾವೇ ರಾಜಕೀಯದವರು ಅವರನ್ನು ಕರೆದುಕೊಂಡು ಬಂದೆವು. ಅವರಿಗೆ ಸಂಘ ಕಟ್ಟಿಸಿದೆವು. ಚುನಾವಣೆಗೆ ದುಡ್ಡು ಕೊಟ್ಟೆವು. ಏನೇನೋ ಮಾಡಿ ಎಲ್ಲಾ ವ್ಯವಸ್ಥೆ ಮಾಡಿ ಇವತ್ತು ಹೈ ಕ್ಲಾಸ್ ಆಗಿ ಡ್ರೆಸ್ ಹಾಕಿಕೊಂಡು ಬೀದಿಗೆ ಬಂದಿದ್ದಾರೆ. ಅವರಿಗೇನು ಕೊಡುತ್ತಿದ್ದೀರಿ, ಸ್ತ್ರೀ ಶಕ್ತಿ ಸಂಘದವರಿಗೆ ಏನು ಕೊಡುತ್ತಿದ್ದೀರಿ? ಅಬಕಾರಿ ಇಲಾಖೆಯಲ್ಲಿ ರೂ. 10,500 ಕೋಟಿ ಬಂದಿತು ಎಂದು ಎಲ್ಲರೂ ನಗುತ್ತಿದ್ದಿರಿ ರೂ. 9,500 ಕೋಟಿ ಬಂದಿದೆ. ಇನ್ನು ರೂ. 4,000 ಕೋಟಿ ಯಾವುದರಲ್ಲಿಯೂ ಹೆಚ್ಚಿಗೆ ರೆವಿನ್ಯೂ ಬಾರದೇ ಇದ್ದರೂ ಹೆಚ್ಚಿಗೆ ಬಂದಿದೆ ಎಂದು ಹೇಳಿದಿರಿ. ಏಕೆ ಬಂದಿತು ? ಒಂದು ಊರಿನಲ್ಲಿ 10–15 ಅಂಗಡಿ MSIL ಮುಖಾಂತರ ಮಾರುತ್ತಿದ್ದೀರಿ.

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ಗ್ರಾಮ ವಾಸ್ತವ್ಯದಲ್ಲಿ ಒಂದು ಊರಿನಲ್ಲಿ ಹಾಲ್ಟ್ ಆಗಿದ್ದೆ. ಆ ಊರಿನಲ್ಲಿ ಈ ರೀತಿ unauthorized ಆಗಿ ಮಾರುವುದಕ್ಕೆ ಹರಾಜು ಹಾಕಿದ್ದಾರೆ. ಹರಾಜು ಹಾಕಿದ್ದರಿಂದ 6,500 ಲಕ್ಷ ರೂಪಾಯಿ ಆದಾಯ ಬಂದಿದೆ. ಆ ದುಡ್ಡು ಏನು ಮಾಡುತ್ತೀರಿ ಎಂದು ನಾನು ಕೇಳಿದೆ. unauthorize ಆಗಿ ಮಾರುವುದನ್ನು ಹರಾಜು ಹಾಕಿ ಇಂತಹ ಅಂಗಡಿಯಲ್ಲಿಯೇ ಮಾರಬೇಕೆಂದು ಹೇಳಿ, ಅದರಲ್ಲಿ 6,500 ಲಕ್ಷ ಆದಾಯ ಬಂದಿದೆ. ಅದನ್ನು ದೇವಸ್ಥಾನಕ್ಕೆ ಬಳಸುತ್ತೇವೆಂದು ಹೇಳಿದರು. ಪಾಪದ ಹಣ ದೇವಸ್ಥಾನಕ್ಕೆ ಹೋದರೆ, ಆ ದೇವಸ್ಥಾನಕ್ಕೆ ಹೋದವರಿಗೆ ಇನ್ಯಾವ ಪುಣ್ಯ ಬಂದಿತು? ನಮಗೆ ಸ್ತ್ರೀ ಶಕ್ತಿ ಸಂಘದವರು ಹೇಳಿದ ಮಾತು, ನಾವು ಕೂಲಿ ಮಾಡಿಕೊಂಡು ಬರುತ್ತೇವೆ ನಮ್ಮ ಮನೆಯಲ್ಲಿ ಒಂದು ನೆಮ್ಮದಿ ಇಲ್ಲ. ಮೊದಲು ಬ್ರಾಂದಿ ಶಾಪ್ ದೂರದಲ್ಲಿತ್ತು, ಕುಡಿದುಕೊಂಡು ಬಂದರೆ ಒಂದು quarter ಕುಡಿದುಕೊಂಡು ಬರುತ್ತಿದ್ದ. ಆದರೆ ಈಗ ಹಾಗಿಲ್ಲ, ಇಲ್ಲಿ ಹೊಡೆದೂ ಬಡೆದೂ ಹಣ ತೆಗೆದುಕೊಂಡು ಹೋಗಿ ಕುಡಿದುಕೊಂಡು ಬರುತ್ತಾನೆ. ನಮಗೆ ಮನೆಯಲ್ಲಿ ನೆಮ್ಮದಿಯೇ ಇಲ್ಲ. ಏನಾದರೂ ಮಾಡಿ ನಿಲ್ಲಿಸಿ ಎಂದು ಕೈ ಮುಗಿದರು. ಈ ಪಾಪದ ಹಣದಿಂದ ಸರ್ಕಾರಕ್ಕೆ ಆದಾಯ ಬಂದಿತು ಎಂದು ಬೀಗುವುದಾದರೆ, ಇದಕ್ಕಿಂತ ಪಾಪದ ಕೆಲಸ ಇನ್ಯಾವುದೂ ಇಲ್ಲ. ನಮಗೆ ಆದಾಯ ಬರದೇ ಇದ್ದರೂ ಪರವಾಗಿಲ್ಲ ನಾಲ್ಕು ರಸ್ತೆ ಮಾಡದೇ ಇದ್ದರೂ ಚಿಂತೆ ಇಲ್ಲ. ಈ

ಬಡವರನ್ನು ಗೋಳಾಡಿಸತಕ್ಕಂತಹ ಅನ್ ಆಥರೈಸ್ಡ್ ಅಂಗಡಿಗಳ ಮೂಲಕ ಇಡೀ ಊರಿನಲ್ಲಿ ಮನೆ ಮನೆಗಳಲ್ಲಿ ಬ್ರಾಂದಿ ಶಾಪ್ ಇದೆಯಲ್ಲಾ ಇದನ್ನು ನಿಲ್ಲಿಸಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಾನು ಏತಕ್ಕೋಸ್ಕರ ಈ ರೀತಿ ಹೇಳುತ್ತಿದ್ದೇನೆಂದರೆ, ಒಬ್ಬ ಮನುಷ್ಯ ಆ ಸ್ತ್ರಿಶಕ್ತಿ ಸಂಘದಲ್ಲಿ ಏನೋ ಮಾಡಿಕೊಂಡು ಒಂದು ನಾಲ್ಕು ಕಾಸು ಇಟ್ಟುಕೊಂಡಿದ್ದ. ನಾನು ದಿವಸಕ್ಕೆ ಒಂದ್ಯೆದಾರು ಪಂಚಾಯಿತಿ ತೀರ್ಮಾನ ಅವರುಗಳದ್ದನ್ನು ಮಾಡುತ್ತೇನೆ. ಅಲ್ಲಿ ಏನು ಮಾಡುತ್ತಾರೆ ಹತ್ತು ಮನೆಗಳಲ್ಲಿಯೂ ಕಡ ಕೊಡುತ್ತಾರೆ. ತಳಗಡೆ ಮನೆಯಲ್ಲಿ ಕಡ ಕುಡಿಯುತ್ತಾನೆ. ಮೇಲುಗಡೆ ಮನೆಗೆ ಹೋಗುತ್ತಾನೆ, ಅಲ್ಲೊಂದು ಕ್ವಾರ್ಟರ್ ಕುಡಿಯುತ್ತಾನೆ. ಕುಡಿದದ್ದು ಇಳಿಯುತ್ತಿದ್ದಂತೆ ಇನ್ನೊಂದು ಮನೆಗೆ ಹೋಗಿ ಅಲ್ಲೊಂದು ಕ್ವಾರ್ಟರ್ ಕುಡಿಯುತ್ತಾನೆ. ಹೀಗೆ ಒಬ್ಬ ಕುಡಿದು ಕುಡಿದು 6,500/– ರೂ.ಗಳ ಸಾಲ ಮಾಡಿದ್ದ, 6,500/– ರೂ.ಗಳ ಸಾಲ ಮಾಡಿದ ಮೇಲೆ ಅವನು ಊರು ಬಿಟ್ಟೇ ಹೊರಟುಹೋಗಿದ್ದ. ಪಾಪ ಅವನ ಹೆಂಡತಿ ಜೀವನಕ್ಕೆಂದು ಒಂದು ಎಮ್ಮೆ, ಹಸು, ಕೋಣ ಏನು ಇಟ್ಟುಕೊಂಡಿದ್ದಳೋ ಅವುಗಳನ್ನು ಸಾಲ ಕೊಟ್ಟವರು ತೆಗೆದುಕೊಂಡು ಹೋಗಿ ಬೀದಿಗೆ ಕಟ್ಟಿಹಾಕಿಕೊಂಡರು ನಿನ್ನ ಗಂಡ ಬಂದು ದುಡ್ಡು ಕೊಡುವವರೆಗೂ ಇವುಗಳನ್ನು ಹಿಡಿದುಕೊಂಡು ಹೋಗುತ್ತೇವೆಂದರು. ಕೊನೆಗೆ ಪಂಚಾಯಿತಿ ಮಾಡಿದಾಗ ಅವನ ಹೆಂಡತಿ ನಿಮ್ಮ ಋಣ ಬೇಡವೆಂದು ಹೇಳಿ, ಇನ್ನು ಮುಂದೆ ನನ್ನ ಗಂಡನಿಗೆ ಸಾಲ ಕೊಡಕೂಡದು ಎಂದು ಹೇಳಿ ಸಾಲವನ್ನು ತೀರಿಸಿ ಅವಳ ಎತ್ತುಗಳನ್ನು ಹಸುಗಳನ್ನು ಹೊಡೆದುಕೊಂಡು ಹೋದಳು. ಇಂಥ ಪರಿಸ್ಥಿತಿ ಗ್ರಾಮೀಣ ಪ್ರದೇಶದಲ್ಲಿ ಇವತ್ತಿದೆ. ಆಮೇಲೆ ಇವರು ಒಂದು ಕ್ವಾರ್ಟರ್‌ಗೆ ಭಾರಿ ಸಹಾಯಧನ ರೈತರಿಗೆ ಕೊಡುತ್ತೇವೆಂದು ಹೇಳುತ್ತಾರೆ. ಒಂದು ಕ್ವಾರ್ಟರ್‌ಗೆ 22 ರೂಪಾಯಿ ಟ್ಯಾಕ್ಸ್ ಇದೆ. ಇವರು ಆ ರೈತರಿಗೆ 5 ಕೆ.ಜಿ. ಅಕ್ಕಿ ತಿಂಗಳಿಗೆ ಕೊಡುವುದು. ಎಲ್ಲಾ ಸಹಾಯಧನ ಸೇರಿದರೆ ಒಂದು ಕ್ವಾರ್ಟರ್‌ಗೆ ಕೊಡುವಷ್ಟು ಟ್ಯಾಕ್ಸ್ ಆಗುವುದಿಲ್ಲ. ಒಂದು ತಿಂಗಳು ಅವನು ಸತತವಾಗಿ ಕುಡಿದರೆ, ನಾನು ಲೆಕ್ಕ ಇಟ್ಟಿರುತ್ತೀನಿ, ಬಂದಾಗ ಕೇಳುತ್ತೇನೆ, ಸುಮಾರು ಒಬ್ಬ ಒಂದೂವರೆ ಸಾವಿರ ರೂಪಾಯಿನಿಂದ ಎರಡು ಸಾವಿರ ರೂಪಾಯಿಯಷ್ಟು ಬ್ರಾಂದಿ ಕುಡಿಯುತ್ತಾನೆ. ಎರಡರಿಂದ ಮೂರು ಸಾವಿರ ರೂಪಾಯಿ ಗಳವರೆಗೆ ಬ್ರಾಂದಿ ಕುಡಿದರೆ ಇವನಿಂದ ಸರ್ಕಾರಕ್ಕೆ 1800 ರೂಪಾಯಿಗಳಷ್ಟು ಟ್ಯಾಕ್ಸ್ ಬರುತ್ತದೆ. ಇವತ್ತು ಹತ್ತು ಸಾವಿರ ಕೋಟಿ ಟ್ಯಾಕ್ಸ್

ಬರುತ್ತದೆಂದರೆ ಇನ್ನು ಅದನ್ನು ತಯಾರು ಮಾಡುವ ಮಾಲೀಕರು, ಅವರೆಲ್ಲರದ್ದು ಒಟ್ಟು ಸೇರಿ 30 ರಿಂದ 40 ಸಾವಿರ ಕೋಟಿ ರೂ.ಗಳ ಆದಾಯ ಮದ್ಯದ್ದೇ ಆಯಿತು. ಅದು ಕರ್ನಾಟಕ ರಾಜ್ಯದ ಅರ್ಧ ಬಜೆಟ್ ಹಣ ಈ ರೈತರಿಂದಲೇ ಮತ್ತೆ ವಾಪಸ್ ಸರ್ಕಾರಕ್ಕೆ ಬರುತ್ತದೆ. ಇಲ್ಲಿ ಸರ್ಕಾರದವರು 3 ರಿಂದ 5 ಕೆ.ಜಿ. ಅಕ್ಕಿಯನ್ನು ತಿಂಗಳಿಗೆ ಕೊಡುವುದು, 2 ರೂಪಾಯಿ ಸಹಾಯಧನ ಕೊಡುವುದು, ಮತ್ತೆ ಎಲ್ಲವನ್ನೂ ರಿಟರ್ನ್ ಕುಡಿದ ರೈತರಿಂದ ವಾಪಸ್ ತೆಗೆದುಕೊಳ್ಳುವುದು. 75% ಇಂಥದ್ದರಿಂದಲೇ ಆದಾಯ ಬರುವುದು. 'ಎ' ಕ್ಲಾಸ್ ಡ್ರಿಂಕ್ಸ್‌ನಿಂದ ಹೆಚ್ಚಿಗೆ ಪರ್ಸೆಂಟೇಜ್ ಲಾಭ ಬರುವುದಿಲ್ಲ. ಈ ಚೀಪರ್ ರೇಟ್‌ನ ಒ.ಟಿ., ರಾಜಾ ಹೀಗೆ ಅದೆಂಥದ್ದೋ ವಿಸ್ಕಿಗಳಿವೆಯಲ್ಲಾ ಆ ವಿಸ್ಕಿಗಳಲ್ಲಿ 22 ರೂಪಾಯಿ ಟ್ಯಾಕ್ಸ್ ಬರುತ್ತದೆ. ರಾಜಾ ವಿಸ್ಕಿ ಒಂದು ಬಾಟಲ್ ಮಾರಿದರೆ 22 ರೂಪಾಯಿ ಟ್ಯಾಕ್ಸ್ ಸರ್ಕಾರಕ್ಕೆ ಬರುತ್ತದೆ. ಹೀಗಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ 51 ಸಾವಿರ ಕೋಟಿ ರೂ.ಗಳ ಆದಾಯ ಬರುತ್ತದೆಂದರೆ 25 ಸಾವಿರ ಕೋಟಿ ಕೇವಲ ಅಬಕಾರಿಯಲ್ಲಿ ಇವತ್ತು ರೈತರು ಮಾಲೀಕರಿಗೆ ಮತ್ತು ಸರ್ಕಾರಕ್ಕೆ ಟ್ಯಾಕ್ಸ್ ರೂಪದಲ್ಲಿ ಕಟ್ಟುತ್ತಿದ್ದಾರೆ. ಹೀಗಿರುವಾಗ ನೀವೇನು ರೈತರನ್ನು ಉದ್ಧಾರ ಮಾಡುತ್ತೀರಿ? ಕುಡಿಯುವವರಲ್ಲಿ ಶೇಕಡ 75% ರೈತರೇ ಇರುವುದು. 25% ಕಾರ್ಮಿಕರಿದ್ದಾರೆ. ಅಲ್ಲೆಲ್ಲೋ ಬಾರ್‌ನಲ್ಲಿ ಕುಳಿತುಕೊಂಡು 'ಎ' ಕ್ಲಾಸ್ ವಿಸ್ಕಿ ಕುಡಿಯುತ್ತಾರಲ್ಲಾ ಆದರಿಂದೇನೂ ಸರ್ಕಾರಕ್ಕೆ ಟ್ಯಾಕ್ಸ್ ರೂಪದಲ್ಲಿ ಹೆಚ್ಚು ಲಾಭ ಬರುವುದಿಲ್ಲ. ಯಾವುದೇ ಕಾರಣಕ್ಕೂ ನೀವು ಇದನ್ನು ಲಘುವಾಗಿ ನಗುತ್ತಾ ಈ ತೀರ್ಮಾನ ತೆಗೆದುಕೊಳ್ಳಬೇಡಿ. ಸ್ತ್ರೀ ಶಕ್ತಿ ಸಂಘದ ಬಹಳಷ್ಟು ಮಹಿಳೆಯರು ಊರಿಗೆ ಹೋದರೆ ಅಟ್ಟಾಡಿಸಿಕೊಂಡು ನಮಗೆ ಹೊಡೆಯುತ್ತಿದ್ದಾರೆ? ಬೈಯುತ್ತಿದ್ದಾರೆ, ನಿಮಗೆ ಮಾನ ಮರ್ಯಾದೆಯಿಲ್ಲವೇ ಎಂದು ಹೇಳಿ? ದಯವಿಟ್ಟು ಇದಕ್ಕೊಂದು ಕಡಿವಾಣ ಹಾಕಬೇಕು. ನಮ್ಮ ಅರಸೀಕೆರೆ ತಾಲ್ಲೂಕಿನಲ್ಲಿ ಎಕ್ಸೈಸ್ ಸೂಪರಿಂಟೆಂಡೆಂಟ್‌ನನ್ನು ನಾನು ಕರೆದು ಏಕಯ್ಯಾ ಹೀಗೆಲ್ಲಾ ಎಂದು ಕೇಳಿದರೆ ಅದಕ್ಕೆ ಅಯ್ಯೋ ನಮ್ಮ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಎಸ್ಕಾರ್ಟ್ ಕೊಡುತ್ತಾನೆ ಅನಧಿಕೃತವಾಗಿ ಕೇಸ್ ಇಳಿಸಿಕೊಂಡು ಬರುವುದಕ್ಕೆ. ಊರಿಗೊಂದು ಅಂಗಡಿಯಲ್ಲಿಯೂ ಅವರದ್ದು ಎರಡು ಲಕ್ಷ ಮೂರು ಲಕ್ಷದ್ದು ತುಂಬಿಕೊಂಡಿದ್ದಾರೆ. ಇವರು ಎಸ್ಕಾರ್ಟ್‌ನಲ್ಲಿ ಹೋಗಿ ಆ ಡ್ರಿಂಕ್ಸ್ ಇಳಿಸಿಕೊಂಡು ಬರುವುದು. ಈ ರೀತಿ ಆಗುತ್ತಿರುವುದನ್ನು ಮೊದಲು ನಿಲ್ಲಿಸಬೇಕು. ಕಡ ಸಿಗದೇ ಹೋದರೆ, ನಾನು ಒರಿಜಿನಲ್ ಆಗಿ ಆ ಸೂಪರಿಟೆಂಡೆಂಟ್‌ನನ್ನು ಕರೆದು ಕೇಳಿದೆ, ಕಡ ಕೊಡದೇ ಈ ರೀತಿ ಅನಧಿಕೃತವಾಗಿ ಮಾರದೇ ಹೋದರೆ 14 ಸಾವಿರ ಕೇಸ್ ಹೋಗುತ್ತದೆ. ಈ

ರೀತಿ ಕಡ ಕೊಟ್ಟು ಬೇಕಾಬಿಟ್ಟಿ ಮಾರಿದರೆ, ಎಲ್ಲಿ ಬೇಕೋ ಅಲ್ಲೆಲ್ಲಾ ಮಾರಿಸಿದರೆ 27500 ಕೇಸ್ ಹೋಗುವುದು. ಈ ರೀತಿ ನನಗೆ ಹಬ್ಬ ಹುಣ್ಣಿಮೆಗಳಲ್ಲಿ ಹೋಗಿಬಿಟ್ಟಿತು ಎನ್ನುತ್ತಾನೆ. ಅದೇ ಟಾರ್ಗೆಟ್ ಇಟ್ಟುಕೊಂಡು ಇವನು 27000 ಕೇಸ್ ಮಾರದೇ ಹೋದರೆ ನಿಮ್ಮ ಸಂಬಳ ನಿಲ್ಲಿಸುತ್ತೇನೆಂದು ತಾಕೀತು ಮಾಡುವುದಾದರೆ ಇದಕ್ಕಾಗಿಯೇ ಸರ್ಕಾರ ಇರಬೇಕೆ ? ಈ ಕೆಲಸ ಮಾಡುವುದಕ್ಕೆ ? ನಮ್ಮ ರೇಣುಕಾಚಾರ್ಯರು ಇಲ್ಲಿ ಕುಳಿತುಕೊಂಡು ನಗುತ್ತಿದ್ದರು. ರೈತರಿಗೆ ಬೇಕಾಬಿಟ್ಟಿ ಅನಧಿಕೃತವಾಗಿ ಕುಡಿಸುವುದು ಸರಿಯೇ? ಇನ್ನು ಕಳ್ಳಭಟ್ಟಿ ನಿಲ್ಲಿಸುತ್ತೇವೆಂದರು. ಎಂಥ ಕಳ್ಳಭಟ್ಟಿಯನ್ನು ಇವರು ನಿಲ್ಲಿಸುತ್ತಾರೆ? ಆ ಕಳ್ಳಭಟ್ಟಿ ಕುಡಿದುಕೊಂಡು ಹೇಗೋ ಅವನು ಜೀವನ ಮಾಡುತ್ತಿದ್ದ. ಇದಿನ್ನೇನೋ ಕಳ್ಳಭಟ್ಟಿಗೂ ಹೊರತೆ ಇದು? ಇದಕ್ಕಿಂತ ಹತ್ತು ರೂಪಾಯಿಗೆ ಒಂದು ಸಾರಾಯಿ ಸಿಗುತ್ತಿತ್ತು. ಈಗೇನಾಗಿದೆಯೆಂದರೆ ಅದು ಒಂದು ಕ್ವಾರ್ಟರ್‌ಗೆ 60 ರೂಪಾಯಿ ಇದೆ. ಅದಕ್ಕೆ ಬಣ್ಣ ಕದರುತ್ತಾರೆ, ಅದನ್ನೇ ಕೊಡುತ್ತಾರೆ, ಇನ್ನೇನು ಇವರು ಕೊಡುತ್ತಾರೆ ? ಅದರ ಕ್ವಾಲಿಟಿ ಮತ್ತು ಕ್ವಾಂಟಿಟಿಯನ್ನು ಯಾರಾದಾರೂ ಟೆಸ್ಟ್ ಮಾಡಿದ್ದಾರೆಯೆ ? ಅದನ್ನೇ ಟೆಸ್ಟ್ ಮಾಡಿ ಆ ಚೀಪರ್‌ದ್ದನ್ನು ಹೇಗೂ ಕುಡಿಯುವವನು ಕುಡಿದೇ ಕುಡಿಯುತ್ತಾನೆ. ಅದರ ರೇಟ್‌ನ್ನು ಒಂದಿಪ್ಪತ್ತೈದು ರೂಪಾಯಿಯಷ್ಟು ಇಳಿಸಿರಿ. ಬೆಲೆ ಇಳಿಸಿ ಈ ದೇಶದ ರೈತರನ್ನು ಕಾಪಾಡಿ. ಆ ಚೀಪರ್‌ಗಳನ್ನು 25 ರೂಪಾಯಿಗೆ ಇಳಿಸಿರಿ. ಅದಕ್ಕೇಕೆ ಇಷ್ಟೊಂದು ಟ್ಯಾಕ್ಸ್ ಹಾಕಿದ್ದೀರಿ ? ಏನು ಇದನ್ನು ಹುಡುಗಾಟದ ಪ್ರಶ್ನೆಯೆಂದು ನೀವು ತಿಳಿದುಕೊಂಡಿದ್ದೀರ ? ಸ್ತ್ರೀಶಕ್ತಿ ಸಂಘದ ಮತ್ತು ಸ್ವಸಹಾಯ ಸಂಘದ ರೈತ ಮಹಿಳೆಯರೇನು ಇದ್ದಾರೆ ಅವರ ಕಣ್ಣೀರಿನ ಶಾಪ ನಿಮಗೊಂದು ದಿನ ತಟ್ಟುತ್ತದೆ. ನಾನು ಇಲ್ಲಿ ನಿಂತುಕೊಂಡು ಇದನ್ನು ತಮಾಷೆಗೆ ಹೇಳುತ್ತಿಲ್ಲ. ಅವರುಗಳು ನಮ್ಮ ಹತ್ತಿರ ಬಂದು ಅಳುತ್ತಾ ತಮ್ಮ ತೊಂದರೆಯನ್ನು ತೋಡಿಕೊಳ್ಳುತ್ತಾರೆ. ಅದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಆದುದರಿಂದ ನೀವು ಏನಾದರೂ ಮಾಡಿ ಗ್ರಾಮೀಣ ಪ್ರದೇಶದಲ್ಲಿ ಏನು ಅಕ್ರಮವಾಗಿ ಮಾರುತ್ತಿದ್ದಾರೋ ಇದನ್ನು ನಿಲ್ಲಿಸುವುದಕ್ಕೆ ಹೇಳಿ. ಎಕ್ಸೈಸ್‌ನಿಂದ ಹತ್ತು ಸಾವಿರ ಕೋಟಿ ಬರುವುದೂ ಬೇಡ, ನಾಲ್ಕು ರೋಡ್ ಕಡಿಮೆಯಾದರೂ ಪರವಾಗಿಲ್ಲ, ಮಾನ್ಯ ಸಿ.ಟಿ. ರವಿಯವರು ಹೇಳಿದ ಹಾಗೆ ಏನೂ ಇಲ್ಲದಿದ್ದರೂ ಪರವಾಗಿಲ್ಲ. ಎಕ್ಸೈಸ್‌ನಲ್ಲಿ ಲಾಭ ಮಾಡಿದ್ದೇವೆಂದು ಹೇಳಿ ನಗುವುದಾದರೆ ಅದು ಸರಿಯಲ್ಲ. ಈಗ ಇದಕ್ಕೆ ಇನ್ನೂ ಹೆಚ್ಚು ಟ್ಯಾಕ್ಸ್ ಮಾಡಿದ್ದೀರಿ ಪುಣ್ಯಾತ್ಮರು. ಈಗ ಇರುವುದು ಸಾಲದೆಂದು ಹೇಳಿ ಮತ್ತೆ ಟ್ಯಾಕ್ಸ್ ಹಾಕಿದ್ದೀರಿ. ಕುಡಿಯುವ ಚಟವನ್ನು ಯಾರೂ ಬಿಡಿಸುವುದಕ್ಕಾಗುವುದಿಲ್ಲ. ಕುಡಿಯುವವರು ಕುಡಿದೇ ಕುಡಿಯುತ್ತಾರೆ. ಆದರೆ

ನಾವು ಅಂಥ ಜನಗಳನ್ನು ಕಾಪಾಡುವುದು ಹೇಗೆ ಎನ್ನುವುದನ್ನು ಯೋಚನೆ ಮಾಡಬೇಕು. ಅವರನ್ನು ಆರ್ಥಿಕ ಸಂಕಷ್ಟದಿಂದ ನಾವು ಹೇಗೆ ಪಾರು ಮಾಡಬೇಕು ಎಂಬ ಬಗ್ಗೆ ಯೋಚನೆಯನ್ನು ಮಾಡಬೇಕು. ರೈತಾಪಿ ಜನಗಳ ಬಾಳನ್ನು ಹೇಗೆ ಹಸನು ಮಾಡಬೇಕು ಎಂಬ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗೇನಾಗಿದೆ ಅಂದರೆ ಹೆಚ್ಚಾಗಿ ಮಹಿಳೆಯರು ಗುಳೆ ಹೋಗಿ ಬೆಂಗಳೂರಿಗೇ ಹೆಚ್ಚು ಬರುತ್ತಿದ್ದಾರೆಂದು ಹೇಳುತ್ತಾರೆ. ಏಕೆ ಮಹಿಳೆಯರು ಬೆಂಗಳೂರಿಗೇ ಬರುತ್ತಾರೆ? ಅವರೇನು ಇಲ್ಲಿ ಟೀಚರ್ ಕೆಲಸಕ್ಕೆ ಬರುತ್ತಾರೆಯೇ? ವಿಧಾನಸೌಧದಲ್ಲಿ ಕೆಲಸ ಮಾಡಲು ಬರುತ್ತಾರೆಯೇ? ಅವರು ಬರುವುದು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವುದಕ್ಕೆ ಆ ಗಾರ್ಮೆಂಟ್ಸ್‌ಗಳನ್ನು ಸುಮಾರು ಒಂಬೈನೂರರಿಂದ ಸಾವಿರದವರೆಗೆ ಬೆಂಗಳೂರಿನಲ್ಲಿಯೇ ನಡೆಸಲು ಕೊಡುತ್ತಿದ್ದೀರಲ್ಲ. ಅವರನ್ನೆಲ್ಲ ತಳ್ಳಿ ಸ್ವಲ್ಪ ಅರಸೀಕೆರೆ ಕಡೆಗೆ. ಅಲ್ಲಿಯೇ ಗಾರ್ಮೆಂಟ್ಸ್ ತೆಗೆದು ಬಟ್ಟೆ ಹೊಲಿದರೆ ಅಂಥ ಬಟ್ಟೆಯನ್ನು ಜನರು ಬೇಡವೆಂದು ಹೇಳುತ್ತಾರೆಯೇ? ಕೊಂಡುಕೊಳ್ಳುವವರಿಗೆ ಅರಸೀಕೆರೆಯ ಗಾರ್ಮೆಂಟ್ಸ್‌ನಲ್ಲಿ ಬಟ್ಟೆಯನ್ನು ಹೊಲಿದಿರುವುದು ಎಂದು ಗೊತ್ತಾಗುತ್ತದೆಯೇ ? ನೀವು ಟೆಕ್ಸ್‌ಟೈಲ್ ಪಾರ್ಕ್ ಹಾಗೂ ಇತ್ಯಾದಿ ಬೇಕಾದಷ್ಟು ನೀವು ಹೇಳಿದ್ದೀರಲ್ಲಪ್ಪಾ, ಆವೆಲ್ಲವನ್ನು ಅರಸೀಕೆರೆ ಹಾಗೂ ಬೇರೆ ಬೇರೆ ಕಡೆಗೆ ಹಾಕಿ. ಬೇಕಾದಷ್ಟು ಜಾಗ ಅಲ್ಲೆಲ್ಲಾ ಇದೆ. ಅಲ್ಲಿ ಬೇಕಾದಷ್ಟು ಬಟ್ಟೆಗಳನ್ನು ಹೊಲಿಸಿ. ಒಂದು ಲೋಡ್ ಬಟ್ಟೆ ಹೊಲಿಯುವುದಕ್ಕೆ ಹತ್ತು ಸಾವಿರ ಜನರು ಬೆಂಗಳೂರಿಗೆ ಬರಬೇಕು. ಅದೇ ಒಂದು ಲಾರಿ ಲೋಡ್ ಆಲ್ಲಿಗೆ ಬಂದರೆ ಅಲ್ಲಿಯೇ ಆ ಜನರು ಬಟ್ಟೆಯನ್ನು ಹೊಲಿಯುತ್ತಾರೆ. ಇವತ್ತೊಂದು ಸಣ್ಣ ಗಾರ್ಮೆಂಟ್ಸ್‌ನ್ನು ಒಬ್ಬ ಪುಣ್ಯಾತ್ಮನೊಬ್ಬ ಅರಸೀಕೆರೆಯಲ್ಲಿ ಮಾಡಿದ್ದಾನೆ. ಒಂದು ಚಿಕ್ಕ ಬಸ್ ಬಿಟ್ಟಿದ್ದಾನೆ. ಬೆಳಿಗ್ಗೆ ಎದ್ದು ಟಿಫನ್ ಕ್ಯಾರಿಯರ್‌ನಲ್ಲಿ ಊಟ ಕಟ್ಟಿಕೊಂಡು ಬರುತ್ತಾರೆ. ಬಟ್ಟೆ ಹೊಲಿಯುತ್ತಾರೆ, ಸಾಯಂಕಾಲ ಮತ್ತೆ ಬಿಸಿಯೂಟಕ್ಕೆ ಹೋಗುತ್ತಾರೆ. ಎಷ್ಟು ಆರೋಗ್ಯವಾಗಿದ್ದಾರೆ ಗೊತ್ತೆ ? ಅಲ್ಲೆಲ್ಲಾ ಬಂದು ಈ ಸ್ತ್ರೀಶಕ್ತಿಯವರು ಈ ಗಾರ್ಮೆಂಟ್ಸ್‌ನ್ನು ಇಲ್ಲಿಯೇ ಕಟ್ಟಿಸಿ ಎಂದು ಬೊಬ್ಬೆ ಹೊಡೆದುಕೊಳ್ಳುತ್ತಾರೆ. ಆದರೆ ನೀವು ಬೆಂಗಳೂರಿನಲ್ಲಿಯೇ ಗಾರ್ಮೆಂಟ್ಸ್ ತೆಗೆಯಲು ಲೈಸೆನ್ಸ್ ಕೊಡುತ್ತೀರಿ. ನೀವು ಈ ಗಾರ್ಮೆಂಟ್ಸ್‌ನವರನ್ನು ಅರಸೀಕೆರೆ ಭಾಗಕ್ಕೆ ಕಳುಹಿಸಿ. ಅವರಿಗೆ ಖಾಲಿ ಜಾಗವನ್ನು ಎಷ್ಟು ಬೇಕೋ ಅಷ್ಟು ಕೊಡುತ್ತೇವೆ. ಅಲ್ಲಿ ಈ ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ತೆಗೆಯಲಿ. ಆಗ ಏಕೆ ಬೆಂಗಳೂರಿಗೆ ಆ ಭಾಗದ ಮಹಿಳೆಯರು ಬರುತ್ತಾರೆ ? ಬೆಂಗಳೂರಿನಲ್ಲಿ

ಅವರಿಗೆ ಕೊಡುವುದು 5,000/- ಸಂಬಳ. ಈ 5,000/- ರೂ.ಗಳಲ್ಲಿ ಮನೆ ಬಾಡಿಗೆಯೇ 3,500/- ರೂ.ಗಳಾಗುತ್ತದೆ. ಮನೆ ಬಾಡಿಗೆ ಕೊಟ್ಟು ನಲ್ಲಿ ನೀರಿಗೆ, ಕರೆಂಟ್‌ಗೆ ದುಡ್ಡು ಕೊಟ್ಟು ಕೊನೆಗೆ ಜಿಂಕ್‌ಶಿಟ್ ಮನೆ ಮೇಲೆ ಹೋಗಿ ಹತ್ತಿ ನೀರೂ ಕೂಡ ಇಲ್ಲದೆಯೇ, ಟಾಯ್ಲೆಟ್ ಪರಿಸ್ಥಿತಿಯೂ ಕೂಡ ಸರಿ ಇಲ್ಲದಿರುವಂಥದ್ದಿರುತ್ತದೆ. ನಾನು ಒಂದು ಬಾರಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಅವರನ್ನು ಓಟಿಗಾಗಿ ಕರೆದುಕೊಂಡು ಹೋಗಲು ಬಂದಿದ್ದೆ. ಅವರ ಜೀವನದ ಗೋಳು ನೋಡಿದರೆ ಆಯ್ಯೋ ಎನಿಸುತ್ತದೆ. ಬೆಂಗಳೂರಿನಲ್ಲಿ ಅನ್ನಸಂದ್ರದ ಕಡೆಗಳೆಲ್ಲೆಲ್ಲಾ ನೋಡಿದರೆ ನಿಜವಾಗಿಯೂ ಬೇಜಾರಾಗುತ್ತದೆ. ಅವರನ್ನೆಲ್ಲ ಅರಸೀಕೆರೆಯಲ್ಲಿಯೇ ಕೆಲಸ ಮಾಡುವ ಹಾಗೆ ಮಾಡಿ. ಆಗ ಅವನಿಗೆ ಕೊಡುವ 5 ಸಾವಿರ ರೂ.ಗಳಿಂದ ಮನೆಯ ಆದಾಯ ಹೆಚ್ಚಾಗುತ್ತದೆ. ಅರಸೀಕೆರೆಯಲ್ಲಿ 5 ಸಾವಿರ ರೂ.ಗಳನ್ನು ಕೊಟ್ಟರೆ ಅಥವಾ 4 ಸಾವಿರ ರೂ.ಗಳನ್ನು ಕೊಟ್ಟರೂ ಸಾಕು. ಹೆಚ್ಚೆಂದರೆ ಐದು ನೂರು ರೂ.ಗಳಿಂದ ಒಂದು ಸಾವಿರ ರೂ.ಗಳು ಖರ್ಚಾಗಬಹುದು. ಒಂದು ಮನೆಯಲ್ಲಿ ಮೂವರು ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಹೋದರೆ ತಿಂಗಳಿಗೆ ಹತ್ತು ಸಾವಿರ ರೂ.ಗಳ ಆದಾಯ ಹೆಚ್ಚಾಗುತ್ತದೆ.

ಅವರ ಮನೆ ಉದ್ಧಾರವಾಗುವುದಿಲ್ಲ. ಇಲ್ಲಿ ಏನಾಗುತ್ತದೆ ಎಂದರೆ ಮಗಳನ್ನು ಇಲ್ಲಿ ಕಳುಹಿಸುತ್ತಾನೆ. ಹಿಂದುಗಡೆಯಿಂದ ಅಪ್ಪ ಹೋಗುತ್ತಾನೆ. ಎಲ್ಲಿಗೆ ಹೋಗುತ್ತಿಯಪ್ಪ, ಎಂದರೆ, ನನ್ನ ಮಗಳು ಅಲ್ಲಿ ಗಾರ್ಮೆಂಟ್ಸ್‌ಗೆ ಹೋಗುತ್ತಾಳಪ್ಪ ಅವಳಿಗೆ ಒಂದಿಷ್ಟು ರಾಗಿನೂ, ಹತ್ತು ಕಾಯಿನೂ ಕೊಟ್ಟು ಬರುತ್ತೀನಿ ಎಂದು ಅವನು ಅದನ್ನು ಹಿಡಿದುಕೊಂಡು ಬರುತ್ತಾನೆ. ಅಲ್ಲಿಂದ ರೇಷನ್ ತರುವುದು, ಇಲ್ಲಿ ಬೇಯಿಸಿಕೊಂಡು ತಿನ್ನುವುದು. ಇದನ್ನೆಲ್ಲ ನೋಡಬೇಕು. ವಿಕೇಂದ್ರಿಕರಣ ಮಾಡಬೇಕು. ಈ ಗಾರ್ಮೆಂಟ್ಸ್‌ನ್ನೆಲ್ಲ ಆ ಕಡೆಗೆ ತೆಗೆದುಕೊಂಡು ಹೋಗಬೇಕು. ಗಾರ್ಮೆಂಟ್ಸ್‌ನ್ನು ಗ್ರಾಮೀಣ ಪ್ರದೇಶಕ್ಕೆ ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಿ, ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಸವಲತ್ತುಗಳನ್ನು ಕೊಟ್ಟು Textile park ಗಳನ್ನು ಇಲ್ಲಿ ಮಾಡುವುದರ ಬದಲು ಅಲ್ಲಿ ಮಾಡಿ. ಅವರನ್ನೆಲ್ಲ ಕರೆದುಕೊಂಡು ಜವಳಿ ಉದ್ಯಮವನ್ನು ನೀವು ಗ್ರಾಮೀಣ ಪ್ರದೇಶದಲ್ಲಿ ಪ್ರಾರಂಭ ಮಾಡಿದರೆ ಅವರ ಆರ್ಥಿಕ ಸಂಕಷ್ಟ ನಿವಾರಣೆಯಾಗುವುದಿಲ್ಲವೇ? ಸ್ತ್ರೀಶಕ್ತಿ ಸಂಘ ಮಾಡಿ ನಿಜವಾಗಿ ಮಹಿಳೆಯರಿಗೆ ಬಲ ಕೊಟ್ಟು ಹಾಗೆ ಆಗುವುದಿಲ್ಲವೇ? ಇಂತಹ ಪರಿಸ್ಥಿತಿಗಳನ್ನು ನಾವು ಆಲೋಚನೆ ಮಾಡಬೇಕು. ಸದನದಲ್ಲಿ ಕುಳಿತುಕೊಂಡು ಯಾವುದನ್ನೋ ಆಲೋಚನೆ ಮಾಡಿದರೆ ಆಗುವುದಿಲ್ಲ. ಇಂತಹ ವಿಚಾರಗಳಲ್ಲಿ ತೊಡಗಿಸಿ. ಇಂತಹುವುಗಳಿಗೆ ಬಜೆಟ್‌ನಲ್ಲಿ ವಿಶೇಷ

ಅನುದಾನವನ್ನು ಇಟ್ಟು, ಏನು ಫ್ಯಾಕ್ಟರಿಗಳನ್ನು ತೆರೆಯುವುದಕ್ಕೆ ಬರುತ್ತಾರೆ. ಅವರಿಗೆ ಹೆಚ್ಚಿನ ರೀತಿಯಲ್ಲಿ ಸಬ್ಸಿಡಿ ಅಥವಾ ಭೂಮಿ ಸಹಾಯವನ್ನು ಮಾಡಿದರೆ ನಿಜವಾಗಲೂ ಬೆಂಗಳೂರಿನಲ್ಲಿ ಮಾಡುವಂತಹ ವ್ಯಕ್ತಿ ಅಲ್ಲಿಗೆ ಬರುತ್ತಾನೆ. ಅವರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದರ ಜೊತೆಗೆ ಈ ಸ್ತ್ರೀ ಶಕ್ತಿ ಸಂಘದವರು ಪಶುಸಂಗೋಪನೆ ಇಲಾಖೆಯಲ್ಲಿ ಹಾಲಿನ ಡೈರಿ ಮಾಡಿಕೊಂಡು ಸುಭದ್ರವಾದ ನೆಲೆ ಇದ್ದು ಒಳ್ಳೆಯ ಮಾರುಕಟ್ಟೆ ಇರುವುದರಿಂದ ನೀವು ಕೊಡುತ್ತಿರುವ ಸಹಾಯಧನದಿಂದ ಇವತ್ತು ಬಹಳಷ್ಟು ಕುಟುಂಬಗಳು ಕರ್ನಾಟಕ ರಾಜ್ಯದಲ್ಲಿ ಬದುಕುತ್ತಿವೆ. ಇವತ್ತು ಆಂತಹ ಹಸುಗಳನ್ನು ಕೊಳ್ಳುವುದಕ್ಕೆ ಅವರಿಗೆ ಸಹಾಯ ಮಾಡವುದಕ್ಕೆ ಸಬ್ಸಿಡಿ ಹಣವನ್ನು ಬಹಳ ಪ್ರಮಾಣದಲ್ಲಿ ನೀಡಿ ಆ ಪಶುಸಂಗೋಪನೆಗೆ ಹೆಚ್ಚಿನ ರೀತಿಯ ಉತ್ತೇಜನವನ್ನು ಕೊಟ್ಟು, ಹಸುಗಳನ್ನು ಕೊಂಡುಕೊಳ್ಳುವಂತಹ ವ್ಯವಸ್ಥೆಯನ್ನು ಗ್ರಾಮೀಣ ಪ್ರದೇಶದ ಬ್ಯಾಂಕುಗಳಲ್ಲಿ ಮಾಡಿದರೆ ನಿಜವಾಗಲೂ ಆ ಸ್ತ್ರೀಶಕ್ತಿ ಸಂಘದವರು ಆರ್ಥಿಕ ಸಫಲತೆಯನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ. ಆದೆಲ್ಲ ಸಬ್ಸಿಡಿಯಾ ? ಉತ್ತೇಜವನೇ ? ಕೊಡಿ ಸ್ತ್ರೀ ಶಕ್ತಿ ಸಂಘದವರು ಕಳ್ಳರಲ್ಲ. ನಿಜವಾಗಿ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಇವತ್ತು ಬ್ಯಾಂಕ್ ಮ್ಯಾನೇಜರ್ ಒಕ್ಕೂಟದವರು ಇವತ್ತು ಯಾವ ದುಡ್ಡಿದೆ ನಮ್ಮ ಹತ್ತಿರ ಅಂದರೆ ಸ್ತ್ರೀ ಶಕ್ತಿ ಸಂಘದ ದುಡ್ಡು ಬಿಟ್ಟರೆ ಇನ್ನು ಯಾವುದೂ ಇಲ್ಲ. ಬಹಳ ಚೆನ್ನಾಗಿ ಒಂದು, ಎರಡು, ಮೂರು ಲಕ್ಷದವರಿಗೂ ಉಳಿತಾಯ ಮಾಡಿದ್ದಾರೆಂದು ಹೇಳುತ್ತಿದ್ದರು. ಅವರು ಕುಟುಂಬದ ವ್ಯವಸ್ಥೆಯನ್ನು ಬಹಳ ಸುಭದ್ರವಾಗಿ ನೋಡಿಕೊಳ್ಳುತ್ತಿದ್ದಾರೆ. ಒಂದು ಹಬ್ಬ ಬರಲಿ, ಹುಣ್ಣಿಮೆ ಬರಲಿ, ಮಗ ಓದುತ್ತಿರಲಿ ಹಣವನ್ನು ಕೊಟ್ಟು ಆ ಕುಟುಂಬದ ಘನತೆ ಗೌರವವನ್ನು ಎತ್ತಿ ಹಿಡಿಯುತ್ತಿದ್ದಾರೆ. ಅದಕ್ಕೋಸ್ಕರ ಈ ಸ್ತ್ರೀ ಶಕ್ತಿ ಸಂಘಗಳಿಗೆ ಹೆಚ್ಚಿನ ಅವಕಾಶವನ್ನು ಈ ಸಂದರ್ಭದಲ್ಲಿ ಕೊಡಬೇಕೆಂದು ಹೇಳುತ್ತೇನೆ.

ಆರೋಗ್ಯ ಇಲಾಖೆ ಬಗ್ಗೆ ಹೇಳುವುದಾದರೆ, ಆಸ್ಪತ್ರೆಗಳಲ್ಲಿ ಡಾಕ್ಟರ್ ಇಲ್ಲ. ಅದು ಎಲ್ಲಾ ಶಾಸಕರಿಗೂ ಗೊತ್ತು. ವಿದ್ಯಾರ್ಥಿಗಳು ಎಂ.ಬಿ.ಬಿ.ಎಸ್. ಓದುತ್ತಾರೆ. ಮೂರರಿಂದ, ಆರು ಅಥವಾ ಏಳು ತಿಂಗಳಿನವರೆಗೂ ಹಳ್ಳಿ ಕಡೆ ಬಂದು ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಅಲ್ಲಿ ಕೆಲಸ ಮಾಡುತ್ತಲೇ ಎಂ.ಡಿ. ಸೀಟಿಗೆ ಅರ್ಜಿ ಹಾಕಿ, influence ಮಾಡಿ ಹೊರಡುತ್ತಾರೆ. ಆಮೇಲೆ ಇನ್ನೊಂದು ದೊಡ್ಡ ತಪ್ಪು ಏನು ಮಾಡಿರುವುದು ಎಂದರೆ ಸಾಯಂಕಾಲದ

leisure ಸಮಯದಲ್ಲಿ ಪ್ರೈವೇಟ್ ಶಾಪ್‌ಗೆ ಹೋಗಿ duty ಮಾಡಬಹುದು ಎಂದು ನೀವು permission ಕೊಟ್ಟಿದ್ದೀರಿ ಅವರು ಏನು ಮಾಡುತ್ತಾರೆಂದರೆ ಅಲ್ಲಿ ಏನು ಪುಕ್ಕಟೆಯಾಗಿ ಔಷಧವನ್ನು ಕೊಡುತ್ತಾರೆ. ಅಲ್ಲಿಗೆ ಯಾರೇ ಹೋಗಲಿ ಸಾಯಂಕಾಲ ಬಂದು ಶಾಪ್‌ನಲ್ಲಿ ನೋಡು ಎಂದು ಹೇಳುತ್ತಾರೆ. ಅಲ್ಲಿ ಹೋಗಿಬಿಟ್ಟು ಇವರು ಕೊಟ್ಟಂತಹ medicine ಅಲ್ಲಿ ದುಡ್ಡು ಕೊಟ್ಟು ತೆಗೆದುಕೊಳ್ಳಬೇಕು. ಇಂತಹ ಪರಿಸ್ಥಿತಿಯನ್ನು ನೀವು ತಂದೊಡ್ಡಿದ್ದೀರಿ. ದಯಮಾಡಿ ಆರೋಗ್ಯ ಇಲಾಖೆ ಹೆಚ್ಚಿನ ರೀತಿಯಲ್ಲಿ ಡಾಕ್ಟರನ್ನು ಹಾಕಬೇಕು. ಜನರು ನಮಗೆ ಯಾವನಯ್ಯ ಇವನನ್ನು ಎಂಎಲ್‌ಎ ಮಾಡಿದವನು ಒಬ್ಬ ಡಾಕ್ಟರನ್ನು ಹಾಕಿಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ನಾವು ಮಲ್ಲೇಶ್ವರಂನಲ್ಲಿ ಹೋಗಿ ಕಮೀಷನರ್ ಆಫೀಸ್‌ಗೆ ಹತ್ತುವುದು ಇಳಿಯುವುದು ಆಗಿದೆ. ನಾವು ನಾಲ್ಕು ಜನ ಡಾಕ್ಟರನ್ನು ಕೊಡಿ ಎಂದು ಕೇಳಿದರೆ ಒಬ್ಬರು ಡಾಕ್ಟರನ್ನು ಕೊಡುವುದಿಲ್ಲ. ಈ ಪರಿಸ್ಥಿತಿ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಇದೆ ಎಂದರೆ ಈ ವಿಧಾನ ಸೌಧದಲ್ಲಿ ಕುಳಿತುಕೊಂಡು ಏನು ಮಾಡುವುದು? ದಯಮಾಡಿ ಇದರ ಬಗ್ಗೆ ಹೇಳಬೇಕು. ಈಗ ಮಾನ್ಯ ಮುಖ್ಯಮಂತ್ರಿಗಳೇ ಆರೋಗ್ಯ ಸಚಿವರು. ಅವರೂ ಇಲ್ಲ. ಯಾರೂ ಇಲ್ಲ. ನಾವು ಕಷ್ಟವನ್ನು ಯಾರಿಗೆ ಹೇಳುವುದು? ನೀವು ಡಾಕ್ಟರನ್ನು ಯಾವ ರೀತಿ appointment ಮಾಡಿಕೊಳ್ಳುತ್ತೀರಿ? ಈಗ ಒಂದು ಕಾನುನು ತಂದಿದ್ದೀರಿ, ನಾನು ಮೊನ್ನೆ ನೋಡಿದೆ. ಆ ಕಾನೂನಿಗೆಲ್ಲ ಜಗ್ಗುವುದಿಲ್ಲ. ಇದಕ್ಕೆ ಅಮೆಂಡ್‌ಮೆಂಟ್ ಪಾಸ್ ಆಗಬೇಕು. ನೀವು ಏನು ಎಂಬಿಬಿಎಸ್ ಓದಿ ಎರಡು–ಮೂರು ವರ್ಷ ಡಾಕ್ಟರ್‌ಗಿರಿ ಮಾಡಿ ನೀವು ಆಚೆ ಕಡೆ ಹೋಗಬೇಕೆಂದು ನೀವು ಕಾನೂನನ್ನು ಕಡ್ಡಾಯವಾಗಿ ತರದೇ ಹೋದರೆ ಅವರು ಏನೂ ಮಾಡುವುದಿಲ್ಲ. ಅಲ್ಲಿ ಹೋಗುತ್ತಾರೆ, ಎಂ.ಡಿ. ಸೀಟು ಮಾಡಿಕೊಳ್ಳುತ್ತಾರೆ. ಎಂ.ಡಿ. ಮುಗಿಸಿಕೊಂಡು ಬರುತ್ತಿದ್ದ ಹಾಗೆ ಮಾವನೋ ಯಾರೋ ಒಂದು ನರ್ಸಿಂಗ್ ಹೋಮ್ ರೆಡಿ ಮಾಡಿಕೊಂಡಿರುತ್ತಾರೆ. ಎಲ್ಲಾ ಆ ನರ್ಸಿಂಗ್ ಹೋಮ್‌ಗೆ ಹೊರಟರು. ಹೀಗಾದರೆ ರೈತರಿಗೆ ಯಾರು ಇಂಜೆಕ್ಷನ್ ಕೊಡುವವರು ? ಯಾರು ರೈತರ ಬಾಳಿನಲ್ಲಿ ಬಂದು ನೋಡಿಕೊಳ್ಳುವವರು ? ಖಾಸಗಿಯವರ ಹತ್ತಿರ ಹೋದರೆ ಇವತ್ತು ರೈತರು ಉಳಿಯುವುದಕ್ಕಾಗುತ್ತದೆಯೇ ? ಈ ಪರಿಸ್ಥಿತಿಯನ್ನು ತಂದಿಡುವವರು ಯಾರು ? ದಯವಿಟ್ಟು ಸರ್ಕಾರ ಬಹಳ ಮಟ್ಟಿಗೆ ಯೋಜನೆ ಮಾಡಿ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕಂದಾಯ ಇಲಾಖೆ ಬಗ್ಗೆ ತೆಗೆದುಕೊಂಡರೆ, ನೆಮ್ಮದಿ ಕೇಂದ್ರ ಎಲ್ಲಾ ಜನರ ನೆಮ್ಮದಿಯನ್ನು ಹಾಳು ಮಾಡಿದೆ. ಅದನ್ನು ಏಕೆ ಬಿಟ್ಟುಕೊಂಡಿದ್ದೀರೋ ನನಗೆ ಗೊತ್ತಿಲ್ಲ. ನೆಮ್ಮದಿ ಕೇಂದ್ರದಲ್ಲಿ ಭ್ರಷ್ಟಾಚಾರ ಶುರುವಾಗಿದೆ. ಅಲ್ಲಿ ಒಂದು ಜನರೇಟರ್ ಆಫ್ ಮಾಡಿ ಬಿಡುತ್ತಾನೆ. ಇಲ್ಲವೆಂದರೆ ಕರೆಂಟ್ ಫ್ಯೂಜ್ ಕಿತ್ತುಬಿಡುತ್ತಾನೆ. ಅಲ್ಲಿ ನಾಲ್ಕೈದು ಜನ ಬ್ರೋಕರ್‌ಗಳು ಸೇರಿಕೊಳ್ಳುತ್ತಾರೆ. ಈ ಜನರಿಗೆ ಗೊತ್ತಿರುವುದಿಲ್ಲ, ಕ್ಯೂ ನಿಂತಿರುತ್ತಾರೆ. ನಾವು ಜನರೇಟರ್ ಆನ್ ಮಾಡಿ ಅದಕ್ಕೆ ಡೀಸೆಲ್ ಹಾಕಿ ನಿಮ್ಮ documents ಮಾಡಿಸಿಕೊಡಬೇಕು. ಹತ್ತತ್ತು ರೂಪಾಯಿ ಜಾಸ್ತಿ ಕೊಡಿ ಎಂದು ನನ್ನೆದುರಿಗೆ ಕಿತ್ತುಕೊಳ್ಳುತ್ತಾರೆ. ಆಮೇಲೆ ಹೋಗಿ ಆಫ್ ಮಾಡಿಬಿಟ್ಟು ಅಲ್ಲಿ ಒಬ್ಬ ಹೆಣ್ಣು ಮಗಳನ್ನು ಕೂರಿಸಿರುತ್ತಾರೆ. ಅಲ್ಲಿ ಆ ಹೆಣ್ಣು ಮಗಳು ಪೇಪರ್ ಇಲ್ಲ ಎಂದು ಹೇಳುತ್ತಾಳೆ. ಪೇಪರ್ ಕೂಡ ಇವರೇ ತೆಗೆದುಕೊಂಡು ಹೋಗಿ ಕಾಪಿ ತೆಗೆದುಕೊಡುವುದಕ್ಕೆ ಕೈಗೆ ಕೊಡಬೇಕು. ಈ ಪರಿಸ್ಥಿತಿ ಉಂಟಾಗಿದೆ. ನಾವು Public Accounts Committee ಯಲ್ಲಿ ಒಂದು ವಾರ ಚರ್ಚೆ ಮಾಡಿ ಆ ನೆಮ್ಮದಿ ಕೇಂದ್ರದಲ್ಲಿ ಯಾರ್‍ಯಾರು ಏನೇನು ಮಾಡುತ್ತಿದ್ದಾರೆ. ಏನೇನು ಸತ್ಯಾಂಶ ಇದೆ ಎಂದು ಒಂದು ವರದಿ ಕೊಟ್ಟೆವು. ಅಲ್ಲಿ ದುಡ್ಡು ತೆಗೆದುಕೊಳ್ಳುತ್ತಾರೆ. ಆ ದುಡ್ಡು ತೆಗೆದುಕೊಂಡು ತಾಲ್ಲೂಕು ಆಫೀಸ್‌ನಲ್ಲಿ ಎಲ್ಲಿಗೆ ಕಟ್ಟುತ್ತಾರೆ ಎಂದು ಗೊತ್ತಿಲ್ಲ. ಅದಕ್ಕೆ ಒಂದು ಕಾಪಿಗೆ 15 ರೂಪಾಯಿ ತೆಗೆದುಕೊಳ್ಳತ್ತಾರಲ್ಲ. ಈಗ ಅದನು ಹತ್ತು ರೂಪಾಯಿಗೆ ಇಳಿಸಿದ್ದಾರೇನೋ. ಹತ್ತು ರೂಪಾಯಿಯಂತೆ ಒಂದು ದಿವಸಕ್ಕೆ ಎಷ್ಟು ಕಲೆಕ್ಷನ್ ಆಗುತ್ತದೆ. ಅದೆಲ್ಲ miscellaneous account ಎಂದು DC Office ಗೆ ಹೋಗುತ್ತದೆ. ಇವರಿಗೆ 25,000 ರೂಪಾಯಿ maintenance ಗೆ ಕೊಡುತ್ತಾರೆ. ಉಳಿದ ದುಡ್ಡು ಏನಾಯಿತು? ಇವತ್ತಿಗೂ ಕರ್ನಾಟಕ ರಾಜ್ಯದಲ್ಲಿ ಎಷ್ಟು ಹಣ ನೆಮ್ಮದಿ ಕೇಂದ್ರದಿಂದ ಬಂದಿದೆ? ಆ ಹಣ ಯಾವ ಅಕೌಂಟ್‌ನಲ್ಲಿದೆ? ಯಾರ ಹತ್ತಿರ ಇದೆ ಎಂದು ಯಾರಿಗಾದರೂ ಗೊತ್ತೆ? ಇದರ ಬಗ್ಗೆ ಆರ್ಥಿಕ ಇಲಾಖೆಗೆ ಗೊತ್ತೇ? ಆ ನೆಮ್ಮದಿ ಕೇಂದ್ರದ ರೈತರಿಂದ ವಸೂಲಿಯಾದಂತಹ ಕೋಟ್ಯಾಂತರ ರೂಪಾಯಿ ಹಣ ಎಲ್ಲಿದೆ? ಯಾರ ಕೈ ಸೇರಿದೆ? ಅದು ಏನಾಗಿದೆ? ಸರ್ವೆ ಸ್ಕೆಚ್ ಬಗ್ಗೆ ಹೇಳುವುದಾದರೆ ಸರ್ವೇಯರ್‌ಗಳನ್ನು ನೇಮಿಸಿಕೊಳ್ಳುತ್ತೇನೆಂದು ಹೇಳಿದಿರಿ, ಆದರೆ ನೇಮಿಸಿಕೊಳ್ಳಲಿಲ್ಲ. ಆದರೆ ಕಾನೂನು ಮಾತ್ರ ಮಾಡಿದಿರಿ. ಸರ್ವೆ ಸ್ಕೆಚ್ ಇಲ್ಲದೆ registration ಇಲ್ಲ. ಪೊಗರುದಸ್ತಾಗಿ ಕಾನೂನು ಮಾತ್ರ ಮಾಡುತ್ತೀರಿ. ಎಲ್ಲಿಂದ ಸರ್ವೆ ಮಾಡಿಸಬೇಕು ? ಯಾರಿಂದ ಸರ್ವೆ ಮಾಡಿಸಬೇಕು ? ಇಡೀ ತಾಲ್ಲೂಕಿಗೆ ಒಬ್ಬ ಸರ್ವೇಯರ್ ಮಾತ್ರ ಇದ್ದಾನೆ.

ಎಷ್ಟು ಜನರ ಸರ್ವೆ ಮಾಡುತ್ತಾನೆ ? ಸರ್ವೆ ಮಾಡಿಸುವುದಕ್ಕೆ ಒಬ್ಬ ರೈತ ಒಂದು ಕುಂಟೆಗೆ 607 ರೂಪಾಯಿ ಕಟ್ಟಬೇಕು. 15 ಸರ್ವೆ ನಂಬರ್ ಇದ್ದರೂ ಕೂಡ 15 ಜನರೂ ಕೂಡ ತಲಾ 600 ರೂಪಾಯಿ ಕಟ್ಟಬೇಕು. ಸರ್ವೇಯರ್ ಇಲ್ಲವೆನ್ನುವುದು ಹೋಗಲಿ, ಒಂದು ಪೋಡಿಗೆ ರೂ. 600 ಚಿಲ್ಲರೆ ಕಟ್ಟಬೇಕು. ರೈತರು ಎಲ್ಲಿ ಹೋಗಬೇಕು ? ಅದನ್ನು ಯಾರಾದರೂ ವಿಂಗಡಿಸಿ ಒಂದು ಗುಂಟೆ ಜಮೀನು ಅಥವಾ ಸೈಟು ಮಾರಬೇಕೆಂದರೆ ಸ್ಕೆಚ್ ಮಾಡಿ ಮಾರಾಟ ಮಾಡುವುದಕ್ಕೆ ಒಂದೂವರೆ ಸಾವಿರ ರೂಪಾಯಿ ಖರ್ಚಾಗುತ್ತದೆ. ಒಂದು ಗುಂಟೆ ತಾನೇ ಸೈಟು ಮಾಡುವುದು. ಅದನ್ನು ವಿಂಗಡಿಸಿ ರಿಜಿಸ್ಟರ್ ಮಾಡಬೇಕಾದರೆ ಒಂದು ಸ್ಕೆಚ್ ಮಾಡಬೇಕು. ಈ ರೀತಿಯ ಕಾನೂನು ರೈತರನ್ನು ಮಟ್ಟ ಹಾಕುವ ಕಾನೂನು. ಇವೆಲ್ಲ ಬಡರೈತರನ್ನು ಉದ್ಧಾರ ಮಾಡುವ ಕಾನೂನಲ್ಲ. ಇದಕ್ಕೆ ಮುಕ್ತಿ ಕಾಣಿಸದೇ ಹೋದರೆ ರೈತರು ಹಿಡಿ ಶಾಪ ಹಾಕುತ್ತಾರೆ. ನಿಮಗೆ ಗೊತ್ತಿಲ್ಲ. ರೈತರು ಹೇಗೆ ಶಾಪ ಹಾಕುತ್ತಾರೆ ಎಂದು. ನೀವು ತಾಲ್ಲೂಕು ಆಫೀಸ್ ಮುಂದೆ ಹೋಗಿ ಯಾವ ರೀತಿ ಶಾಪ ಹಾಕುತ್ತಾರೆಂದು ಅವರ ಮಾತುಗಳನ್ನು ಕೇಳಬೇಕು. ಇದು ಇರುವಂತಹ ಸಮಸ್ಯೆ. ನೀವೆಲ್ಲ ನೋಡಿದ್ದೀರಿ, ಗ್ರಾಮೀಣ ಪ್ರದೇಶದಲ್ಲಿ ರೈತರ ಬವಣೆ ಎಷ್ಟಿದೆ ? ಈಗ ಬಹಳ ಅರ್ಜೆಂಟ್ ಆಗಿ ಒಂದು ಜಮೀನು ಮಾರಿ ಯಾವುದೋ ಒಂದು ವ್ಯವಹಾರಕ್ಕೆ ಕೈ ಹಾಕಬೇಕಾದರೆ ಮೂರು ತಿಂಗಳಾದರೂ ರಿಜಿಸ್ಟರ್ ಆಗುವುದಿಲ್ಲ. ಅಲ್ಲಿ ಒಂದು ವರ್ಷವಾದರೂ ಆಗುವುದಿಲ್ಲ. ಎಷ್ಟೋ ಬಾರಿ ಒಂದು ವರ್ಷಗಟ್ಟಲೆ ಅಗಿದೆ. ಅವನು ಮತ್ತೆ ಬಡ್ಡಿ ಸಾಲಕ್ಕೆ ಹೋಗಬೇಕು. ಅವನಿಗೆ ಅದನ್ನು ತೀರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆ sketch copy ಇಲ್ಲದೆ register ಆಗುವುದಿಲ್ಲ. ಇದೆಲ್ಲ ಸಾಮಾನ್ಯವಾದ ಸಮಸ್ಯೆಗಳು. ಇದನ್ನು ಸರ್ಕಾರ ಚಿಂತನೆ ಮಾಡದೇ, ನಾವು ರೈತರ ಪರವಾದ ಸರ್ಕಾರವೆಂದು ಹೇಳುತ್ತೀರಿ. ಸಾಮಾನ್ಯ ಜನರ ಭಾವನೆಗಳನ್ನು ಅರ್ಥಮಾಡಿಕೊಂಡು ಸರ್ಕಾರವನ್ನು ನಡೆಸಬೇಕು. ಸರ್ಕಾರ ಸಾಮಾನ್ಯ ಜನರ ಭಾವನೆ, ರೈತರ ಸಂಕಷ್ಟವನ್ನು ನಿವಾರಣೆ ಮಾಡದೇ ಯಾವ್ಯಾವುದಕ್ಕೋ ಏನೋನೋ ಮಾಡುತ್ತೇವೆಂದರೆ, ಅದು ನಿಜವಾಗಿಯೂ ಅಂಥ ಪರಿಣಾಮ ಬೀರಲಾರದೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇನ್ನು ಆಹಾರ ಮತ್ತು ನಾಗರಿಕ ಸರಬರಾಜು ವಿಷಯವಾಗಿ ಹೇಳುವುದಾದರೆ, ನಾನು ಮೊನ್ನೆ ದಿವಸ ಒಂದು question ಹಾಕಿದ್ದೆ. ಈ question ಗೆ Madam ರವರು ಉತ್ತರವನ್ನು ಕೊಡುವುದಕ್ಕೆ ಆಗಲಿಲ್ಲ. ಈಗ food ಬಗ್ಗೆ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಸಹಾಯಧನದ ಬಗ್ಗೆ

ನೀವು ಏನಾದರೂ fraud ಅನ್ನು ನಿಲ್ಲಿಸಬೇಕೆಂದರೆ, duplicate card ಗಳು ಅಕ್ರಮ ಕಾರ್ಡ್‌ಗಳನ್ನು ಏನಾದರೂ ನಿಲ್ಲಿಸಬೇಕೆಂದರೆ, ಫಲಾನುಭವಿಗಳಿಗೆ ಸಹಾಯ ಧನವನ್ನು ನೇರವಾಗಿ ಕೊಡತಕ್ಕಂಥ ಕಾನೂನನ್ನು ತರಬೇಕು. ಇದನ್ನು ಇನ್ನ್ಯಾವುದರಿಂದಲೂ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅವರಿಗೆ ಸಹಾಯ ಧನವನ್ನು ಕೊಡಿ. ಅಕ್ಕಿಯನ್ನು ಜನತಾ ಬಜಾರ್‌ನಲ್ಲಿಡಿ. ಅವರು ಬಂದು ಅಕ್ಕಿಯನ್ನು ಖರೀದಿ ಮಾಡಿಕೊಂಡು ಹೋಗುತ್ತಾರೆ. ಆ ರೀತಿಯಾಗಿಲ್ಲವೆಂದರೆ ಇದು ನಿಲ್ಲುವುದಿಲ್ಲ. ಇವತ್ತು ಸೀಮೆಎಣ್ಣೆ ಒಂದು ಲೀಟರ್‌ಗೆ 35 ರೂ.ಗಳಿದೆ. ಇದನ್ನು ಅಂಗಡಿ ಮಾಲೀಕರು ರೈತರಿಗೆ ಕೊಡುತ್ತಿದ್ದಾರೆಯೇ ? ಇದು ಎಲ್ಲಾ ಕಳ್ಳ ಮಾರಾಟವಾಗುತ್ತಿದೆ. ಯಾರಿಗೆ ಕೊಡುತ್ತಿದ್ದಾರೆ ? ಇವತ್ತು ಗ್ರಾಮೀಣ ಪ್ರದೇಶದಲ್ಲಿ ಒಬ್ಬ ರೈತರಿಗೂ ಸೀಮೆಎಣ್ಣೆ ಸಿಗುತ್ತಿಲ್ಲ. ಅದಕ್ಕೆ ದಯಮಾಡಿ ಕೇಂದ್ರ ಸರ್ಕಾರದವರು ಸಹಾಯ ಧನವನ್ನು ಕೊಡುವಂಥದ್ದನ್ನು ಬಜೆಟ್‌ನಲ್ಲಿ announce ಮಾಡಿದ್ದಾರೆ. ರಾಜ್ಯ ಸರ್ಕಾರದವರು ನಿಮ್ಮ ಪಾಲಿನ ಹಣವನ್ನು ಕೊಡುವಂಥದ್ದು ಏನು ಇದೆ. ಅದನ್ನು ನೀವು ಕೊಡುವಂಥದ್ದನ್ನು ಮಾಡಿದರೆ, ನಿಜವಾಗಲೂ ಇದನ್ನು control ಮಾಡಬಹುದು. ನೀವು ಯಾವ meter reader ಅನ್ನು ಕೇಳಿದರೂ ಕೊಡುವುದಿಲ್ಲ. ಯಾವನಲ್ಲಿ ರಿಪೇರಿ ಮಾಡಿದರೂ ಆಗುವುದಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ :– ಮಾನ್ಯ ಉಪಾಧ್ಯಕ್ಷರೆ, ಬಜೆಟ್‌ನಲ್ಲಿ 40 ಲಕ್ಷ ಕಾರ್ಡ್‌ಗಳನ್ನು ತೆಗೆದಿದ್ದೇವೆಂದು ಹೇಳಿದ್ದಾರೆ. ಆದು ಎಂಥವರ ಕಾರ್ಡ್‌ಗಳನ್ನು ತೆಗೆದಿದ್ದಾರೆಂದರೆ ಯಾರು ಅರ್ಹರಿದ್ದಾರೆ ಅಂಥವರದ್ದು. ಅದು ಏಕೆಂದರೆ ಯಾರು ಮನೆ ನಂಬರ್ ಕೊಟ್ಟಿಲ್ಲ. ಕೆ.ಇ.ಬಿ. ನಂಬರ್‌ಗಳಿಲ್ಲ. ಅಂಥವರ ಎಲ್ಲಾ ಕಾರ್ಡ್‌ಗಳನ್ನು ತೆಗೆದಿದ್ದಾರೆ. ನೀವು ನಿಜವಾಗಿ ಬಿ.ಪಿ.ಎಲ್. ಕಾರ್ಡ್‌ಗಳನ್ನು ಅತ್ಯಂತ ಕಡು ಬಡವರಿಗೆ ಕೊಡಬೇಕಾಗಿರುವಂಥದ್ದು. ಅಂಥವರ ಎಲ್ಲಾ ಕಾರ್ಡ್‌ಗಳನ್ನು ಕಟ್ ಮಾಡಿದ್ದಾರೆ. ಕಾರ್ಡ್‌ದಾರರು ಹೋದರೆ ನಿಮ್ಮ ಮನೆ ನಂಬರ್ ಇಲ್ಲ. ಅದಕ್ಕೆ ನಿಮ್ಮ ಕಾರ್ಡ್ ಕಟ್ ಮಾಡಿದ್ದೇವೆಂದು ಹೇಳುತ್ತಾರೆ. ನಿಮ್ಮ ಮನೆಯ electric RR number ತಂದು ಕೊಡಿ. ಇಲ್ಲದಿದ್ದರೆ ಕಾರ್ಡ್ ಇಲ್ಲ ಅಂಥವರ ಕಾರ್ಡ್‌ಗಳನ್ನು ತೆಗೆದು ಹಾಕಿ, ಉಳಿದವರೆಗೆಲ್ಲಾ ಕಾರ್ಡ್‌ಗಳನ್ನು ಹಂಚುವುದಕ್ಕೆ ಹೋಗುತ್ತಾರೆ. ಇದನ್ನು ನೀವು ಮೊದಲು ಸರಿಪಡಿಸಬೇಕು. ನೀವು ಬಿಪಿಎಲ್ ಕಾರ್ಡ್‌ಗಳನ್ನು ಕೊಡುವ ಉದ್ದೇಶವೇನು ? ಅದು ಸಮಾಜದಲ್ಲಿ ಕಟ್ಟ ಕಡೆಯ ದಟ್ಟ ದರಿದ್ರರಿಗೆ ಈ ಬಿಪಿಎಲ್ ಕಾರ್ಡ್‌ಗಳನ್ನು ಕೊಡಬೇಕೆಂದು ಇರುವುದು. ಅವರನ್ನೇ ತೆಗೆದು

ಹಾಕಿ. ನೀವು 40,000, 50,000 ಅನರ್ಹರನ್ನು ತೆಗೆದುಹಾಕಿದ್ದೇವೆಂದು ಹೇಳುತ್ತೀರಿ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಯವರ ಬಳಿಗೆ ಹೋಗಿ ಎಂಥವರ ಕಾರ್ಡ್‌ಗಳು ಕಟ್ ಆಗಿದೆಯೆಂದು ಬಗ್ಗೆ ನೋಡಿ ಒಂದು booklet ಮಾಡಿ ಕೊಟ್ಟೆ. ಆಗ ಅವರು ಕಮೀಷನರ್‌ರವರಿಗೆ ಫೋನ್ ಮಾಡಿ ಹೇಳಿ ಕಳುಹಿಸಿದರು. ಅದಕ್ಕೆ ಕಮೀಷನರ್‌ರವರು ತಪ್ಪು ಆಗಿರುವುದನ್ನು ಸರಿ ಮಾಡುತ್ತೇವೆಂದು ಹೇಳಿದರು. ಅದನ್ನು ಸೆಕ್ರೆಟರಿಯವರಿಗೆ ಹೇಳಿದ್ದಾರೆ. ಅವರಿಗೆ ಅದನ್ನು ಸರಿ ಮಾಡುವುದಕ್ಕೆ ಆಗಲಿಲ್ಲ. ಅವರು ಪಂಚತಂತ್ರ ವ್ಯವಸ್ಥೆ ಎಂದು ಏನೋ ಚಾಲು ಮಾಡಿದ್ದಾರೆ. ಅವರು ಮಾಡಿಲ್ಲ. ಈ ರೀತಿ ಆಗಿ ಇದು ಎಷ್ಟು ಗೊಂದಲವಾಗಿದೆಯೆಂದರೆ, ಬಿಪಿಎಲ್ ಕಾರ್ಡ್‌ಗಳನ್ನು ಬೇರೆ ಎಲ್ಲಾ ಕಡೆಗಳಲ್ಲೂ ಫಲಾನುಭವಿಗಳನ್ನು ಕಾರ್ಡ್ ಕೊಡಬೇಕೆಂದು ಕೇಳುತ್ತಾರೆ. ವಾಜಪೇಯಿ ಆರೋಗ್ಯಶ್ರೀ ಯೋಜನೆಗೆ ಹೋದರೆ ಬಿ.ಪಿ.ಎಲ್. ಕಾರ್ಡ್ ಬೇಕು, ಸಿ.ಎಂ. ಫಂಡ್ ಕೇಳವುದಕ್ಕೆ ಹೋದರೆ ಬೇಕು, ಭಾಗ್ಯಲಕ್ಷ್ಮೀ ಬಾಂಡ್ ಕೇಳುವುದಕ್ಕೆ ಹೋದರೆ ಅದಕ್ಕೂ ಈ ಕಾರ್ಡ್ ಬೇಕು. ಇಷ್ಟೆಲ್ಲಾ ಇಟ್ಟುಕೊಂಡು ಈ ಬಿ.ಪಿ.ಎಲ್. ಕಾರ್ಡ್ ಸರಿ ಹೋಗದಿದ್ದರೆ ಹೇಗೆ ? ಅದು ಯಾವ್ಯಾವ ಅಂಗಡಿಗಳಲ್ಲಿ ಗಲಾಟೆಯಾಗಿದೆ. ಆ ಅಂಗಡಿಗಳ ಬಗ್ಗೆ complaint ಕೊಟ್ಟರೆಂದು ಅದನ್ನು ನಿಲ್ಲಿಸಿದ್ದಾರೆ. ಈ ಬಿ.ಪಿ.ಎಲ್. ಕಾರ್ಡ್ ಎಲ್ಲಕ್ಕೂ ಬೇಕು. ಹಾಗಾಗಿ ಇದನ್ನು ಸರಿಪಡಿಸಬೇಕು.

ಉಪಾಧ್ಯಕ್ಷರು :– ಮಾನ್ಯ ಶಿವಲಿಂಗೇಗೌಡರೆ, ತಾವು conclude ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಮಾನ್ಯ ಉಪಾಧ್ಯಕ್ಷರೆ, ಅದೇ ರೀತಿ ಕಾರ್ಡ್‌ಗಳ ವಿತರಣೆಯಲ್ಲಿ ಆಗಿರುವಂಥ ಅನ್ಯಾಯ ಒಂದು ಕಡೆ ಇದೆ. ಅದನ್ನು ಸರಿಪಡಿಸಬೇಕೆಂದರೆ ಅದಕ್ಕೆ ಒಂದು ಮಾನದಂಡ, ಮತ್ತೆ ಈ ಬಿ.ಪಿ.ಎಲ್. ಕಾರ್ಡ್‌ಗಳಲ್ಲಿ ಎರಡು ವರ್ಗಗಳಿವೆ. ಮೊದಲನೆಯದಾಗಿ, ಕೇಂದ್ರ ಸರ್ಕಾರದದಿಂದ 33 ಲಕ್ಷ ಕಾರ್ಡ್‌ಗಳಿಗೆ 2 ರೂ. 71 ಪೈಸೆಗೆ ಅಕ್ಕಿಯನ್ನು ಕೊಡುತ್ತಾರೆ. ಆದೇ ರೀತಿ ರಾಜ್ಯ ಸರ್ಕಾರ ಅವರ ಇಚ್ಛಾನುಸಾರ ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಅದರ ಬಗ್ಗೆ ನಮ್ಮದು ಏನು ತಕರಾರು ಇಲ್ಲ. ಅವರ ಶಕ್ತಿ. ಬಂಡವಾಳ ಎಷ್ಟು ಇದೆಯೋ ಅಷ್ಟನ್ನು ಕೊಡಲಿ. ಆದರೆ 33 ಲಕ್ಷ ಜನರಿಗೆ 33% ಕಾರ್ಡ್‌ಗಳನ್ನು ಕೊಡಬೇಕೆಂದರೆ ಕೇಂದ್ರ ಸರ್ಕಾರದ ನಿಬಂಧನೆ ಇದೆ. ಕಾನೂನು ಇದೆ. ಆಹಾರ ಇಲಾಖೆಯ ಕಾನೂನಿನಲ್ಲಿ ಒಬ್ಬ ವ್ಯಕ್ತಿಗೆ 35 ಕೆ.ಜಿ. ಅಕ್ಕಿ ಕೊಡಬೇಕೆಂದು ಇದೆ. ಆದರೆ ರಾಜ್ಯ ಸರ್ಕಾರದಿಂದ 4 ಕೆಜಿ unit

system ನಲ್ಲಿ ಕೊಡುತ್ತಿದ್ದೀರಲ್ಲಾ ಇದನ್ನು ಯಾವ ಕಾರಣದಿಂದ ಕೊಡುತ್ತಿದ್ದೀರಿ ? ಇದಕ್ಕೆ ಕೇಂದ್ರ ಸರ್ಕಾರದ ಅನುಮೋದನೆಯನ್ನು ತೆಗೆದುಕೊಂಡಿದ್ದೀರಾ ? ಇದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ಕೊಟ್ಟಿದೆಯೇ ? ಈ ವಿಷಯವಾಗಿ ಯಾರಾದರೂ ಒಬ್ಬ ವ್ಯಕ್ತಿ ಕೋರ್ಟ್‌ಗೆ ಹಾಕಿದರೆ ಏನು ಮಾಡುತ್ತೀರಿ ? ನಿಮ್ಮ ಹತ್ತಿರ 90 ಲಕ್ಷ ಕಾರ್ಡ್‌ಗಳು ಇರಬಹುದು. ಅದರಲ್ಲಿ 33 ಲಕ್ಷ ಕಾರ್ಡ್‌ಗಳು ಯಾರು ಫಲಾನುಭವಿಗಳು ಇದ್ದಾರೆ. ಅವರಿಗೆ ಕೊಡಿ. ಇವರು Central Below Poverty Line ನಲ್ಲಿರುವಂಥ ಫಲಾನುಭವಿಗಳು. ಇವರೆಲ್ಲಾ ರಾಜ್ಯ ಸರ್ಕಾರದದ ಫಲಾನುಭವಿಗಳೆಂದು ಮಾಡಿ, ನೀವು ಆ 33 ಲಕ್ಷ ಜನರಿಗೆ ಕೇಂದ್ರ ಸರ್ಕಾರದ ಕಾನೂನಿನ ಅಡಿ ಏನು ನಿರ್ಣಯವಾಗಿದೆ. ಅದರ ಪ್ರಕಾರ ನೀವು 35 ಕೆಜಿ ಅಕ್ಕಿಯನ್ನು ಕೊಡಿ. ನೀವು ಅದನ್ನು unit ಲೆಕ್ಕ ಮಾಡಿಕೊಂಡು 4 ಕೆ.ಜಿ. ಕೊಡುತ್ತಿದ್ದೀರಲ್ಲಾ ಇದು ಸರಿಯೇ ? ಇದನ್ನು ಹೇಳಿ ಎಂದರೆ, ಇಲ್ಲ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆಂದು ಹೇಳುತ್ತೀರಿ. ಇದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಸಿಕ್ಕಿದೆಯೇ ? ನೀವು ಅವರ ಹಕ್ಕನ್ನು ಕಿತ್ತುಕೊಂಡು ಹಾಗೆ ಅಲ್ಲವೆ ? ನಾವು ರಾಜಕಾರಣ ಮಾಡೋಣ. ಆದರೆ ಇದರಲ್ಲಿ ಬೇಡ ಕರ್ನಾಟಕ ರಾಜ್ಯದಲ್ಲಿರುವ ರೈತರಿಗೆಲ್ಲಾ 4 ಕೆ.ಜಿ. ಅಕ್ಕಿಯನ್ನು 3 ರೂ.ಗಳಂತೆ ಕೊಡಿ. ಅದಕ್ಕೆ ನಮ್ಮದು ಏನು ತಕರಾರು ಇಲ್ಲ. ಆದರೆ ಈ ರೈತರ ಬಾಳಿನಲ್ಲಿ ಏಕೆ ಈ ರೀತಿ ಆಟ ವಾಡುತ್ತಿದ್ದೀರಿ ? ಇವರ ಬಾಳಲ್ಲಿ ಏಕೆ ಚೆಲ್ಲಾಟವಾಡುತ್ತಿದ್ದೀರಿ ? ಇವರಿಗೆ 35 ಕೆಜಿ ಅಕ್ಕಿಯನ್ನು ಕೊಡಿ. ಇದನ್ನು ದಯವಿಟ್ಟು ಸರ್ಕಾರ ತಿದ್ದಿಕೊಳ್ಳಬೇಕು. ಇದು ಸರಿಯಲ್ಲ. ನಾವು ಬಹಳ ಸಾರಿ ಹೇಳಿದ್ದೇವೆ, ಈ ಬಗ್ಗೆ ನಾವು question ಹಾಕಿದ್ದೆವು. ಇದಕ್ಕೆ ಉತ್ತರವನ್ನು ಕೊಡುವುದಕ್ಕೆ ಆಗಲಿಲ್ಲ. ಇದನ್ನು ಮತ್ತೆ ಅರ್ಧ ಗಂಟೆಗೆ ಚರ್ಚೆಗೆ ಕೊಡುತ್ತೇವೆಂದು ಹೇಳಿದರು. ಮತ್ತೆ ಅದೂ ಆಗಲಿಲ್ಲ. ದಯವಿಟ್ಟು ಆ 33 ಲಕ್ಷ ಜನರಿಗೆ 35 ಕೆಜಿ ಅಕ್ಕಿಯನ್ನು ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಇನ್ನೂ ಜಲಸಂಪನ್ಮೂಲ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ನಮ್ಮ ಕ್ಷೇತ್ರಕ್ಕೆ ಯಾವುದು ನದಿ ಇಲ್ಲ. ನಾವು ಬಹಳ ದೂರದಿಂದ ನೀರನ್ನು ತರಬೇಕು. ಅದು ನಮಗೆ ಬರಲಿಲ್ಲ, ನಾವು ಆ ನೀರನ್ನು ಕುಡಿಯಲಿಲ್ಲ. ಆದರೆ ಹೇಮಾವತಿ ನದಿ ಮೂಲದಿಂದ ಸುಪ್ರೀಂ ಕೋರ್ಟ್‌ನಿಂದ ಇತ್ತೀಚಿನ ನಿರ್ದೇಶನದ ಪ್ರಕಾರ ಇವತ್ತು ಕುಡಿಯುವ ನೀರಿಗೋಸ್ಕರವಾಗಿ ಬೇಸಿನ್‌ನಿಂದ ಬೇಸಿನ್‌ಗೆ ನೀರನ್ನು

ಕೊಡಬೇಕೆಂದು ಏನು ನಿರ್ಣಯವಾಗಿದೆ. ಅದರ ಪ್ರಕಾರ ನೀರನ್ನು ಕೊಡುವಂಥ ಕೆಲಸವನ್ನು ಮಾಡಿ. ಅದನ್ನು ಯಾರು ? ಕೇಳುವುದಕ್ಕೆ ಬರುವುದಿಲ್ಲ. ದಯವಿಟ್ಟು ಕೆರೆಗಳನ್ನು ತುಂಬಿಸುವಂಥದ್ದು, 50–100 storage tank ಎಂದು ಮಾಡಿ, ಕೆರೆ–ಕೆರೆಗಳಿಗೆ ನೀರನ್ನು ತುಂಬಿಸುವಂಥ ಕಾರ್ಯಕ್ರಮವನ್ನು ನಮ್ಮ ಬಯಲುಸೀಮೆ ಪ್ರದೇಶಕ್ಕೆ ಮಾಡಿಕೊಟ್ಟರೆ ನಿಜವಾಗಿಯೂ ಒಳ್ಳೆಯದಾಗುತ್ತದೆ. ಆಮೇಲೆ ಎತ್ತಿನಹೊಳೆ ವಿಷಯದಲ್ಲಿ ಇದು ಮಂಗಳೂರು ಸೈಡ್‌ನವರನ್ನು ಕೇಳಿದರೆ, ಅದು ಆಗುವುದಿಲ್ಲ ಬಿಡಿ, ಎಲ್ಲಾ ರಾಜಕೀಯ ನಾಟಕವೆಂದು ಹೇಳುತ್ತಾರೆ. ಇನ್ನಷ್ಟು ಜನರು ತುಮಕೂರಿನಲ್ಲಿ ಆಯಿತೆಂದು ಹೇಳುತ್ತಾರೆ. ಅದು ಏನೇ ಇರಲಿ, ಅದು ಒಳ್ಳೆಯ ಕಾರ್ಯಕ್ರಮವಾಗಿದೆ. ದಯಮಾಡಿ ಅದರ ಬಗ್ಗೆ ಯಾರು ಏನೇ ಹೇಳಲಿ, ಈ ಎತ್ತಿನಹೊಳೆ ಕಾರ್ಯಕ್ರಮ ಆಗಬೇಕು. ಇದು ಎತ್ತಿನಹೊಳೆಯಿಂದ ತುಮಕೂರು, ತಿಪಟೂರಿಗೆ ಬರಬೇಕಾದರೆ ನಮ್ಮ ಅರಸೀಕೆರೆಯಿಂದಲೇ ಬರಬೇಕು, ನಮ್ಮ ಅರಸೀಕೆರೆಗೂ ಪರಿಗಣಿಸಬೇಕು. ಚನ್ನರಾಯಪಟ್ಟಣಕ್ಕೆ ಹೇಮಾವತಿ ನದಿ ಹೋಗಿದೆ. ಅವರು ಆ ಕಡೆ ಈ ಕಡೆಗೆ ಲಿಫ್ಟ್ ಮಾಡಿಕೊಳ್ಳಬಹುದು. ನಮ್ಮಲ್ಲಿ ನದಿಯನ್ನೇ ನೋಡಿಲ್ಲ.

ಶ್ರೀ ಸಿ.ಎಸ್. ಪುಟ್ಟೇಗೌಡ :– ಮಾನ್ಯ ಉಪಾಧ್ಯಕ್ಷರೆ, ಅದು ತಪ್ಪು, ಚನ್ನರಾಯಪಟ್ಟಣದಲ್ಲಿ ಕೆನಾಲ್ ಹೋಗಿ, ಟನೆಲ್ ಹೋಗಿ ಆ ಭಾಗದ ಜನ ಅವರ ಹೃದಯದ ನಾಳದಿಂದ ರಕ್ತವನ್ನು ಇನ್ನೊಬ್ಬರು ಬದುಕುವುದಕ್ಕೆ ಕೊಡುವ ಹಾಗೆ ತುಮಕೂರು, ಮಂಡ್ಯಕ್ಕೆ ನೀರನ್ನು ಕೊಟ್ಟಿದ್ದಾರೆ. ಅದರೆ ಜನರು ಹೇಮಾವತಿ ನದಿ ನೀರು ಚನ್ನರಾಯ ಪಟ್ಟಣದಲ್ಲಿ ಬಳಕೆಯಾಗುತ್ತದೆಂದು ತಿಳಿದುಕೊಂಡಿದ್ದಾರೆ. ದಯಮಾಡಿ ಆ ರೀತಿ ಆಗಬಾರದು. ಆ ಭಾಗದ ಜನರಿಗೆ ಆಗಿರುವ ಶಿಕ್ಷೆಯನ್ನು ಪರಿಹಾರ ಮಾಡುವುದಕ್ಕೆ ಟನೆಲ್‌ನಿಂದ ಅವರು ತೊಂದರೆಗೆ ಏನು ಸಿಕ್ಕಿಹಾಕಿಕೊಂಡಿದ್ದಾರೆ. ಅದಕ್ಕೆ ತಾವು ಎತ್ತಿನಹೊಳೆಯ ನೀರನ್ನು ಕೊಡುತ್ತಿರೋ, ಹೇಮಾವತಿ ನೀರನ್ನು ಲಿಫ್ಟ್ ಮಾಡುತ್ತಿರೋ, ಯಾವ ಹೊಲಕ್ಕಾದರೂ ನೀರು ಕೊಡುತ್ತೇವೆಂಬ ಭರವಸೆಯನ್ನು ಜನರು ಕೇಳುವುದಿಲ್ಲ. ಅದು ಆಗುವುದಿಲ್ಲ, ಕಬ್ಬನ್ನು ಬೆಳೆಯುವುದಕ್ಕೆ ಆಗುವುದಿಲ್ಲ.. ಭತ್ತವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಕನಿಷ್ಠ ಇಂಥ ತೀವ್ರ ಕುಡಿಯುವ ನೀರಿನ ಅಭಾವ ಕಾಲದಲ್ಲಿ ಕುಡಿಯುವ ನೀರಿಗಾದರೂ ಅಲ್ಲಲ್ಲಿ ಕೆರೆಗಳನ್ನು ತುಂಬಿಸುವಂಥ ಕೆಲಸವನ್ನು ಮಾಡಿದರೆ, ನಿಮ್ಮ ಸರ್ಕಾರದಲ್ಲಿ ಏನು ಮಾಡದಿದ್ದರೂ ಕೆರೆಗಳನ್ನು ತುಂಬಿಸುವಂಥದ್ದು ಮತ್ತು ವಿದ್ಯುಚ್ಛಕ್ತಿಯನ್ನು ನಿರಂತರವಾಗಿ ಕೊಟ್ಟು ಬಿಟ್ಟರೆ ನಿಮ್ಮನ್ನು ಯಾರು ಕೊಡುತ್ತಾರೋ ಆ ಪುಣ್ಯಾತ್ಮನನ್ನು ಮತ್ತೊಮ್ಮೆ ಸರ್ಕಾರ

ನಡೆಸಲಿ ಎಂಬ ಮಾತನ್ನು ಹೇಳುತ್ತಾರೆ. ದಯಮಾಡಿ ಚನ್ನರಾಯಪಟ್ಟಣದಲ್ಲಿ ಬಹಳ ಸಂತೃಪ್ತವಾಗಿದೆಯೆಂಬ ಭಾವನೆ ವ್ಯಕ್ತವಾಗಬಾರದು. ಅಲ್ಲಿ ನೀರಿನ ಅಭಾವವಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ನದಿ ನಿಮ್ಮಲ್ಲಿ ಹರಿದು ಹೋಗುತ್ತದೆ ಅಷ್ಟೇ. ಆದರೆ ನಿಮಗೆ ನೀರು ಸಿಗಲಿಲ್ಲ. ಇವರು ಅಲ್ಲಿ ಟೆನಲ್ ಕೊಟ್ಟಿದ್ದು, ತುಮಕೂರಿನವರು ಆದರ ಅನುಕೂಲ ಪಡೆಯುತ್ತಿದ್ದಾರೆ. ಹೇಮಾವತಿ ಡ್ಯಾಂ ನಮ್ಮ ಜಿಲ್ಲೆಯಲ್ಲಿದ್ದರೂ ಅದರ ಅನುಕೂಲ ನಮ್ಮ ಜಿಲ್ಲೆಗೆ ಕಡಿಮೆ. ಆದ್ದರಿಂದ ದಯವಿಟ್ಟು ಕೆರೆಗಳಿಗೆ ನೀರು ತುಂಬಿಸುವಂಥ ಕೆಲಸವನ್ನು ಮಾಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಎತ್ತಿನಹೊಳೆ ಯೋಜನೆಯಲ್ಲಿ ದಯಮಾಡಿ ಸರ್ಕಾರ ನಮ್ಮ ತಾಲ್ಲೂಕನ್ನು ಸೇರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ಕೊನೆಯದಾಗಿ, ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ನಿಜವಾಗಿಯೂ ಈ ಇಲಾಖೆ ಶಾಸಕರ ಮತ್ತು ಗ್ರಾಮೀಣ ಪ್ರದೇಶದ ಜನರ ಕುಂದುಕೊರತೆಗಳನ್ನು ವಿಚಾರಿಸತಕ್ಕಂಥ ಒಂದು ಇಲಾಖೆ. ಅದರೆ ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಹಣದ ಕೊರತೆಯಿಂದ ಕೆಲಸಗಳು ಆಗುತ್ತಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಎಷ್ಟು ಹಣ ತುಂಬಿದರೂ ಅಲ್ಲಿ ಕೆಲಸವಾಗುತ್ತದೆ. ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೆಲಸ ಮಾಡಲು ಜನ ಸಿದ್ಧರಿದ್ದಾರೆ. M.I.S. feed ಮಾಡಿ. ಮೈನಸ್ 10–12 ಕೋಟಿ ರೂಪಾಯಿ ಖೋತಾ ಹೊಡೆಯುತ್ತಿದೆ. ಆದರೆ ಇವತ್ತು ಅದರಲ್ಲಿ ದುಡ್ಡಿಲ್ಲ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಎರಡು ತಿಂಗಳಾಯಿತು. ಎರಡು ತಿಂಗಳಿಂದ 300 ಕೋಟಿ ರೂಪಾಯಿ ಬೇಕು ಎನ್ನುವ ಬೇಡಿಕೆಯನ್ನು ಸಲ್ಲಿಸಿದ್ದಾರೆ. M.I.S. feed ಮಾಡಿ ಇಷ್ಟು ಕೋಟಿ ರೂಪಾಯಿ ಖೋತಾ ಹೊಡೆಯುತ್ತಿದೆ ಎಂದು ತೋರಿಸುತ್ತಿದ್ದಾರೆ. ಇವತ್ತು ಹಾಸನ ಜಿಲ್ಲೆಯಲ್ಲೂ 12–13 ಕೋಟಿ ರೂಪಾಯಿ ಖೋತಾ ಹೊಡೆಯುತ್ತಿದೆ. ದಯವಿಟ್ಟು ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಮತ್ತು ಸರ್ಕಾರ ಗಮನ ಹರಿಸಬೇಕು. ಏಕೆಂದರೆ ಇದು Employment Guarantee Scheme. ನಾವು ಕೆಲಸ ಮಾಡಲು ರೆಡಿ ಇದ್ದೇವೆ. ಆದರೆ ಸರ್ಕಾರ ಕೆಲಸ ಕೊಡುತ್ತಿಲ್ಲ. ಹಣ ಕೊಡಲಿಲ್ಲವೆಂದು ಯಾರಾದರೂ ಕೋರ್ಟಿಗೆ ಹೋದರೆ ಸರ್ಕಾರದ ಗೌರವ ಹೋಗುತ್ತಿದೆ. ಅದಕ್ಕೋಸ್ಕರ ಉದ್ಯೋಗ ಖಾತರಿ ಯೋಜನೆ ಬಗ್ಗೆ ದಯವಿಟ್ಟು ಹೆಚ್ಚಿನ ಗಮನವನ್ನು ಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊದಲು ಈ ಯೋಜನೆಯಲ್ಲಿ 125

ರೂಪಾಯಿಗಳನ್ನು ಕೊಡುತ್ತಿದ್ದರು. ಈಗ 155 ರೂಪಾಯಿ ಮಾಡಿದ್ದಾರೆ. 155 ರೂಪಾಯಿ ಕೊಟ್ಟರೆ ಯಾರೂ ಬರುವುದಿಲ್ಲ. 250 ರೂಪಾಯಿ ಕೊಟ್ಟರೂ ಬರವುದಿಲ್ಲ. ಅಸೆಂಬ್ಲಿಯಲ್ಲಿ ಮಾತನಾಡುವುದಕ್ಕೆ ಮಾತ್ರ ಕಾನೂನು ಇದೆ. ಇವತ್ತು ದಿನಕ್ಕೆ 250 ರೂಪಾಯಿ ಕೊಟ್ಟರೂ ಜೀವನ ನಡೆಸುವುದು ಕಷ್ಟವಿದೆ. ಹೀಗಿರುವಾಗ ಅವರು ಹೇಗೆ ಬರುತ್ತಾರೆ ? 155 ರೂಪಾಯಿಗಳಿಗೆ ಯಾರೂ ಕೆಲಸಕ್ಕೆ ಬರುವುದಿಲ್ಲ. ಅದನ್ನು 250 ರೂಪಾಯಿ ಮಾಡಿ ಎಂದು ಜನಪ್ರತಿನಿಧಿಗಳಾದ ನಾವು ದೆಹಲಿ ದೊರೆಗಳಿಗೆ ಹೇಳಬೇಕು. ದಯವಿಟ್ಟು ಉದ್ಯೋಗ ಖಾತರಿ ಯೋಜನೆಯಲ್ಲಿ ಹೆಚ್ಚಿನ ಹಣವನ್ನು ಸರ್ಕಾರಕ್ಕೆ ತರುವಂಥ ವ್ಯವಸ್ಥೆಯಾಗಬೇಕು. 'ಸುವರ್ಣ ಗ್ರಾಮ' ಯೋಜನೆಯಲ್ಲಿ ನಾವು ಬಂದ ತಕ್ಷಣ ಸ್ವಲ್ಪ ಹಣವನ್ನು ಕೊಟ್ಟಿರಿ. ಇದರಲ್ಲಿ ಒಂದೊಂದು ಕ್ಷೇತ್ರಕ್ಕೆ ಐದು ಕೋಟಿಯನ್ನೋ, ಏಳು ಕೋಟಿ ರೂಪಾಯಿಗಳನ್ನು ಕೊಟ್ಟಿರಿ. ಅದನ್ನು ಬಿಟ್ಟರೆ ಮತ್ತೆ ಅದು ಬರುತ್ತದೆ ಎಂದು ನಾವು ಜನಗಳಿಗೆ ಹೇಳುತ್ತಲೇ ಇದ್ದೇವೆ. ಇವತ್ತಿನವರೆಗೂ ನಮಗೆ ಸುವರ್ಣ ಗ್ರಾಮ ಯೋಜನೆಯಲ್ಲಿ ಹಣವನ್ನು ಕೊಟ್ಟಿಲ್ಲ. ಈ ಸಾರಿ ತಾವು ಅದಕ್ಕೆ ಪ್ರತ್ಯೇಕವಾಗಿ 400 ಕೋಟಿ ಕೊಡುತ್ತೇವೆ ಎಂದು ಅನೌನ್ಸ್ ಮಾಡಿದ್ದೀರಿ. ದಯವಿಟ್ಟು ಅದನ್ನು ಜರೂರಾಗಿ ಮಾಡಬೇಕು ಎನ್ನುವ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೂ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ, ಸಮಾಜ ಕಲ್ಯಾಣ ಇಲಾಖೆಯಿಂದ ಶಾಸಕರಿಗೆ ಸ್ವಲ್ಪ ಗೌರವ ಬಂದಿದೆ. ಇದನ್ನು ನಾನು ಹೇಳಲೇಬೇಕಾಗುತ್ತದೆ. ಏಕೆಂದರೆ, ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ./ಎಸ್.ಟಿ. ಬೋರ್ಡ್‌ಗಳಿಗೆ ಹಣವನ್ನು ಕೊಟ್ಟಿದ್ದು ಅವರು ಸಾಂಸ್ಕೃತಿಕ ಭವನಗಳನ್ನು ನಿರ್ಮಿಸಿದ್ದಾರೆ. ಈ ರೀತಿಯಾಗಿ ಸಾಮಾಜಿಕವಾಗಿ ನೊಂದಿರತಕ್ಕಂಥ ವ್ಯಕ್ತಿಗಳಿಗೆ ಸ್ವಲ್ಪ ಪರಿಹಾರ ನೀಡತಕ್ಕಂಥ ಇಲಾಖೆ ಈ ಸಮಾಜ ಕಲ್ಯಾಣ ಇಲಾಖೆಯಾಗಿದೆ ಎಂದು ಹೇಳುತ್ತೇನೆ. ಬಜೆಟ್‌ನಲ್ಲಿ ಖರ್ಚಾದಂಥ ಒಟ್ಟು ಹಣದಲ್ಲಿ 18% ಹಣವನ್ನು ಎಸ್.ಸಿ./ಎಸ್.ಟಿ. ಯವರಿಗೆ ಖರ್ಚು ಮಾಡಬೇಕು ಎನ್ನುವುದು ಕಾನೂನಿನ ಚೌಕಟ್ಟಿನಲ್ಲಿದೆ. ಆದರೆ ಅದು ಖರ್ಚಾಗುತ್ತಿದೆಯೇ, ಇಲ್ಲವೇ ಎಂದು ಕಂಡುಹಿಡಿದು ಹೇಳುವಂಥವರು ಇಲ್ಲ. ನಾನು ಮೊನ್ನೆ ಒಂದು ವಿಷಯವನ್ನು ಕೇಳಿದೆ. S.C.P. ಯಲ್ಲಿ individual beneficiary ಗಳಿಗೆ ಕೊಡುವಂಥ ಹಣದಲ್ಲಿ 100 ಕೋಟಿ ರೂಪಾಯಿಗಳನ್ನು ಮೆಟ್ರೋಗೆ ಹಾಕಿಕೊಂಡರು ಎಂದು ಕೇಳಿದೆ. ಇದು ಯಾವ ಧರ್ಮ ? S.C.P. individual beneficiary ಗಳಿಗೆ ಕೊಡುವಂಥ ಯೋಜನೆ. ಒಬ್ಬ ವ್ಯಕ್ತಿಗೆ ಕೊಡುವಂಥ ಧನಸಹಾಯವನ್ನು ಮೆಟ್ರೋಗೆ ಹಾಕಿಕೊಂಡು ಎಂದರೆ ಇದು ಯಾವ ಧರ್ಮ? ಇದನ್ನು ನಾವು

ಯೋಚನೆ ಮಾಡಬೇಕು. ಹಿಂದುಳಿದ ವರ್ಗದ ಜನರಿಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಸದಾನಂದಗೌಡರು ಅನೌನ್ಸ ಮಾಡಿದ್ದಾರೆ. ಅದು ಸ್ವಾಗತಾರ್ಹವಾದಂಥ ವಿಚಾರ. ಹಿಂದೆ ಕೆಲವೊಂದು ಜನಾಂಗಗಳನ್ನು ಪರಿಗಣಿಸಿರಲಿಲ್ಲ. ಎಲ್ಲ ಜನಾಂಗದವರಿಗೆ ಸಾಮಾಜಿಕ ನ್ಯಾಯ ಕೊಡುವ ದೃಷ್ಟಿಯಿಂದ ಕೆಲವೊಂದು ಸಮಾಜಗಳನ್ನು ಪರಿಗಣಿಸುವಂಥ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ನಿಜವಾಗಿಯೂ ಅದು ಒಳ್ಳೆಯ ವಿಚಾರ. ನಾವು ರಾಜಕೀಯವಾಗಿ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಮುರುಘಾ ಮಠದ ಸ್ವಾಮಿಗಳು ಜಾಗ ಕೊಟ್ಟಿದ್ದಾರೆ. ಅವುಗಳನ್ನು ಕಟ್ಟಿಕೊಳ್ಳುವುದಕ್ಕೆ ಅವರಿಗೆ ಹಣವಿರಲಿಲ್ಲ. ಆರ್ಥಿಕ ಸಂಕಷ್ಟದಲ್ಲಿದ್ದರು. ಬೆಳೆಯುತ್ತಿರುವಂಥ ಆ ಮಠಮಾನ್ಯಗಳೂ ಬೆಳೆಯಲಿ ಆ ದೃಷ್ಟಿಯಲ್ಲಿ ಇವರು ತೆಗೆದುಕೊಂಡಿರುವ ಈ ನಿರ್ಧಾರ. ಎಲ್ಲ ಸಮಾಜದವರಿಗೂ ಸಾಮಾಜಿಕ ನ್ಯಾಯವನ್ನು ಕೋಡತಕ್ಕಂಥ ನಿರ್ಧಾರ ತೆಗೆದುಕೊಂಡಿರುವುದು ಸರಿಯಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಬೇಗ ಮಾತನ್ನು ಮುಗಿಸುವಂತೆ ಉಪಾಧ್ಯಕ್ಷರು ಒತ್ತಾಯ ಮಾಡುತ್ತಿದ್ದೀರಿ. ಮಾತನಾಡಲು ಇನ್ನೂ ಎಲೆಕ್ಟ್ರಿಸಿಟಿ ವಿಚಾರವಿತ್ತು. ನಾವು ಯಾವುದಾದರೂ ಊರಿಗೆ ಹೋಗಿ ಊಟಕ್ಕೆ ಕುಳಿತಿದ್ದರೆ ಆ ಸಮಯದಲ್ಲಿ ಪಕ್ಕನೆ ಕರೆಂಟ್ ತೆಗೆಯುತ್ತಾರೆ. ಆಗ ಅಲ್ಲಿನ ಜನಗಳು, ಎಂ.ಎಲ್.ಎ ಇಲ್ಲೇಇದ್ದ ಹಿಡಿದುಕೊಳ್ಳಿರೋ, ಹುಡಿಕಿರೋ ಎಂದು ಹೇಳುತ್ತಾರೆ. ಇವತ್ತು ಇಂಥ ಪರಿಸ್ಥಿತಿ ಬಂದಿದೆ. ಇದನ್ನು ನಾವು ಪ್ರತಿನಿತ್ಯ ಅನುಭವಿಸುತ್ತಿದ್ದೇವೆ. ಏಕೆ ಅಂಥ ಪರಿಸ್ಥಿತಿ ಬಂದಿದೆ ಎನ್ನುವುದನ್ನು ಹಿರಿಯ ಸದಸ್ಯರು ಹೇಳಿದ್ದಾರೆ. ಏಕೆಂದರೆ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ನಾವು ಮೊದಲಿನಿಂದಲೂ ಮಾಡಿಕೊಂಡು ಬಂದಿಲ್ಲ. ಕರ್ನಾಟಕ ಬೆಳವಣಿಗೆಯಲ್ಲಿ ಬೆಳೆಯಿತೆ ಹೊರತು. ನಮಗೆ ಎಷ್ಟು ವಿದ್ಯಚ್ಛಕ್ತಿ ಬೇಕು ಅಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲು ನಾವು ಬಂಡವಾಳ ಹಾಕಲಿಲ್ಲ. ಇರುವ ವಿದ್ಯಚ್ಛಕ್ತಿಯನ್ನು ಒಬ್ಬೊಬ್ಬರು ತಮ್ಮ ಮನಸ್ಸಿಗೆ ಬಂದ ಹಾಗೆ ನೀನು ತಗೊ, ನೀನು ತಗೊ ಎಂದು ಎಲ್ಲರಿಗೂ ದಾನ ಮಾಡಿಕೊಂಡು ಬಂದು ಇವತ್ತು ಈ ಪರಿಸ್ಥಿತಿಗೆ ತಲುಪಿದ್ದೇವೆ. ರೇವಣ್ಣನವರು ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದಾಗ ಕರೆಕ್ಟಾಗಿತ್ತು. ಅದರಲ್ಲಿ ಎರಡನೇ ಮಾತಿಲ್ಲ. ಎರಡು ವರ್ಷಗಳ ಕಾಲ ಅವರು ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದರು. ನಾನು ಹೇಳುತ್ತಿರುವುದನ್ನು ನಾನು ಸಮರ್ಥನೆ ಮಾಡಿಕೊಳ್ಳುತ್ತೇನೆ. ರೇವಣ್ಣನವರು ಎಂದು ಹೇಳುತ್ತಿಲ್ಲ. ಗ್ರಾಮೀಣ ಜನರನ್ನು ಕೇಳಿ. ಗ್ರಾಮೀಣ ಜನರಿಗೆ ಉತ್ತಮವಾದಂಥ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದರು. ಆದರೆ ಈ ಮೊದಲು

ಇದ್ದಂಥ ಸರ್ಕಾರಗಳು ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿಲ್ಲ. ಆ ಕೆಲಸ ಆಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ. ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ ;– ಮಾನ್ಯ ಉಪಾಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು :– ಬಜೆಟ್ ಮೇಲೆ ಚರ್ಚೆಯಾಗಲಿ, ಅದನ್ನು ನಂತರ ತೆಗೆದುಕೊಳ್ಳೋಣ. ಕಾಕಾಸೋ ಪಾಟೀಲ್ ಪಾಂಡುರಂಗರವರೇ ನೀವು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ದಯಮಾಡಿ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಿ. ಗಮನ ಸೆಳೆಯುವ ಸೂಚನೆಗಳನ್ನು ನಿನ್ನೆಯೂ ತೆಗೆದುಕೊಂಡಿಲ್ಲ. ಇವತ್ತೂ ಇಲ್ಲ. ತೆಗೆದುಕೊಳ್ಳುವುದಿಲ್ಲ ಎಂದರೆ ಹೇಳಿಬಿಡಿ. ನಾವು ಹೋಗುತ್ತೇವೆ.

ಉಪಾಧ್ಯಕ್ಷರು :– ಇವತ್ತು ಎಷ್ಟು ಹೊತ್ತಾದರೂ ಸರಿ ನಂತರ ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಸುರೇಶ್ ಕುಮಾರ್ :– ಸದನದಲ್ಲಿ ಸತ್ಯ ಹೇಳಬೇಕು. ನಿನ್ನೆ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಇಲ್ಲ, ನಿನ್ನೆ ತೆಗೆದುಕೊಂಡಿಲ್ಲವಲ್ಲ.

ಉಪಾಧ್ಯಕ್ಷರು :– ನಿನ್ನೆ ತೆಗೆದುಕೊಂಡಿದೆ, ಬಹುಶಃ ಆಗ ತಾವು ಇರಲಿಲ್ಲ.

ಶ್ರೀ ಕಾಕಾಸೋ ಪಾಟೀಲ್ ಪಾಂಡರಂಗ (ನಿಪ್ಪಾಣಿ) :– ಮಾನ್ಯ ಅಧ್ಯಕ್ಷರೆ, 2012–13ನೇ ಸಾಲಿನ ಮುಂಗಡ ಪತ್ರದ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. 13ನೇ ವಿಧಾನಸಭೆಯಲ್ಲಿ ನಾವು ನಾಲ್ಕು ಬಜೆಟ್‌ಗಳನ್ನು ನೋಡಿದ್ದೇನೆ. ಐದನೇ ಬಜೆಟ್ಟನ್ನು ಈ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರಾದ ಮಾನ್ಯ ಸದಾನಂದಗೌಡರು ಮಂಡಿಸಿದ್ದಾರೆ. ಬಜೆಟ್‌ನಲ್ಲಿ ಪ್ರತಿವರ್ಷ plan size ಹೆಚ್ಚಾಗುತ್ತಾ ಹೋಗುತ್ತದೆ. ಹೀಗೆ plan size ಹೆಚ್ಚಾಗುತ್ತಾ ಹೋಗಿ ಈ ವರ್ಷ 1 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಆಗಿದೆ. ಆದರೆ ಅದರಿಂದ ನಾವು ಜನರಿಗೆ ಎಷ್ಟರ ಮಟ್ಟಿಗೆ ಪರಿಹಾರ ಕೊಡುತ್ತಿದ್ದೇವೆ ಅಥವಾ ರೂಪಿಸುತ್ತಿರುವ ಯೋಜನೆಗಳು ಅನುಷ್ಠಾನಕ್ಕೆ ಬರುತ್ತಿವೆಯೋ ಅಥವಾ ನಾವು ಎಷ್ಟರ ಮಟ್ಟಿಗೆ ಗುರಿಯನ್ನು

ಇಟ್ಟುಕೊಂಡಿದ್ದೇವೆ ಅದನ್ನು ಮುಟ್ಟುವಂಥ ಸಾಧನೆ ಮಾಡಿದ್ದೇವೆ ಎನ್ನುವುದು ಬಹಳ ಪ್ರಮುಖವಾದಂಥ ವಿಚಾರ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ವರ್ಷ ಬಜೆಟ್ ಮಂಡಿಸುವಾಗ ಒಂದು ನಿರೀಕ್ಷೆ ಇತ್ತು. ಕಳೆದ ವರ್ಷ ಹಿಂದಿನ ಮುಖ್ಯಮಂತ್ರಿಯವರು ಪ್ರತ್ಯೇಕವಾಗಿ ಕೃಷಿ ಬಜೆಟ್ ಅನ್ನು ನಮ್ಮ ರಾಜ್ಯದಲ್ಲಿ ಮಂಡಿಸಿದರು. ಆದರಿಂದ ಬಹಳ ಮಟ್ಟಿಗೆ ಸಾಧನೆ ಮಾಡಿದ್ದಾರೆನ್ನುವ ವಿಚಾರ ಕಂಡು ಬರಲಿಲ್ಲ. ಏಕೆಂದರೆ, irrigation ಅಥವಾ ಕೃಷಿ ಭೂಮಿ ಸುಧಾರಣೆ, ಸುವರ್ಣ ಭೂಮಿ ಸುಧಾರಣೆ, ಈ scheme ನಲ್ಲಿ ಯಾರಿಗೆ ಎಷ್ಟರ ಮಟ್ಟಿಗೆ ಪರಿಹಾರ ಸಿಗಬೇಕಾಗಿತ್ತೋ ಅಷ್ಟರಮಟ್ಟಿಗೆ ಸಿಕ್ಕಿಲ್ಲ. ಯಾವುದೇ ಘೋಷಣೆ ಮಾಡುವುದರ ಹೊರತಾಗಿ ಆದರಿಂದ ಬಹಳ ಸಾಧನೆ. ಮಾಡಿದ್ದೇವೆನ್ನುವಂಥ ಹೆಗ್ಗಳಿಕೆ ಸರ್ಕಾರಕ್ಕೆ ಬಂದಿಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಬಹಳಷ್ಟು ವಿವರವಾಗಿ ನಮ್ಮ ಪಕ್ಷದ ಮುಖಂಡರು ಮತ್ತು ಹಲವಾರು ನಾಯಕರು ಹೇಳಿದ್ದಾರೆ. ಆದರೆ, ಕೆಲವು ಅಂಶಗಳು ಬಿಟ್ಟುಹೋಗಿದ್ದು, ಅವುಗಳ ಬಗ್ಗೆ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದಕ್ಕೆ ಈ ಸಮಯವನ್ನು ಉಪಯೋಗಿಸುತ್ತೇನೆ. ನಾನು ಕಳೆದ ಮೂರು ವರ್ಷಗಳಿಂದಲೂ ಪ್ರತಿ ಬಜೆಟ್‌ನಲ್ಲಿ ಹೇಳುತ್ತಿದ್ದೇನೆ. Nippani Border Area Development Authority ಗೆ ಹಣವನ್ನೇ ತಾವು ಕೊಡುತ್ತಿಲ್ಲ. ಬೇರೆ ರಾಜ್ಯದಿಂದ ಜನ ಏನು ನಮ್ಮ ತಾಲ್ಲೂಕು ಮುಖಾಂತರ ಕರ್ನಾಟಕಕ್ಕೆ entry ಆಗುತ್ತಾರೆ. ಅವರಿಗೆ ಒಂದು ಒಳ್ಳೆಯ road ವ್ಯವಸ್ಥೆ ಕಲ್ಪಿಸಬೇಕಾದರೆ ಇವೆಲ್ಲವನ್ನು ಸೇರಿಸಿ ನಗರಾಭಿವೃದ್ಧಿ ಮಾಡಬೇಕಾದರೆ 42 ತಾಲ್ಲೂಕುಗಳೇನಿದೆ ಅವುಗಳಿಗೆ ವಿಶೇಷವಾಗಿ ಅನುದಾನ ಕೊಡಬೇಕು. 1972ನೇ ಇಸವಿಯಲ್ಲಿ ಆಗಿನ ಮುಖ್ಯಮಂತ್ರಿ ಮಾನ್ಯ ದೇವರಾಜ ಅರಸುರವರು Border Area Development Authority ಮಾಡಿ ಆಗಿನ ಕಾಲದಲ್ಲಿಯೇ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆಗಿನ ಕಾಲದಲ್ಲಿ ಮುಂಗಡ ಪತ್ರ ಬಹುಶಃ 800 ರಿಂದ 900 ಕೋಟಿ ರೂಪಾಯಿಗಳಿರಬಹುದು. ಆದರೆ, ಈಗ 1 ಲಕ್ಷ ಕೋಟಿ ರೂಪಾಯಿಗಳಷ್ಟು ಮುಂಗಡಪತ್ರ ಇದ್ದರೂ ಕೂಡ ಕೇವಲ ಚಿಕ್ಕೋಡಿ ತಾಲ್ಲೂಕು, ನಿಪ್ಪಾಣಿ ಕ್ಷೇತ್ರ ಬೆಳಗಾಂ ಜಿಲ್ಲೆ ಎನ್ನುವ ಹಾಗಿಲ್ಲ. ಕರ್ನಾಟಕ ರಾಜ್ಯಕ್ಕೆ ಮಹಾರಾಷ್ಟ್ರ, ಆಂಧ್ರ, ಕೇರಳ, ಗೋವಾ ಈ ರಾಜ್ಯಗಳಿಂದ ಬರುವಾಗ ಎಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಅದಕ್ಕೆ ಜನ compare ಮಾಡುತ್ತಾರೆ. ನಾವು ಬಹಳ ಗೌರವದಿಂದ ಹೇಳುತ್ತೇವೆ. ಬೇರೆ ರಾಜ್ಯಗಳ border area ದಲ್ಲಿರುವ

ರಸ್ತೆಗಳ ಪರಿಸ್ಥಿತಿ ಹೇಗಿದೆ. ನಮ್ಮ ರಾಜ್ಯದ border area ರಸ್ತೆಗಳ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ಗಮನಿಸುತ್ತಾರೆ. Compared to Maharashtra ಕೆಲವೊಂದರಲ್ಲಿ ನಾವು ಒಳ್ಳೇಯ position ನಲ್ಲಿದ್ದೇವೆ. ಆದರೆ, ಉಳಿದದ್ದೆಲ್ಲ ಕೊಡುವಾಗ ಬೇರೆ ರಾಜ್ಯವನ್ನು ಏನು ಆಧಾರವಾಗಿ ಹೇಳುತ್ತೇವೆ. ಅದು ಸತ್ಯಕ್ಕೆ ದೂರ. ಏಕೆಂದರೆ ಮಹಾರಾಷ್ಟ್ರಕ್ಕಿಂತ ನಮಗೆ ಕಡಿಮೆ ಕೊಡುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ, ಮಹಾರಾಷ್ಟ್ರದಲ್ಲಿ 48 Parliament ಸದಸ್ಯರಿದ್ದಾರೆ. ನಮ್ಮಲ್ಲಿ 28 ಸದಸ್ಯರಿದ್ದಾರೆ. Plan size ಪ್ರಕಾರ ನಮಗೆ ಸಾಲ ಕಡಿಮೆಯೇ ಇರುವುದು. ಆಂಧ್ರಪ್ರದೇಶದಲ್ಲಿ 45 ಸಂಸತ್ ಸದಸ್ಯರಿದ್ದಾರೆ. ಅವರಿಗಿಂತ ನಮಗೆ ಸಾಲ ಕಡಿಮೆ ಇದೆ ಎನ್ನುವ ಪ್ರಶ್ನೆ ಇಲ್ಲ.ಉಚಿತವಾಗಿ ಅಥವಾ ಜನಪರವಾಗಿ ಆದಂಥ ಯೋಜನೆಗಳು ಯಾವುದೇ ಸರ್ಕಾರ ಪಕ್ಷಾತೀತವಾಗಿ ಜನರಿಗೆ ಒಳ್ಳಯದು ಮಾಡಬೇಕೆನ್ನುವ ಭಾವನೆಯಿಂದ ನಾವು ಯೋಜನೆಯನ್ನು ರೂಪಿಸಬೇಕು. ಏಕೆಂದರೆ, ಮಧ್ಯಾಹ್ನದ ಬಿಸಿಯೂಟ ಯೋಜನೆ ಪ್ರಾರಂಭವಾದಾಗ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರವಿತ್ತು. ಆಗ ಎಲ್ಲರೂ ಅದನ್ನು ಟೀಕೆ ಮಾಡುತ್ತಿದ್ದರು. ಈಗ ಅದೇ ಯೋಜನೆ ದೇಶದ ತುಂಬೆಲ್ಲಾ ಹರಡುತ್ತಿದೆ. ಉಚಿತ ವಿದ್ಯುತ್ ಪೂರೈಕೆ ಸಲುವಾಗಿ ನಮ್ಮ ರಾಜ್ಯದಲ್ಲಿ ಎಲ್ಲಾ facility ಇದೆ. ಈಗ ನಮ್ಮ ಸ್ನೇಹಿತರೊಬ್ಬರು ಮಾತನಾಡುತ್ತಾ ಹೇಳಿದರು. ನಮ್ಮಲ್ಲಿಯ ESCOM Officers ಬಹಳ ಚಾಣಾಕ್ಷರಿದ್ದಾರೆ. ನಾವು ಇಂಥ ಕಡೆ ಕರೆಂಟ್ ಹೋಗಿದೆ. ಇಲ್ಲಿ ಒಂದು ತಾಸು ಕರೆಂಟ್ ಕೊಡಿ ಎಂದು ಕೇಳಿದರೆ ಕೊಡುತ್ತೇವೆಂದು ಹೇಳುತ್ತಾರೆ. ಎರಡು ನಿಮಷದಲ್ಲಿ ಮತ್ತೆ phone ಮಾಡಿದರೆ ಯಾವ ಊರಿನ ಕರೆಂಟ್ ಕಟ್ ಮಾಡಿ ಕೊಡಲಿ ಎಂದು ಕೇಳುತ್ತಾರೆ. ಅದಕ್ಕೆ ಒಂದು Planning ಪ್ರಕಾರ ಹೋಗಬೇಕಾಗುತ್ತದೆ. ಆದರೆ ಹೋಗುತ್ತಿಲ್ಲ. ನಾವು ಕೇವಲ ಘೋಷಣೆ ಮಾಡುವುದು ಬೇಡ. Border Area Development ವಿಚಾರದಲ್ಲಿ ಈಗ ಬಯಲು ಸೀಮೆಗೆ ಕೊಟ್ಟಂಥ ಹಣ ಕಡಿಮೆ ಇದೆ. ಅದರಲ್ಲೂ ಸಹ Border Area Development ನ ಉಲ್ಲೇಖವಿಲ್ಲ. ಆದರೆ ನಮ್ಮ ಸರ್ಕಾರ ಈ Border Area ತಾಲ್ಲೂಕು,ಳೇನಿವೆ. ಅವುಗಳನ್ನು ಕಡೆಗಣಿಸುವ ನಿರ್ಧಾರ ಮಾಡಿದೆಯೋ ಎಂದು ನಾವು ದುರ್ದೈವದಿಂದ ಪ್ರಸ್ತಾಪ ಮಾಡಬೇಕಾಗಿದೆ. ಅಥಣಿ ತಾಲ್ಲೂಕು ಇರಲಿ, ಚಿಕ್ಕೋಡಿ, ಖಾನಾಪುರ, ಕಿತ್ತೂರು ಇರಲಿ, ಬೆಳಗಾವಿ ಇರಲಿ ಅಥವಾ ಈ ಭಾಗದ ಮಂಗಳೂರು ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಇರಲಿ, ಆ ಕಡೆ ವಿಶೇಷ ಯೋಜನೆ ರೂಪಿಸಿ. ಆದ್ದರಿಂದಲೇ ಕರ್ನಾಟಕದಲ್ಲಿ ಪ್ರಾರಂಭ ಮಾಡಿದಾಗ tourism ಆಗಲಿ ಅಥವಾ

ಬೇರೆ ಯಾವುದಾದರೂ ಆಗಲಿ. ಕರ್ನಾಟಕಕ್ಕೆ ಒಂದು ಹೆಗ್ಗಳಿಕೆ ಬರುವ ವ್ಯವಸ್ಥೆ ಮಾಡಿ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಆದೇ ಪ್ರಕಾರ Social Welfare Department and Miniority Department ಬಗ್ಗೆ ನಾನು ಹಲವಾರು ಸಾರಿ ಹೇಳುತ್ತಿದ್ದೇನೆ. ವಿಶೇಷವಾಗಿ Backward Classes and Miniority ಬಗ್ಗೆ ಹೇಳುವುದಾದರೆ, ಅದರಲ್ಲೂ minority ಯಲ್ಲಿ ಜೈನ್ ಸಮುದಾಯಕ್ಕೆ ಸೇರಿದಂಥ ಜನ ನಮ್ಮ ಜಿಲ್ಲೆಯಲ್ಲಿದ್ದಾರೆ. ಅದೇ ಪ್ರಕಾರ minority ಯಲ್ಲಿ ಮುಸ್ಲಿಂ ಸಮುದಾಯದವರು ಇದ್ದಾರೆ. ಆದರೆ, ಹಾಸ್ಟೆಲ್ ಅನ್ನು ಇಬ್ಬರಿಗೂ ಒಂದೇ ಕೊಡುವುದಕ್ಕೆ ಹೇಗ ಸಾಧ್ಯ ? ಜೈನ ಧರ್ಮದ ಪ್ರಕಾರ after sun set ಊಟ ಮಾಡುವ ಹಾಗಿಲ್ಲ. ಮುಸ್ಲಿಂ ಧರ್ಮದ ಪ್ರಕಾರ sunset ಗಿಂತ ಮುಂಚೆ ಊಟ ಮಾಡುವುದು ತಪ್ಪು. ಆ ಧರ್ಮದ ಇಬ್ಬರೂ ಹುಡುಗರನ್ನು ಒಂದೆ ಹಾಸ್ಟೆಲ್‌ನಲ್ಲಿ ಇಟ್ಟರೆ superintendent ಗತಿ ಏನಾಗಬೇಕು ? ಅದರ ಬಗ್ಗೆ ತಾವು ವಿಚಾರ ಮಾಡಿ. ನೀವು backward classes and minorityಗೆ ಕೊಡುವುದಾದರೆ minority ಯಲ್ಲಿ ಅವರ ಧರ್ಮದ, ನಡವಳಿಕೆ ಪ್ರಕಾರ ನಡೆಯುವಂಥ ವ್ಯವಸ್ಥೆ ಮಾಡಿ, ಇಲ್ಲದಿದ್ದರೆ ಮಾಡಬೇಡಿ. ಯಾರೂ ಕೇಳಿಲ್ಲವಲ್ಲಾ ಮಾಡುವುದಾದರೆ, ಅದನ್ನು ಕೊಡುವುದಾದರೂ ಯಾರಿಗೆ? ಅದನ್ನು ಅನುಷ್ಠಾನ ಮಾಡುವುದಾದರೂ ಹೇಗೆ? ಅಲ್ಪಸಂಖ್ಯಾತ, ಮುಸ್ಲಿಂ ಸಮುದಾಯಕ್ಕೆ ಸೇರಿದ, ಜೈನ್ ಸಮುದಾಯಕ್ಕೆ ಸೇರಿದ ಶಾಸಕರು ಇಲ್ಲಿದ್ದಾರೆ. ಬೆಳಗಾಂನ ಹಾಸ್ಟೆಲ್‌ನಲ್ಲಿ ಎರಡು ಸಮುದಾಯಕ್ಕೆ ಸೇರಿದ ಹುಡುಗರು ಒಂದೇ ಹಾಸ್ಟೆಲ್‌ನಲ್ಲಿದ್ದಾರೆ. ಇಂಥ practical problem ಬಂದ ಸಂದರ್ಭದಲ್ಲಿ ಅದನ್ನು ತಾವು ಸರಿಪಡಿಸಬೇಕು. ಆ ಪ್ರಕಾರ ಅಲ್ಲಿ ಪ್ರತ್ಯೇಕವಾಗಿ ತೆರೆಯಬೇಕು. Population criteria ಏನಿದೆ. ಆ ಪ್ರಕಾರ ನೀವು ಹೋಗಿ. minority ಜನ ಎಲ್ಲ ಎಷ್ಟಿದ್ದಾರೆ. Backward Classes ಜನ ಎಲ್ಲಿ ಎಷ್ಟಿದ್ದಾರೆ. ಅಲ್ಲಿ ಒಂದು ಒಳ್ಳೆಯ ಅವಕಾಶ ಕೊಡುವ ವ್ಯವಸ್ಥೆ ಮಾಡಿ. ನೀವು cheap popularity ಸಂಬಂಧ ಯಾರ್ಯಾರಿಗೋ ಕೊಡುತ್ತಿದ್ದೀರಿ. ಅದರ ಬಗ್ಗೆ ನಮ್ಮದೇನೂ ಬೇರೆ ವಿಚಾರ ಇಲ್ಲ. ಆದರೂ ಸಹ basic importance ಅನ್ನು ನಾವು ಯಾರಿಗೆ ಕೊಡಬೇಕಾಗಿದೆ. ಅವರಿಗೆ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ನಿಪ್ಪಾಣಿಯಲ್ಲಿ more than 75 thousand population ಇದೆ. ಅಲ್ಲಿ ಅಗ್ನಿ ಶಾಮಕ ಠಾಣೆ ಇಲ್ಲ. ಅಲ್ಲಿ ಏನಾದರೂ ಅಗ್ನಿ ದುರಂತವಾದರೆ 5 ಕಿ.ಮೀ. ದೂರದಲ್ಲಿರುವ ಮಹಾರಾಷ್ಟ್ರದಿಂದ ನಾವು ನೆರವು

ತೆಗೆದುಕೊಳ್ಳಬೇಕಾಗಿದೆ ಅಥವಾ ಸಂಕೇಶ್ವರದಿಂದ ಸಹಾಯ ಕೇಳಬೇಕಾಗಿದೆ ಅಥವಾ ಚಿಕ್ಕೋಡಿಯಿಂದ ತರಿಸಬೇಕಾಗುತ್ತದೆ. Compared to Nippani ಚಿಕ್ಕೋಡಿ, ಸದಲಗ, ಹುಕ್ಕೇರಿ ತಾಲ್ಲುಕು head quarter ನಲ್ಲಿ ಮೊದಲು fire station ಸ್ಥಾಪನೆ ಆಯಿತು. ಸದಲಗ, ಸಂಕೇಶ್ವರದಿಂದ ಪ್ರತಿನಿಧಿಸುವ ಶಾಸಕರು ಸಚಿವರಾದರೆಂದು ಅಲ್ಲಿ ಮೊದಲು ಆಯಿತು. ಆದರೆ, ನಿಪ್ಪಾಣಿಯಲ್ಲಿ ಆಗದೆ ಹಾಗೆಯೇ ಉಳಿಯಿತು. ಕಳೆದ ಐದಾರು ವರ್ಷಗಳಿಂದ ಪ್ರತಿ ಸಾರಿ ನಾವು ಒಂದು fire sub station ಬೇಕೆಂದು ಹೇಳುತ್ತಿದ್ದೇವೆ. ಅದರ ಉಪಯೋಗ ಆಗಬೇಕೆಂದು ಎಲ್ಲಾ ಕಡೆ ಕೇಳುತ್ತಿದ್ದೇವೆ. ಒಂದು ಬಜೆಟ್ ಮಂಡಿಸುವಾಗ ಯಾವ ಭಾಗಕ್ಕೆ ಏನಾಗಬೇಕೆಂಬುದನ್ನು ಕೂಲಂಕುಷವಾಗಿ ಪರಿಶೀಲಿಸಿ, ಮಾಹಿತಿ ತೆಗೆದುಕೊಂಡು ಆನಂತರ ಮಾಡಿದರೆ ಒಳ್ಳೆಯ ಉಪಯೋಗವಾಗುತ್ತದೆ. ನಿಪ್ಪಾಣಿಯಲ್ಲಿ fire station ಬೇಕೆಂದು ಅಲ್ಲಿಯ ಉಸ್ತುವಾರಿ ಸಚಿವರಿಗೆ, ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಮುಖ್ಯಮಂತ್ರಿಯವರಿಗೆ ಕೇಳಿದ್ದೇವೆ. ಆದರೆ ನಿಪ್ಪಾಣಿಗೆ fire station ಬರಲಿಲ್ಲ. ಸದಲಗ, ಚಿಕ್ಕೋಡಿ, ಸಂಕೇಶ್ವರದಿಂದಲೇ ನಿಪ್ಪಾಣಿಗೆ ಅಗ್ನಿ ಶಾಮಕ ದಳದವರು ಬರಬೇಕು ಅಥವಾ ಮಹಾರಾಷ್ಟ್ರದಿಂದ ಬರಬೇಕು. ಹೀಗಾದರೆ, ಜನ ಸರ್ಕಾರಕ್ಕೆ ಏನು ಹೇಳುತ್ತಾರೆ ಹೇಳಿ. ಕಳೆದ 3–4 ವರ್ಷಗಳಿಂದ ಈ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಲೇ ಇದ್ದೇವೆ. ಇದರಲ್ಲಿ ಯಾವ ಪಕ್ಷದವರು ಅಗ್ನಿ ದುರಂತಕ್ಕೀಡಾಗುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಆ ರೀತಿ ಆದಾಗ, ಅದನ್ನು ಸರಿಪಡಿಸುವ ವ್ಯವಸ್ಥೆ ಇಲ್ಲದಿದ್ದರೆ ಕಷ್ಟವಾಗುತ್ತದೆ. ಇನ್ನೂ, ತಾಲ್ಲೂಕಿನ ಆಸ್ಪತ್ರೆ ವಿಚಾರ ಹೇಳುವುದಾದರೆ, ಬೆಳಗಾಂ ಜಿಲ್ಲೆಯ ನಿಪ್ಪಾಣಿ ಮತ್ತು ಕಿತ್ತೂರನ್ನು ತಾಲ್ಲೂಕು ಮಾಡಬೇಕೆಂದು basically ಎಲ್ಲಾ ಕಮಿಟಿಗಳು ಒಪ್ಪಿವೆ. ಕಿತ್ತೂರು ಒಂದು ಐತಿಹಾಸಿಕ ಸ್ಥಳ. ವೀರರಾಣಿ ಕಿತ್ತೂರು ಚೆನ್ನಮ್ಮ ಇದ್ದ ಸ್ಥಳ. ಅದನ್ನು ತಾಲ್ಲೂಕು ಮಾಡಬೇಕು. ನಿಪ್ಪಾಣಿಯನ್ನು ವಾಸುವದೇವ ರಾವ್ ಕಮಿಟಿಯಿಂದ ಹಿಡಿದು 1975 ರಿಂದ ಎಲ್ಲರೂ ತಾಲ್ಲೂಕು ಮಾಡಬೇಕೆಂದು propose ಮಾಡಿಕೊಂಡು ಬಂದರು. ಆ ಸ್ಥಳದ ಸಂಬಂಧ ಯಾರದ್ದೂ ತಕರಾರು ಇಲ್ಲ. ಆದರೆ, ಕೆಲವೊಂದು ಕುಂಟುನೆಪ ಹೇಳಿಕೊಂಡು ಬಂದಿದ್ದಾರೆ. 2011 Census ಪ್ರಕಾರ population criteria publish ಆಗಿದೆ. ಈ ಬಜೆಟ್‌ನಲ್ಲಿಯೇ provision ಮಾಡಿ ತಲಾ 10–10 ಕೋಟಿ ರೂಪಾಯಿ ಮಿನಿ ವಿಧಾನಸೌಧ ಕಟ್ಟಲು ಅವಕಾಶ ಮಾಡಿದರೆ ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇನ್ನೂ ಸಮಯವಿದೆ. ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ,

ಮಾನ್ಯ ಮುಖ್ಯಮಂತ್ರಿಯವರಗೆ ವಿನಂತಿಸುತ್ತೇನೆ. ಏನೇ ಆದರೂ ಸಹಿತ ಈ ಎರಡನ್ನು ತಾಲ್ಲೂಕು ಮಾಡಿ ಪ್ರತ್ಯೇಕವಾಗಿ ತಲಾ 10 ಕೋಟಿ ಹಣವನ್ನು ಒದಗಿಸಿ ಮಿನಿ ವಿಧಾನಸೌಧ ಕಟ್ಟುತ್ತೇವೆಂದು ಘೋಷಣೆ ಮಾಡಿದರೆ ಒಳ್ಳೆಯದು. ಬೆಳಗಾಂ ಜಿಲ್ಲೆ 18 ಕ್ಷೇತ್ರಗಳನ್ನು ಹೊಂದಿದೆ. Compared to plan size, 1 ಲಕ್ಷ ಕೋಟಿ ರೂಪಾಯಿ ಬಜೆಟ್ ಮಂಡಿಸಿರುವಾಗ 18 ಕ್ಷೇತ್ರಗಳಿಗೆ ಎಷ್ಟು ಹಣ ಬಂದಿದೆ? ಎಂದು ಯೋಚನೆ ಮಾಡಿದಾಗ ಅಷ್ಟು percentage ಹಣ ಸಿಕ್ಕಿಲ್ಲ. ಕೆಲವೊಂದು backward area ಕ್ಕೆ ಹೋಗಿರಬೇಕು. ಅದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಉಳಿದಿದ್ದರಲ್ಲಿ ಬೆಳಗಾಂ ಜಿಲ್ಲೆಗೆ ಅನ್ಯಾಯವಾಗಿದೆ. ವಿಶೇಷವಾಗಿ ಗಡಿನಾಡು ಪ್ರದೇಶದ ಜನರಿಗೆ ಈ ರಾಜ್ಯ ನಮ್ಮದು, ರಾಜ್ಯ ಸರ್ಕಾರವನ್ನು ನಾವು ನಡೆಸುತ್ತಿದ್ದೇವೆನ್ನುವ ಭಾವನೆ ಬರಬೇಕೆನ್ನುವ ವಿಚಾರ ನಮ್ಮದಿದೆ. ಉಳಿದ ವಿಚಾರಕ್ಕಿಂತಲೂ main stream ನಲ್ಲಿ ಎಲ್ಲರೂ ಬಂದು ಅಲ್ಲಿ ಎಲ್ಲರಿಗೂ ಒಳ್ಳೆಯ ಶಿಕ್ಷಣ ಮತ್ತು ಒಳ್ಳೆಯ ಅವಕಾಶ ಸಿಗಬೇಕು. ಅದಕ್ಕೆ ದಯಮಾಡಿ ಸರ್ಕಾರ ಸ್ಪಂದಿಸಬೇಕು. Taxation ಮಾಡುವ ಸಂದರ್ಭದಲ್ಲಿ ಬೀಡಿಯ ಮೇಲೆ 5% VAT add ಮಾಡಿದ್ದೀರಿ. ಬೀಡಿಯನ್ನು labourers ಅಂದರೆ ಬಡವರು ಸೇದುತ್ತಾರೆ. ನಾವು ಬೀಡಿ Tobacco growers ಅಲ್ಲ. ನಿಪ್ಪಾಣಿ, ಹುಕ್ಕೇರಿ, ಸದಲಗ, ಸಂಕೇಶ್ವರ ಭಾಗದಲ್ಲಿ ಬೀಡಿ, Tobacco ಭಂಗಿ ಸೊಪ್ಪು ಅಷ್ಟೇ ಉಪಯೋಗಿಸುತ್ತೇವೆ. ಅದರ ಮೇಲೂ ನೀವು 5% tax ಹಾಕಿದ್ದೀರಿ. ನಮ್ಮ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಚಂದ್ರಕಾಂತ್ ಬೆಲ್ಲದ್‌ರವರು ಸದನದಲ್ಲಿದ್ದಾರೆ. ತಾವು ಈ ಬಗ್ಗೆ ಹೇಳಬೇಕು. ಏಕೆಂದರೆ, ನಿಪ್ಪಾಣಿಯಿಂದ ತಂಬಾಕು ವ್ಯಾಪಾರಕ್ಕೆಂದು ಸಾಂಗ್ಲಿ ಮತ್ತು ಜೈಸಿಂಗ್‌ಪುರಕ್ಕೆ ಹೋದರೆ ಪರಿಸ್ಥಿತಿ ಏನಾಗುತ್ತಿದೆ ?

ಶ್ರೀ ಉಮೇಶ್ ವಿ. ಕತ್ತಿ :- ಕನ್ನಡದಲ್ಲಿ ಸರಿಯಾಗಿ ಮಾತನಾಡಿ.

ಶ್ರೀ ಕಾಕಾಸೋ ಪಾಂಡುರಂಗ ಪಾಟೀಲ್ :- ಜಿಲ್ಲಾ ಉಸ್ತುವಾರಿ ಸಚಿವರಿಗೆ ನಾನು ಮಾತನಾಡುವ ಕನ್ನಡ ಅರ್ಥವಾಗುತ್ತದೆ. ಆ ಭರವಸೆ ಮೇಲೆ ನಾನು ಮಾತನಾಡುತ್ತಿದ್ದೇನೆ. ನನ್ನ ಮಾತೃಭಾಷೆ ಕನ್ನಡವಲ್ಲ. ಆದರೂ ಕೂಡ ನಾನು ಪ್ರಯತ್ನ ಪಡುತ್ತಿದ್ದೇನೆ. ತಪ್ಪು ಇದ್ದರೆ ಹೇಳಿಕೊಡಿ, English ನಲ್ಲಿ ಮಾತನಾಡಿ ಎಂದರೆ ಮಾತನಾಡುತ್ತೇನೆ. ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದಿದ್ದರೆ ಒಳ್ಳೆಯದಿತ್ತು. ಆದರೆ, ನಾನು ಇರುವ ಹಿರಿಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. 5% VAT ಏನಿದೆ. ಅದನ್ನು ಹಿಂತೆಗೆದುಕೊಳ್ಳಿ,

ಏಕೆಂದರೆ, ಬೀಡಿ ಕಟ್ಟುವವರು ಯಾರು ? ಹೆಣ್ಣು ಮಕ್ಕಳು. ಮಂಗಳೂರು ಜಿಲ್ಲೆಯಲ್ಲಿ ಸಹಿತ ಬೀಡಿ ಕಟ್ಟುವುದು ಯಾರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಹಾಗೆಯೇ ಅತೀ lowest income ಇರುವವರು ಬೀಡಿ ಸೇದುತ್ತಾರೆನ್ನುವುದು ಎಲ್ಲರಿಗೂ ಗೊತ್ತಿದೆ. ಅಂಥವರ ಮೇಲೆ 5% VAT ಹಾಕಿರುವುದು ಸರಿಯಲ್ಲ. Excise duty ಉಳಿದ tax ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರಿಂದ ನಮ್ಮಲ್ಲಿ ಎರಡೂ ಕಡೆ ಹೊಡೆತ ಬೀಳುತ್ತದೆ. ಏಕೆಂದರೆ mainly 90% tobacco growers, producers ನಮ್ಮ ನಿಪ್ಪಾಣಿಯಲ್ಲಿದ್ದಾರೆ. ಅದೇ ವ್ಯಾಪಾರಕ್ಕೆ 5% VAT ಹಾಕಿದರೆ ಆ ವ್ಯಾಪಾರ ಬೇರೆ ರಾಜ್ಯಕ್ಕೆ shift ಆಗುತ್ತದೆ. ಆದರಿಂದ ಎಲ್ಲಾ ಹಾಳಾಗುವ ಪರಿಸ್ಥಿತಿ ಇದೆ. ಆದರಿಂದಾಗಿ ನಾನು ಒತ್ತಾಯಿಸುತ್ತಿದ್ದೇನೆ. ಬೀಡಿಗೆ ಹಾಕಿರುವ 5% VAT ಅನ್ನು exempt ಮಾಡಬೇಕು. ಯಾವುದೇ ಪರಿಸ್ಥಿತಿಯಲ್ಲಿ tax ಹೇರಬಾರದು. ಬೀಡಿ ಸೇದುವವರಿಗೆ, ಬೀಡಿ tobacco ಕಟ್ಟುವವರಿಗೆ tax ಹಾಕುವುದರಿಂದ ಅನ್ಯಾಯವಾಗುತ್ತದೆ. ಇನ್ನು, ಶಿಕ್ಷಣದ ಬಗ್ಗೆ ಹೇಳುವುದಾದರೆ, aided and non-aided schools ಪ್ರಾರಂಭ ಮಾಡುವಾಗ cabinet ನಲ್ಲಿ ಒಂದು policy ತನ್ನಿ. ಬಜೆಟ್‌ನಲ್ಲಿ ಆ ಬಗ್ಗೆ ಪ್ರಸ್ತಾಪ ಆಗಿರುತ್ತದೆ. ಆದರೆ decision ಬೇರೆ ಆಗಿರುತ್ತದೆ. ಆ ಪ್ರಕಾರ ಆಗಬಾರದು. ನೀವು ಒಂದು decision ಮಾಡಿದರೆ ಅದೇ ಪ್ರಕಾರ ಮುಂದುವರಿಸಿದರೆ ಒಳ್ಳೆಯದಾಗುತ್ತದೆ. Planning ಏನಿದೆ ಆ ಪ್ರಕಾರ ಹೋಗುವ ವ್ಯವಸ್ಥೆ ಬೇಕು. ಇನ್ನೂ Housing ಬಗ್ಗೆ ಹೇಳುವುದಾದರೆ, ನನಗೆ ಅರ್ಥವಾಗುತ್ತಿಲ್ಲ. ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳನ್ನು ಕೊಡುತ್ತೇವೆಂದು ಹೇಳಿದಿರಿ. ಆ ಪ್ರಕಾರ ನಾವು ಫಲಾನುಭವಿಗಳನ್ನು ಆಯ್ಕೆ ಮಾಡಿ ಕಳುಹಿಸಿದೆವು. ಆದೇ ಪ್ರಕಾರ ವಿಧಾನ ಪರಿಷತ್ತು ಸದಸ್ಯರಿಗೂ ಕೂಡ ಫಲಾನುಭವಿಗಳನ್ನು ಆಯ್ಕೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಹಾಗೆಯೇ ಮಾನ್ಯ ಸಂಸದರಿಗೂ ಕೂಡ ಅವಕಾಶ ಮಾಡಿದ್ದೀರಿ. ಎಲ್ಲರಿಂದಲೂ ಪಟ್ಟಿ ಬಂದಿದೆ. ಒಂದೊಂದು ಮತಕ್ಷೇತ್ರಕ್ಕೆ 5 ಸಾವಿರ ಮನೆಗಳನ್ನು ಅಲಾಟ್ ಮಾಡಿದ್ದೀರಿ. ಒಂದು ಮನೆ ಕಟ್ಟಲು 65 ಸಾವಿರ ರೂ.ನಂತೆ ಲೆಕ್ಕ ಹಾಕಿದರೆ 350 ಕೋಟಿ ರೂಪಾಯಿ. each constituency ಗೆ ಬೇಕಾಗುತ್ತದೆ. 100 ಅಥವಾ 200 Constituency ಗೆ ಲೆಕ್ಕ ಹಾಕಿದರೆ 7500 crores of rupees ಅನ್ನು Housing ಗೆ ಮೀಸಲಾತಿ ಇಡಬೇಕಾಗುತ್ತದೆ. ಆದರೆ, ಮೀಸಲಿಟ್ಟಿದ್ದು 1349 crores of rupees ಹೇಗೆ ನೀವು ಗುರಿ

ಮುಟ್ಟುತ್ತೀರಿ ? ನಮ್ಮದೇನು transfer ಆಗುವ ಹಾಗಿಲ್ಲ. ನಾವು ಆಯ್ಕೆ ಮಾಡಿದರೂ ಮನೆಗಳನ್ನು ಕಟ್ಟಿಕೊಡಲಿಲ್ಲ ಎಂದರೆ transfer ಆಯಿತು. ಮಂಜೂರು ಮಾಡಿದ, ಹೋದ ಎಂದು ಹೇಳುವ ಹಾಗಿಲ್ಲ. ನಾವು ಅಲ್ಲಿಯೇ ಇದ್ದೇವೆ. ಒಂದು planning ಮಾಡಿ ಕೆಲವೊಂದು ಕ್ಷೇತ್ರದಲ್ಲಿ ನೀವು ಆಡಳಿತಾರೂಢ ಪಕ್ಷದವರಿದ್ದೀರಿ. ನೀವು ಬೇಕಾದರೆ 400-500 ಮನೆಗಳನ್ನು ಹೆಚ್ಚಿಗೆ ತೆಗೆದುಕೊಳ್ಳಿ. ನಮ್ಮ ಸರ್ಕಾರ ಬಂದಾಗ ನಾವು ತೆಗೆದುಕೊಳ್ಳುತ್ತೇವೆ. ಆದರೆ, 4 ಸಾವಿರ ಮನೆಗಳ ಆಯ್ಕೆ ಪ್ರಕ್ರಿಯೆ ಏನಿದೆ, ಈ ಬಗ್ಗೆ ಯಾರಿಗೆ ಅಧಿಕಾರ ಕೊಡುವುದು? ನಮ್ಮ ಮರಾಠಿಯಲ್ಲಿರುವ ಒಂದು ಕಥೆಯನ್ನು ಕನ್ನಡದಲ್ಲಿ ಹೇಳುತ್ತೇನೆ. 'ಒಬ್ಬ ತಂದೆ ಹಳ್ಳಿಯಲ್ಲಿದ್ದವರು ತಮ್ಮ 4 ಮಕ್ಕಳಿಗೆ ಒಂದೇ ಬಟ್ಟೆಯನ್ನು ಕೊಟ್ಟು ಎಲ್ಲರ measurement ಕೊಟ್ಟ, ಎಲ್ಲಾ ಮಕ್ಕಳಿಗೂ ಏನು ಅನಿಸಿತು ಎಂದರೆ, ನನ್ನ measurement ಪ್ರಕಾರ uniform ready ಆಯಿತು. ಅವನು ಯಾವ measurement ಪ್ರಕಾರ ಬಟ್ಟೆ ಹೊಲಿಯುವುದಕ್ಕೆ ಬೇರೆ ದಿವಸ ಹೋಗಿ ಹೇಳುತ್ತಿದ, ಬಟ್ಟೆ ತರುವುದಕ್ಕೆ ಹೋದಾಗ ಅವರೆಲ್ಲರೂ ಎಲ್ಲರೂ ಕೂಡಿ tailor ಗೆ ಬೈಯ್ಯುವುದು ಯಾರ measuriementನದೂ ಹೊಲಿದಿಲ್ಲ ಹಾಗೆ ಈ ಮನೆಯ ಪರಿಸ್ಥಿತಿ ಆಗಿದೆ. ಆ ರೀತಿ ಎಲ್ಲರೂ ಕೂಡ ಶಾಸಕರಿಗೆ, ಸಂಸದರಿಗೆ ಎಲ್ಲರಿಗೂ beyond that ಕೆಲಸ ಆಗಿದೆ. ನೀವು 500 ಮನೆಗಳಿಗೆ ಸೀಮಿತವಾಗಿ ಆಯ್ಕೆ ಮಾಡಿ. ನಾವು ಇಷ್ಟು target ಇಟ್ಟುಕೊಂಡು ಇಷ್ಟು ಮನೆ ಕಟ್ಟುತ್ತೇವೆ ಎಂದು ನೀವು ಹೇಗೆ plan ಇಲ್ಲದೆ ಮಾಡುತ್ತೀರಿ ಎಂದು ಮಾನ್ಯ ಮುಖ್ಯಮಂತ್ರಿಯವರನ್ನು ತಮ್ಮ ಮುಖಾಂತರ ಕೇಳುವುದಕ್ಕೆ ಬಯಸುತ್ತೇನೆ. ಪ್ರತಿಯೊಂದು ಕ್ಷೇತ್ರದ ಮಾಹಿತಿ ತೆಗೆದುಕೊಂಡು ಕನಿಷ್ಠ 3000 ಪ್ರಕಾರ ಮನೆಗಳನ್ನು ಹಂಚಿದ್ದೀರಿ. ಎಲ್ಲಿ ವಿರೋಧ ಪಕ್ಷದ ಶಾಸಕರು ಇದ್ದಾರೋ ಅಲ್ಲಿಯ ಸಂಸದರಿಗೆ, ವಿಧಾನ ಪರಿಷತ್ ಸದಸ್ಯರಿಗೆ ಕೊಟ್ಟು ಎರಡೆರಡು ಸಾವಿರ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಸರಿಯೋ ತಪ್ಪೋ ಆ ಪ್ರಶ್ನೆ ಬೇರೆ. ಆದರೂ ಕೂಡ ಎಲ್ಲರೂ ಮಂಜೂರು ಮಾಡಿ ಎಲ್ಲರಿಗೂ ಮನೆಗಳನ್ನು ಕೊಡುವುದಾದರೂ ಸಹ ಅಷ್ಟು ಹಣವನ್ನು ಎಲ್ಲಿಂದ ತರುತ್ತೀರಿ? ಮತ್ತೆ ಹೇಗೆ ಕಟ್ಟುವುದಕ್ಕೆ ಸಾಧ್ಯವಿದೆ? ಸಾಧ್ಯವೇ ಇಲ್ಲ. ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡನೆ ಮಾಡಲೇಬೇಕು ಎನ್ನುವ ವಿಚಾರ ಇಟ್ಟುಕೊಂಡು ಮಾಡುವುದಾದರೆ, ಅದರಲ್ಲೂ ಸಹ 7500 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿಲ್ಲ. ಅದರಲ್ಲಿ ಕೇವಲ 1300 ಕೋಟಿ ರೂಪಾಯಿ ಬಂದಿದೆ. ಹೇಗೆ ಮಾಡುವುದಕ್ಕೆ ಸಾಧ್ಯವಿದೆ ?

Irrigation ವಿಚಾರದಲ್ಲೂ ಕೂಡ ನಮ್ಮ ರಾಜ್ಯದಲ್ಲಿ Irrigation Project ನಲ್ಲಿ ವಾಸ್ತವವಾಗಿ ಹೇಳುವುದಾದರೆ, ಕರ್ನಾಟಕ ಮಹಾರಾಷ್ಟ್ರದ ನೀರಿನ ವಿಷಯದ ಬಗ್ಗೆ ನಮ್ಮದು ಒಂದೇ ವಿಚಾರ ಎಂದರೆ ನಾವು ಆಂಧ್ರದ against ಆಗಿ ಹೋರಾಟ ಮಾಡಬೇಕು. ಏಕೆಂದರೆ, ಕೃಷ್ಣ ಮತ್ತಿತರ ಉಪ ನದಿಗಳು ಎಲ್ಲಾ ಮಹಾರಾಷ್ಟ್ರದಿಂದಲೇ ಪ್ರಾರಂಭವಾಗುತ್ತದೆ. ನಮ್ಮ ಕರ್ನಾಟಕದಲ್ಲಿ ಹೆಚ್ಚಿನ ಪ್ರಾಜೆಕ್ಟ್‌ಗಳಿದ್ದರೂ ನೀರಿನ ಲಾಭ ಹೆಚ್ಚಾಗಿ ಆಂಧ್ರಪ್ರದೇಶಕ್ಕೆ ಹೋಗುತ್ತಿದೆ. ನಮ್ಮ ಅವರ ವಿಚಾರ ಇಟ್ಟುಕೊಂಡೇ tribunal ಗೆ ಹೋಗಬೇಕಾಗುತ್ತದೆ. ಉಳಿದವರಿಗಿಂತ ನನ್ನ knwoledge ಕಡಿಮೆ ಇರಬಹುದು. ಆದರೆ, ಇದು ರಾಜ್ಯದ ಹಿತದ ವಿಚಾರ. ಒಬ್ಬ ಶಾಸಕನಾಗಿ ನಾನು ಈ ವಿಷಯ ಪ್ರಸ್ತಾಪಿಸುತ್ತಿದ್ದೇನೆ. ಆ ವಿಚಾರವನ್ನೂ ತಾವು ಗಮನದಲ್ಲಿಟ್ಟುಕೊಂಡು ಹೇಳಬೇಕು. ಇನ್ನೂ, bogus ration card ವಿಷಯ ಹೇಳುವುದಾದರೆ, ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಕಳೆದ 6–7 ತಿಂಗಳಿನಿಂದ ಹಲವಾರು ಜನ ತಮಗೆ pension ಬಂದಿಲ್ಲ. ವಿಧವಾ pension ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ, ನೀವು ಹೆಚ್ಚು ಮಾಡಿದ್ದೇವೆಂದು ಹೇಳುತ್ತೀರಿ. ಯಾರ್ಯಾರ pension due ಇದೆ 31ನೇ ಮಾರ್ಚ್ ತಿಂಗಳ ಒಳಗಾಗಿ ಅಥವಾ 10ನೇ ಏಪ್ರಿಲ್ ಒಳಗಾಗಿ ನಾವು ಎಲ್ಲರ pension ಅನ್ನು clear ಮಾಡುತ್ತೇವೆಂದು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಭರವಸೆ ಕೊಡಬೇಕು. 500 ರೂಪಾಯಿಗೆ ಹೆಚ್ಚಳ ಮಾಡಿರುವ scheme ಯಾವಾಗ ಜಾರಿಗೆ ಬರುತ್ತದೋ ಬರಲಿ. ಆದರೆ, ಇದುವರೆಗೆ ಯಾವುದು ಕೊಟ್ಟಿಲ್ಲ. ಅಂಥದವರಿಗೆ pension ಅನ್ನು clear ಮಾಡುತ್ತೇವೆ. ತಾವು ಇಲ್ಲಿ ಒಂದು ಮಾತು ಹೇಳಿದರೆ ಸಾಕಷ್ಟು ಅನುಕೂಲವಾಗುತ್ತದೆ. ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ. ಇನ್ನು Police and RTO Departments ಬಗ್ಗೆ ಹೇಳುವುದಾದರೆ, ಹಲವಾರು ಕಡೆ Check post ಇರುತ್ತದೆ. ಜನರ ಜೊತೆ ಒಳ್ಳೆಯ ರೀತಿಯಾಗಿ ಸ್ಪಂದಿಸುವ ರೀತಿಯಲ್ಲಿ ಆಡಳಿತ ಕೊಡುವ ರೀತಿ ಇರಬೇಕು. ಅಲ್ಲಿ complaint ಯಾರ ಕಡೆ ಕೊಡುವುದು ? ಏಕೆಂದರೆ, RTO, Commercial Tax Check Post, police check post ಇವುಗಳ ಮಧ್ಯೆ ಸಾಮಾನ್ಯ ಜನ suffer ಆಗುತ್ತಾರೆ. Tax ತಪ್ಪಿಸಿಕೊಂಡು ಯಾರು ಬರುತ್ತಾರೆ ಹಿಡಿದು ಹಾಕಿ. ಆದರೆ, ಆಲ್ಲಿಯ ತಹಶೀಲ್ದಾರರಿಗೆ ವಿಶೇಷ ಪವರ್ ಕೊಡುವ ವ್ಯವಸ್ಥೆ ಆಗಬೇಕು. ಬೆಳಗಾಂ ಜಿಲ್ಲೆಯ ನಿಪ್ಪಾಣಿ ಮತ್ತು

ಕಿತ್ತೂರು ತಾಲ್ಲೂಕುಗಳು ಎಂದು ನಾಳಿನ ತಮ್ಮ ಉತ್ತರದಲ್ಲಿ ಘೋಷಣೆ ಆಗಬೇಕು. ಪ್ರತ್ಯೇಕವಾಗಿ ಹತ್ತು ಕೋಟಿ ಮೀಸಲಿಟ್ಟು ಮಿನಿ ವಿಧಾನಸೌಧ ಮಾಡಬೇಕು. ಸುವರ್ಣ ಸೌಧವನ್ನು ತಾವೇನು ಉದ್ಘಾಟನೆ ಮಾಡುತ್ತೀರಿ ಅದೇ ವೇಳೆಯಲ್ಲಿ ಅದಕ್ಕೆ ಆಡಿಗಲ್ಲು ಹಾಕಬೇಕೆಂದು ಕೇಳುತ್ತಿದ್ದೇನೆ. ಅದೇ ಪ್ರಕಾರ ಈ Border Area Developemt Authority ಗೆ ತಾವು ಎನೂ ಹಣ ಒದಗಿಸಿಲ್ಲ. ಅದನ್ನು ಕೊಡಬೇಕು ಕನಿಷ್ಟ ಪ್ರತಿಯೊಂದು ತಾಲ್ಲೂಕಿಗೆ ಐದು ಕೋಟಿ ಪ್ರಕಾರ ಬರುವಂಥ ದಿವಸದಲ್ಲಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಮೂರನೆಯದಾಗಿ ಈ ಬೀಡಿಯ ಮೇಲೆ ನಿವೇನು 5% VAT ಹೇರಿದಿರಿ. ಇದು ತೀರಾ ತಪ್ಪು. ಇದರಿಂದ ಬಡವರಿಗೆ ಎಲ್ಲರಿಗೂ ಆದರಲ್ಲೂ ಸಾಮಾನ್ಯ ಜನ ಯಾರು ಬೀಡಿ ಸೇದುತ್ತಾರೆ ಅವರಿಗೆಲ್ಲಾ ತೊಂದರೆಯಾಗುತ್ತದೆ. ತಂಬಾಕು ಸೇವನೆ ಆರೋಗ್ಯದ ದೃಷ್ಟಿಯಿಂದ ಹಾನಿಕಾರಕ ಎಂಬುದನ್ನು ಒಪ್ಪುತ್ತೇವೆ. ಆದರೂ ತಂಬಾಕನ್ನು ಬೆಳೆಯುತ್ತೇವೆ. ಮತ್ತು ಅದೇ ಪ್ರಕಾರವಾಗಿ ಬೀಡಿ ಸೇದುತ್ತಾರೆ. ಅದಕ್ಕೆ 5% VAT ಕಟ್ ಮಾಡಿ ಆದರಿಂದ ನಿಮಗೇನು ಬಹಳ ಹೊರೆ ಬೀಳಂಗಿಲ್ಲವೆಂದು ಹೇಳಿ, ಇಷ್ಟು ವಿಷಯಗಳನ್ನು ಹೇಳಿ, ಕೆಲವೊಂದು ಮಾತುಗಳನ್ನಾಡುವಾಗ ತಪ್ಪಿದ್ದರೂ ಕೂಡ ತಾವು ಎಲ್ಲರೂ ಶಾಂತರೀತಿಯಿಂದ ಕೇಳಿದ್ದಕ್ಕೆ ಮತ್ತೊಮ್ಮೆ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಎನ್. ರುದ್ರೇಶ್ ಗೌಡ (ಬೇಲೂರು) :- ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಉಪಾಧ್ಯಕ್ಷರಿಗೆ ವಂದನೆಗಳು. 2012-13ನೇ ಸಾಲಿನ ಬಜೆಟ್‌ನ್ನು ಮಂಡಿಸಬೇಕಾದರೆ ಜನರು ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದ್ದರು. ಸಾರ್ವಜನಿಕರು ಹಾಗು ನಾವು ಕೂಡ ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದ್ದೆವು. ಎಜ್ಯುಕೇಟೆಡ್ಸ್ ಕೂಡ ಉತ್ತಮವಾದ ಬಜೆಟ್ ಕೊಡಬಹುದು ಎಂದು ನಿರೀಕ್ಷೆಯನ್ನಿಟ್ಟು-ಕೊಂಡಿದ್ದರು. ಈ ಬಜೆಟ್ ಅಂಥ ಉತ್ತಮವಾದಂಥ ಬಜೆಟ್ ಅಲ್ಲ ಎನ್ನುವುದು ನಮ್ಮ ಭಾವನೆ. ಉದಾಹರಣೆಗೆ ಕೃಷಿ ಬಜೆಟ್‌ನಲ್ಲಿ ಹೇಳುವುದಕ್ಕೆ ಹೋದರೆ ಎಲ್ಲಾ ಇಲಾಖೆಗಳನ್ನು ಸೇರಿಸಿಕೊಂಡು ಕೃಷಿ ಬಜೆಟ್‌ನ್ನು ಮಾಡಿದರು. ಸುಮಾರು ಎಂಟು ಇಲಾಖೆಗಳು ಇದರಲ್ಲಿ ಇವೆ. ಕೃಷಿ ಬಜೆಟ್‌ನಲ್ಲಿ ಕೃಷಿಗೆ ಕೊಟ್ಟಂಥ ಹಣ, ತೋಟಗಾರಿಕೆಗೆ ಕೊಟ್ಟಂಥ ಹಣ, ಪಶುವೈದ್ಯಕೀಯಕ್ಕೆ ಕೊಟ್ಟಂಥ ಹಣ, ಫಿಷರೀಸ್‌ಗೆ ಕೊಟ್ಟಂಥ ಹಣ, ಮೇಜರ್ ಮತ್ತು ಮೈನರ್ ಇರಿಗೇಷನ್ ಇವೆಲ್ಲಕ್ಕೂ ಕೊಟ್ಟಂಥ ಹಣವನ್ನು ಸೇರಿಸಿಕೊಂಡು ನಮ್ಮ ಕೃಷಿ ಬಜೆಟ್ ಇಷ್ಟು ದುಡ್ಡು ಆಗುತ್ತೆ ? ಒಂದು ಲಕ್ಷ ಕೋಟಿ ಬಜೆಟ್ ಮಾಡಬೇಕಾದರೆ ಹಿಂದಿನ ಮುಖ್ಯಮಂತ್ರಿಗಳು ಯಾವಾಗಲೂ ಪತ್ರಿಕೆಗಳಲ್ಲಿ ನಾನು 2012-13 ನೇ ಸಾಲಿಗೆ ಒಂದು ಲಕ್ಷ ಕೋಟಿಯ ಬಜೆಟ್‌ನ್ನು

ಮಂಡಿಸುತ್ತೇನೆಂದು ಹೇಳುತ್ತಿದ್ದರು. ಅದನ್ನು ಕಾಪಿ ಮಾಡಿಕೊಂಡು ಈ ಸಾರಿ ಇಂದಿನ ಮುಖ್ಯಮಂತ್ರಿಗಳು ಒಂದು ಲಕ್ಷ ಕೋಟಿ ಬಜೆಟ್‌ನ್ನು ಮಂಡಿಸಿದ್ದಾರೆ. ಒಂದು ಲಕ್ಷ ರೂಪಾಯಿಗಳ ಅಲ್ಪಾವದಿ ಸಾಲವನ್ನು ಬ್ಯಾಂಕಿನಲ್ಲಿ ಪಡೆದಾಗ Zero percent ಗೆ ಬಡ್ಡಿ ಹಾಕಿದ್ದೇವೆ ಎನ್ನುವ ಒಂದೇ ಒಂದು ಅಂಶವನ್ನು ಹೇಳಿದ್ದಾರೆಯೇ ಹೊರತು ಆದು ಬಿಟ್ಟು ರೈತರಿಗೆ ಇನ್ನಾವ ಉಪಕಾರವನ್ನೂ ಮಾಡಿಲ್ಲ. ಹೀಗಾಗಿ ನನಗೆ ಏನು ಅನ್ನಿಸುತ್ತದೆಂದರೆ, ನಾನು ಎಷೋ ಜನಗಳ ಹತ್ತಿರ ಈ ಕೃಷಿ ಬಜೆಟ್ ರೈತರಿಗೆ ಸಂಬಂಧಿಸಿದ್ದು ಇದು ಹೇಗೆ ಇದೆ ಎಂದು ಕೇಳಿದೆ. ರೈತರಿಗೆ ಯಾವುದಾದರೂ ಒಂದು ನಾಲ್ಕು ಹೊಸ ಯೋಜನೆಗಳನ್ನು ತಂದಿದ್ದರೆ ಸಂತೋಷಪಡುತ್ತಿದ್ದೆವು. ಉದಾಹರಣೆಗೆ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ 25 ಸಾವಿರ 40 ಸಾವಿರ ರೂಪಾಯಿ ಸಾಲ ಮಾಡಿರುವುದನ್ನು ಬಡ್ಡಿ ಮತ್ತು ಅಸಲನ್ನು ಎರಡನ್ನೂ ಮನ್ನಾ ಮಾಡತಕ್ಕಂಥದ್ದನ್ನು, ಮತ್ತೊಂದು ಅವರು ಬೆಳೆದಂಥ ಪದಾರ್ಥಕ್ಕೆ ಒಳ್ಳೆಯ ರೇಟ್ ಕೊಡತಕ್ಕಂಥದ್ದು, ನಾವು Magazines ಓದಿದಾಗ ಎಲ್ಲಾ ದೇಶಗಳಲ್ಲಿಯೂ ರೈತರು ಬೆಳೆದಂಥ ಎಲ್ಲಾ ಆಹಾರದ ಪದಾರ್ಥಕ್ಕೆ ಉತ್ತಮವಾದಂಥ ರೇಟ್‌ನ್ನು ಕೊಡುತ್ತಾ ಬಂದಿದ್ದಾರೆ. ಆದರೆ, ಈ ಬಜೆಟ್‌ನಲ್ಲಿ ಆದರ ಬಗ್ಗೆ ಏನೂ ಹೇಳಿಲ್ಲ. ಏಕೆಂದರೆ ಮತ್ತೊಂದು ಅಂಶ ನನಗೆ ಬೇಜಾರಾಗಿದ್ದು ಏನೆಂದರೆ, ಟ್ರ್ಯಾಕ್ಟರ್ ಸಬ್ಸಿಡಿ ಕೊಡುತ್ತವೆಂದು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು 2-3 ಸಾವಿರ ಇದೇ ಸದನದಲ್ಲಿ ಹೇಳಿದರು. ಆದರೆ, ಅದನ್ನು ಅನುಷ್ಠಾನಕ್ಕೆ ತರಲಿಲ್ಲ. ಟ್ರ್ಯಾಕ್ಟರ್‌ಗೆ 50 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ರೈತರಿಗಾಗಿ ತರಲಿಲ್ಲ. ನಾವು ಎಷ್ಟೋ ಸಾರಿ ಕೇಳಿಕೊಂಡೆವು. ನಾನು ಏನು ಅಂಶ ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ. ರೈತರಿಗೆ ಮಾಡತಕ್ಕಂಥ ಸಹಾಯ ಹೆಚ್ಚಾಗಿ ಮಾಡಿದರೆ ರೈತರು ಸ್ವಲ್ಪ ಆರ್ಥಿಕವಾಗಿ ಮುಂದೆ ಬರಲಿಕ್ಕೆ ಸಾಧ್ಯವಾಗುತ್ತಾರೆ. ರೈತರ ಮಕ್ಕಳು ಸ್ವಲ್ಪ ಮಟ್ಟಿಗಾದ್ರೂ ವಿದ್ಯಾಭ್ಯಾಸ ಕಲಿಯುವುದಕ್ಕೆ ಸಹಾಯವಾಗುತ್ತದೆ ಮತ್ತು ರೈತರ ಮಕ್ಕಳು ಸ್ವಲ್ಪ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಏಕೆಂದರೆ, ನಾವು ಪ್ರತಿ ದಿನ ಹಳ್ಳಿಗಳಲ್ಲಿ ನೋಡುತ್ತಿರುತ್ತೇವೆ. ರೈತರು ಆರ್ಥಿಕವಾಗಿ 10-15 ವರ್ಷ ಗಳಿಂದ ಹೇಗೆ ಇದ್ದರೂ ಹಾಗೆಯೇ ಇವತ್ತಿಗೂ ಇದ್ದಾರೆ. ಯಾವ ರೀತಿಯಲ್ಲೂ ಸಹ ಅವನು ಉತ್ತಮ ಸ್ಥಿತಿಯನ್ನು ಹೊಂದಿಲ್ಲ. ಅವನ ಮಕ್ಕಳು ಆ ಮಟ್ಟಕ್ಕೆ ಶಿಕ್ಷಣವನ್ನು ಮಾಡುತ್ತಿಲ್ಲ. ಅವರ ಮಕ್ಕಳು ಮತ್ತು ಮನೆಯವರನ್ನು ನೋಡಿದಾಗ ಉತ್ತಮವಾದಂಥ ಬಟ್ಟೆಗಳನ್ನು ಹಾಕಿಕೊಳ್ಳುವ ಪರಿಸ್ಥಿತಿ ರೈತರಿಗೆ ಇಲ್ಲ. ಹೀಗಾಗಿ ಒಟ್ಟಾರೆಯಾಗಿ ನನಗೆ ಏನು ಅನ್ನಿಸುತ್ತೇದೆಂದರೆ, ಕೃಷಿ ಬಜೆಟ್‌ನಲ್ಲಿ ರೈತರಿಗೆ

ಯಾವುದಾದರೂ ಹೊಸ ನಾಲ್ಕು ಯೋಜನೆಗಳ ಮೂಲಕ ರೈತರಿಗೆ ಒಳ್ಳೆಯ ಸಹಾಯ ಮಾಡಿದ್ದರೆ ಇದು ಎಲ್ಲರಿಗೂ ಒಳ್ಳೆಯ ಮತ್ತು ಉತ್ತಮವಾದ ಬಜೆಟ್ ಹಾಗು ರೈತರಿಗೆ ನೇರವಾಗಿ ಸಹಾಯ ಮಾಡಿದ್ದಾರೆಂದು ಅನ್ನಿಸುತ್ತಿತ್ತು. ರೈತರಿಗೆ 40–50 ಸಾವಿರ ರೂಪಾಯಿಗಳ ಆಸಲು ಮತ್ತು ಬಡ್ಡಿ ಮನ್ನಾ ಮಾಡುವಂಥದ್ದು ರೈತರು ಬೆಳೆದಂಥ ಆಹಾರ ಪದಾರ್ಥಗಳಿಗೆ ಒಳ್ಳೆಯ ರೇಟ್ ಕೊಟ್ಟು ಖರೀದಿಸತಕ್ಕಂಥದ್ದು ಆಗಬೇಕಾಗಿದೆ. ಏಕೆಂದರೆ ಸರ್ಕಾರ ಏನೇ ಹೇಳಬಹುದು. ನಾವು ಅದಕ್ಕೆ ಒಂದು ಸಾವಿರ ಕೋಟಿ ಹಣ ಇಟ್ಟಿದ್ದೇವೆ. ನಾವು ಅಷ್ಟರೊಳಗೆ ಆಟ ಆಡಬೇಕು ಅದನ್ನು ಮೀರಿ ಹೋಗಬಾರದು ಎಂದೇನಿಲ್ಲ. ಈ ಸರ್ಕಾರಕ್ಕೆ ಮುಖ್ಯಮಂತ್ರಿಗಳಿಗೆ ಅಧಿಕಾರವಿದೆ. ಒಂದು ಸಾವಿರ ಕೋಟಿಗೂ ಮೀರಿ ಲಕ್ಷಾಂತರ ರೈತರಿಗೆ ಸಹಾಯ ಮಾಡತಕ್ಕಂಥ ಅವಕಾಶವಿದೆ. ಇವತ್ತು ರೈತರ ಯಾವುದೇ ಒಂದು ಭಾಷಣದಲ್ಲಿ ಹೇಳುವುದೇನೆಂದರೆ, ನಾವು ಬೆಳೆದಂಥ ಬೆಳೆಗೆ ಒಳ್ಳೆಯ ದರ ಸಿಗುತ್ತದೆ ಎನ್ನುವುದು ಯಾವ ಗ್ಯಾರಂಟಿ ಎನ್ನುವ ವಿಚಾರವನ್ನೇ ಹೇಳುತ್ತಿರುತ್ತಾರೆ. ಹೀಗಾಗಿ ನಾನು ಈ ಸಂದರ್ಭದಲ್ಲಿ ಹೇಳುವುದಿಷ್ಟೆ ರೈತರು ಬೆಳೆದಂಥ ಪದಾರ್ಥಕ್ಕೆ ಒಳ್ಳೆಯ ರೇಟ್‌ನ್ನು ಕೊಡಿ. ರೈತರು ಏನು ಕೃಷಿ ಇಲಾಖೆಯ ಮೂಲಕ ಖರೀದಿಸುತ್ತಾರೆ. ಅದರ ದರ 25% ಕಡಿಮೆಯೇ ಹೊರತು 50% ಯಾವ ಕಾರಣಕ್ಕೂ ಕಡಿಮೆಯಿಲ್ಲ. ಅವರು ಖರೀದಿಸುವ ಪೈಪ್ ಇರಬಹುದು. ಮೋಟರ್ ಇರಬಹುದು. ಯಾವುದೇ ಪಂಪ್‌ಸೆಟ್ ಇರಬಹುದು. ಯಾವುದೇ ಕೃಷಿ ಪದಾರ್ಥಗಳೇ ಇರಬಹುದು. 10 ರಿಂದ 20 ಪರ್ಸೆಂಟ್ ದರ ಕಡಿಮೆ ಇರುತ್ತದೆಯೇ ಹೊರತು ನಾವು ಹೊರಗಡೆ pamplets 50% ದರ ನಾವು ನಿಮಗೆ ಕಡಿಮೆ ಕೊಡುತ್ತೇವೆಂದು ರೈತರಿಗೆ ಹೇಳಿ ಮೋಸ ಮಾಡುತ್ತಿದ್ದೇವೆ. ಹೀಗಾಗಿ ನಾನು ಈ ಒಂದು ಬಜೆಟ್ ಅಧಿವೇಶನದಲ್ಲಿ ಹೇಳುವುದಿಷ್ಟೆ 50% ಕಡಿಮೆ ದರದಲ್ಲಿ ರೈತರಿಗ ಕೊಟ್ಟು ಅವರು ಸ್ವಲ್ಪ ಮಟ್ಟಿಗಾದರೂ ಮುಂದೆ ಬರುವುದಕ್ಕೆ ಸಹಾಯ ಮಾಡಬೇಕು. ನಮ್ಮ ದೇಶದಲ್ಲಿ ತಮಗೆ ಗೊತ್ತಿರುವಂತೆ 70% ರೈತರು ಇರುವುದು. ಈ ರೀತಿ 70% ರೈತರ ದೊಡ್ಡ ಗುಂಪಿಗೆ ನಮ್ಮ ದೇಶದ ಆಹಾರ ಉತ್ಪಾದನೆಯನ್ನು ನಾವೇ ಮಾಡಿಕೊಳ್ಳುತ್ತಿದ್ದೇವೆ. ಮುಂದಿನ ವರ್ಷಗಳಲ್ಲಿ ನನಗೆ ಅನ್ನಿಸುತ್ತದೆ ಆಹಾರ ಉತ್ಪಾದನೆಯನ್ನು ನಾವು ಬೇರೆ ದೇಶದಿಂದ ಪಡೆಯತಕ್ಕಂಥ ಸನ್ನಿವೇಶ ನಮ್ಮ ದೇಶಕ್ಕೆ ಬರುತ್ತೆ ಕಾರಣ ಏನೆಂದರೆ, ನಾವು ಈಗಾಗಲೇ 120 ಕೋಟಿ ಜನಸಂಖ್ಯೆ ಇದ್ದೇವೆ. ಆದರೆ, ಹಲವಾರು ವರ್ಷಗಳಲ್ಲಿ ನಾವು 140 – 160 ಕೋಟಿ ಜನಸಂಖ್ಯೆಗೆ ನಾವು ಹೋಗುತ್ತಿದ್ದೇವೆ. ಈ ರೀತಿ ಜನಸಂಖ್ಯೆ ಹೋದಾಗ ಇನ್ನೂ 10–12 ವರ್ಷಗಳ ನಂತರ ನಮ್ಮ ದೇಶದ ಆಹಾರ ಉತ್ಪಾದನೆ ಸಾಕಾಗದೆ ಬೇರೆ

ದೇಶಗಳಿಂದ ತರಿಸಿಕೊಂಡು ತಿನ್ನತಕ್ಕಂಥ ಪರಿಸ್ಥಿತಿ. ಒರುತ್ತದೆಂದು ನನಗೆನಿಸುತ್ತದೆ. ಮಾನ್ಯ ಮಂತ್ರಿಗಳು ಇಲ್ಲಿರುವುದರಿಂದ ನಾನು ಈ ಸಂದರ್ಭದಲ್ಲಿ PWD ರಸ್ತೆಗಳ ಬಗ್ಗೆ ಹೇಳುವುದೇನೆಂದರೆ, ನನ್ನ 25 ವರ್ಷದ ರಾಜಕೀಯ ಜೀವನದಲ್ಲಿ ನಾನು ನೋಡಿರುವಂತೆ ಪ್ರತಿ ವರ್ಷ ಕೂಡ ಯಾವುದೇ ಮೇಜರ್ ಡಿಸ್ಟ್ರಿಕ್ಟ್ ರೋಡ್‌ನ ಗುಂಡಿ ಮುಚ್ಚುವಂತಹ ಕಾರ್ಯಕ್ರಮ ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಮುಗಿಯುತ್ತದೆ. ಆದರೆ, ಈ ಸಾರಿ ಮಾನ್ಯ ಮಂತ್ರಿಗಳು, 30% ನಷ್ಟು ರಸ್ತೆಗಳಿಗೆ ಗುಂಡಿ ಮುಚ್ಚುವುದಕ್ಕೆ ಕಾರ್ಯಕ್ರಮ ಕೊಟ್ಟಿದ್ದಾರೆ ಹೊರತು ಉಳಿದ 70% ರಸ್ತೆಗಳಿಗೆ ಗುಂಡಿ ಮುಚ್ಚುವ ಕಾರ್ಯಕ್ರಮ ಮಾಡಿಲ್ಲ. ಆದರೆ, ಈಗ ಕೊಟ್ಟಿದ್ದಾರೆ. ಆದರೆ, ಮಳೆಗಾಲ ಪ್ರಾರಂಭವಾಗುತ್ತದೆಂಬ ಸನ್ನಿವೇಶ ಇದೆ. ನಾವು ರಸ್ತೆಗೆ ಟಾರ್ ಆಗಲಿ ಅಥವಾ ರೀಕೋಟ್ ಹಾಕಿ ಎಂದು ನಾವು ನಿಮಗೆ ಕೇಳುವುದಿಲ್ಲ. ರಸ್ತೆಯಲ್ಲಿರುವ ಗುಂಡಿಯನ್ನು ಮುಚ್ಚಿಸಿ ಕೊಡಿ ಎಂದು ಇವತ್ತಿನ ದಿವಸ ಎಷ್ಟೋ ಹಳ್ಳಿಗಳಲ್ಲಿನ ಜನರು ನಮ್ಮನ್ನು ಕೇಳಿದ್ದಾರೆ. ಆದ್ದರಿಂದ, ಮುಂದಿನ ಯಾವುದೇ ವರ್ಷಗಳಲ್ಲಿ ಮೇಜರ್ ಡಿಸ್ಟ್ರಿಕ್ಟ್ ರಸ್ತೆಯಲ್ಲಿರುವ ದೊಡ್ಡ ದೊಡ್ಡ ಗುಂಡಿ ಮುಚ್ಚುವಂಥ ಕಾರ್ಯಕ್ರಮವನ್ನು ಮೊದಲು ಹಾಕಿ ಕೊಳ್ಳಿ ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. ನಾನು ಸೂಪರಿಂಟೆಂಡೆಂಟ್ ಇಂಜಿನಿಯರ್ ಮತ್ತು ಎಕ್ಸಿಕ್ಯೂಟಿವ್ ಇಂಜಿನೀಯರ್‌ರವರಿಗೂ ಸಹ ದೂರವಾಣಿ ಮಾಡಿ ಕೇಳಿದ್ದೇನೆ. ಆದರೆ, ಅವರು ನಮ್ಮ ಸರ್ಕಾರ 30% ರಸ್ತೆಗಳಿಗೆ ಹೇಳಿದೆ ಹೊರತು ಉಳಿದ 70% ರಸ್ತೆಗಳಿಗೆ ಹಾಗೆಯೇ ಗುಂಡಿ ಮುಚ್ಚುವುದು ಇದೆ ಎಂದು ಹೇಳಿದ್ದಾರೆ. ಮೇಜರ್ ಡಿಸ್ಟ್ರಿಕ್ಟ್ ರಸ್ತೆಗಳಿಗೋಸ್ಕರ ಶಾಸಕರಿಗೆ 1.5 ಕೋಟಿ ರೂಪಾಯಿ ಕೊಟ್ಟರೆ ಯಾವ ಕಾರಣಕ್ಕೂ ಸಹ ಇಷ್ಟು ಹಣದಿಂದ ರಸ್ತೆಯನ್ನು ಉದ್ಧಾರ ಮಾಡುವುದಕ್ಕೆ ಆಗುವುದಿಲ್ಲ ಕಳೆದ ಮೂರು ವರ್ಷದಿಂದ ನೀವು 5054 ಅಡಿಯಲ್ಲಿ ನಮಗೆ 1.5 ಕೋಟ ರೂಪಾಯಿ ಕೊಟ್ಟಿದ್ದೀರಿ, ಇವತ್ತಿನ ದಿವಸ ಪ್ರತಿ ತಾಲ್ಲೂಕಿನಲ್ಲಿ ಸುಮಾರು 250 ರಿಂದ 300 ಕಿ.ಮೀ. ರಸ್ತೆ ಇದೆ. 200 ಕಿ.ಮೀ.ಗೆ ರಸ್ತೆಗೆ ಕೇವಲ 1.5 ಕೋಟಿ ರೂಪಾಯಿ ಹಣ ಕೊಟ್ಟರೆ ಯಾವುದೇ ಕಾರಣಕ್ಕೂ ಸಹ ಮೇಜರ್ ಡಿಸ್ಟ್ರಿಕ್ಟ್ ರಸ್ತೆಯನ್ನು ಒಳ್ಳೆಯ ರಸ್ತೆಯನ್ನಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಕಳೆದ ಸಾರಿ ನಮಗೆ ನಂಜುಂಡಪ್ಪ ವರದಿಯ ಪ್ರಕಾರ ಮತ್ತು ಇನ್ನೊಂದು ಸ್ಕೀಮ್ ಅಡಿಯಲ್ಲಿ ಸ್ವಲ್ಪ ಹಣವನ್ನು ಕೊಟ್ಟಿದ್ದೀರಿ. ಆದರೆ ಏನಾಗಿದೆ ಎಂದರೆ, ಅದರ ಹಿಂದಿನ ವರ್ಷಗಳಲ್ಲಿ ಬ್ಯಾಲೆನ್ಸ್ ಇದ್ದಂಥದಕ್ಕೆ ಈ ಹಣವನ್ನು ಉಪಯೋಗಿಸಿದ್ದಾರೆ

ಇದರಿಂದ ಹೊಸ ರಸ್ತೆ ತೆಗೆದುಕೊಳ್ಳುವುದಕ್ಕೆ ಹಣ ಬರಲಿಲ್ಲ. ಆದ್ದರಿಂದ, ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳು ಸ್ವಲ್ಪ ಗಮನ ಹರಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನ. ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕಾದರೆ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕು. ಹಣ ಖರ್ಚು ಮಾಡದೆ ರಸ್ತೆಗಳು ಅಭಿವೃದ್ಧಿಯಾಗಲೆಂದರೆ ಯಾವುದೇ ಕಾರಣಕ್ಕೂ ಅಭಿವೃದ್ದಿಯಾಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿರುವ ಸ್ಟೇಟ್ ಹೈವೇ ರಸ್ತೆಗಳನ್ನು ಈ ವರ್ಷ ರೀಕೋಟ್ ಮಾಡುತ್ತೇವೆಂದು ತಾವು ಹೇಳಿರುವಂಥದ್ದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. 2012-13ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಸ್ಟೇಟ್ ಹೈವೇ ರಸ್ತೆಗಳೆಲ್ಲ ರೀಕೋಟ್ ಆಗುತ್ತವೆಂದು ನಾವು ನಿರೀಕ್ಷೆ ಮಾಡಿದ್ದೆವು. ಹಿಂದೆ ಮಾನ್ಯ ಎಸ್.ಎಂ. ಕೃಷ್ಣರವರು ಇದ್ದಂಥ ಸಂದರ್ಭದಲ್ಲಿ ಅಂದರೆ, 2003-04ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಎಲ್ಲ ಸ್ಟೇಟ್ ಹೈವೇ ರಸ್ತೆಗಳನ್ನು ರೀಕೋಟ್ ಮಾಡಿದ್ದರೆಂದು ಎಲ್ಲರೂ ಹೇಳುತ್ತಾರೆ. ಅದೇ ರೀತಿಯಲ್ಲಿ ಈಗಲೂ ಸಹ ಸ್ಟೇಟ್ ಹೈವೇ ರಸ್ತೆಗಳನ್ನು ರೀಕೋಟ್ ಮಾಡಬೇಕು ಹಾಗೆಯೇ ಒಬ್ಬೊಬ್ಬ ಶಾಸಕರಿಗೆ ಕನಿಷ್ಟ ಎಲ್ಲ ಸ್ಕೀಂನಿಂದ ಸೇರಿ ವರ್ಷಕ್ಕೆ 6 ಕೋಟಿ ಹಣ ಬಂದರೆ ನಾವು ಸ್ವಲ್ಪ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ತಾವು ಏನು ಮಾಡತ್ತಿದ್ದೀರೆದರೆ, ವಿರೋಧ ಪಕ್ಷದ ಸದಸ್ಯರಿಗೆ 1.5 ಕೋಟಿ ರೂಪಾಯಿ ಮತ್ತು ರೂಳಿಂಗ್ ಪಾರ್ಟಿಯವರಿಗೆ 25 ರಿಂದ 30 ಕೋಟಿ ರೂಪಾಯಿ ಕೊಡುವಂಥ ಕೆಲಸವನ್ನು ಮಾಡುತ್ತಿದ್ದೀರಿ. ನಾವು ರೂಲಿಂಗ್ ಪಾರ್ಟಿಯವರ ಜೊತೆ ಟೂರಗೆ ಹೋದಂಥ ಸಂದರ್ಭದಲ್ಲಿ ಈ ವರ್ಷ ನಿಮಗೆ ಎಷ್ಟು ಹಣ ಬತ್ತೆಂದು ಕೇಳಿದ್ದಕ್ಕೆ 25 ಕೋಟಿ ರೂಪಾಯಿ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಅಂದರೆ ರೂಳಿಂಗ್ ಪಾರ್ಟಿಯವರಿಗೆ 25 ಕೋಟಿ ವಿರೋಧ ಪಕ್ಷದ ಸದಸ್ಯರಿಗೆ 1.5 ಕೋಟಿ ಓಡತಕ್ಕಂಥದು ಯಾವ ನ್ಯಾಯ? ನಾನು ಸತ್ಯ ಹೇಳುತ್ತಿದ್ದೇನೆ. ನಾನು ಸುಳ್ಳು ಹೇಳುವಂಥ ವ್ಯಕ್ತಿ ಅಲ್ಲ. ಕೆಲವು ಸದಸ್ಯರಿಗೆ ಬಂದಿಲ್ಲದೆ ಇರಬಹುದು. ಆದರೆ, ಬೇರೆ ಎಷ್ಟೋ ಜನರಿಗೆ ಬಂದಿರುವುದಿಂದ ಈ ವಿಷಯ ಹೇಳುತ್ತಿದ್ದೇನೆ. ರಾಜಕೀಯದಲ್ಲಿ ಇಲ್ಲಿಯವರೆಗೆ ನಾನು ಸತ್ಯದ ಹಾದಿಯಲ್ಲಿಯೇ ಬಂದಿದ್ದೇನೆ. ಆದ್ದರಿಂದ, ನಾನು ಹೇಳುವುದೇನೆಂದರೆ ಈ ರೀತಿಯಾದ ಒಂದು ಮನೋಭಾವನೆ, ವ್ಯತ್ಯಾಸಗಳನ್ನು ಇಟ್ಟುಕೊಳ್ಳಬಾರದು. ಏಕೆಂದರೆ, ರೂಲಿಂಗ್ ಪಾರ್ಟಿಯವರಿಗೆ 25 ಕೋಟಿ ಮತ್ತು ವಿರೋಧ ಪಕ್ಷದ ಸದಸ್ಯರಿಗೆ 1.5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ರೀತಿಯಾದ ವ್ಯತ್ಯಾಸವನ್ನು ಯಾವತ್ತೂ ಸಹ ತರುವುಕಕ್ಕೆ ಹೋಗಬೇಡಿ. ಈ ವರ್ಷ ಸ್ವಲ್ಪ ಮಟ್ಟಿಗೆ ಹಣ ಬಂದಿದೆ. ಇದನ್ನು ನಾನು ಒಪ್ಪುತ್ತೇನೆ. ಏಕೆಂದರೆ. ಹಿಂದಿನ ಮೂರು ವರ್ಷಗಳದನ್ನು

ಒಟ್ಟಿಗೆ ಸೇರಿಸಿ ಈ ವರ್ಷ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸದಾನಂದಗೌಡರು ಕೊಟ್ಟಿದ್ದಾರೆ. ಈ ರಸ್ತೆಗಳ ಬಗ್ಗೆ ಹೇಳುವುದಾದರೆ, ಹಳ್ಳಿಗಳ ರಸ್ತೆಗಳ ಬಗ್ಗೆ ನಮಗೆ ಸ್ವಲ್ಪಮಟ್ಟಿಗೆ ಖುಷಿಯಾಗುವುದೆನೆಂದರೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ ಒಬ್ಬ ಶಾಸಕರಿಗೆ 30 ಕಿ.ಮೀ. ರಸ್ತೆ ಕೊಟ್ಟಿರುವಂಥದ್ದು ಸಂತೋಷಕರವಾದ ಘೋಷಣೆಯಾಗಿದೆ. ಈ ವರ್ಷ 30 ಕಿ.ಮೀ. ಜಿಲ್ಲಾ ಪಂಚಾಯತ್‌ನ ರಸ್ತೆ ಬಂದಿರುವುದು ಉತ್ತಮವಾದಂಥ ಬೆಳವಣಿಗೆ ಅಂಶ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಹಾಲಿಗೆ ನೀಡುತ್ತಿರುವ 2 ರೂಪಾಯಿ ಪ್ರೋತ್ಸಾಹ ಧನದಲ್ಲಿ ಇನ್ನೂ 50 ಕೋಟಿ ರೂಪಾಯಿ ಕೊಟ್ಟಿಲ್ಲವೆಂದು ಇವತ್ತು ಬೆಳಿಗ್ಗೆ ಮಾನ್ಯ ಸದಸ್ಯರೊಬ್ಬರು ಒಂದು ಪ್ರಶ್ನೆಯನ್ನು ಕೇಳಿದರು. ಆ ರೀತಿ ಮಾಡಬೇಡಿ ಎಂದು ಮಾನ್ಯ ಮಂತ್ರಿಯವರೆಗೆ ಹೇಳುತ್ತೇನೆ. ಏಕೆಂದರೆ, ಇವತ್ತಿನ ದಿವಸ ಬಡವರು ಹೆಚ್ಚಾಗಿ ಹೈನುಗಾರಿಕೆ ಮಾಡುತ್ತಾರೆ. ಶ್ರೀಮಂತರ್ಯಾರು ಹೈನುಗಾರಿಕೆ ಮಾಡುತ್ತಿಲ್ಲ.

ಶ್ರೀ ರೇವೂನಾಯಕ್ ಬೆಳಮಗಿ :– ಸನ್ಮಾನ್ಯ ಉಪಾಧ್ಯಕ್ಷರೆ, 920 ಕೋಟಿ ರೂಪಾಯಿಯನ್ನು ಮೂರು ವರ್ಷದಿಂದ ಹಾಲಿಗೆ ಪ್ರೋತ್ಸಾಹ ಧನ ಕೊಟ್ಟಿದ್ದೇವೆ. 50 ಕೋಟಿ ರೂಪಾಯಿಯನ್ನು ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೇನೆ. ಆದ್ದರಿಂದ ಯಾವುದೇ ರೀತಿಯ ತಾರತಮ್ಯ ಮಾಡುವುದಿಲ್ಲ.

ಶ್ರೀ ವೈ.ಎನ್. ರುದ್ರೇಶ್ ಗೌಡ :– ಮಾನ್ಯ ಉಪಾಧ್ಯಕ್ಷರೆ, ಇದನ್ನು ತಂದಿರುವ ಉದ್ದೇಶ ಏನೆಂದರೆ ಹೈನುಗಾರಿಕೆಯಲ್ಲಿ ಹೆಚ್ಚಾಗಿ ಬಡವರು ಇನ್ವಾಲ್ವ್ ಆಗಿದ್ದು, ಇವತ್ತಿನ ದಿವಸ ಬಡವರು ಹಾಲು ಕರೆಯುತ್ತಿದ್ದು ಅವರಿಗೆ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಸಹಾಯವಾಗಲೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ ಎಂಬ ಅಂಶವನ್ನು ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಇನ್ನು ಹಲವಾರು ಅಂಶಗಳಿವೆ. ಆದ್ದರಿಂದ, ನಾವು ಕೃಷಿ ಅವಲಂಬಿತರಾಗಿರುವ ರೈತರ ಬಗ್ಗೆ ನಾವು ದೀರ್ಘವಾಗಿ ಚಿಂತನೆ, ಆಲೋಚನೆ ಮಾಡುವುದಲ್ಲದೆ ಅವರನ್ನು ಹೇಗೆ ಮುಂದೆ ತರಬೇಕೆಂಬುದರ ಬಗ್ಗೆ ಕೂಡ ಚಿಂತನೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ನಮಗೆ ಖುಷಿಯಾಗುವುದೇನೆಂದರೆ, ರೈತರು ವೈಜ್ಞಾನಿಕವಾದಂಥ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಂಡು ಭೂಮಿ ಫಲವತ್ತತೆ ಮಾಡಿಕೊಳ್ಳುವುದನ್ನು ಕಲಿತಿರುವುದು ನಮಗೆ ಸಂತೋಷದ ವಿಷಯವಾಗಿದೆ. ಹೊರದೇಶದಲ್ಲಿ ರೈತರು ಯಾವ ರೀತಿಯಾಗಿ ಕೃಷಿಯನ್ನು ಮಾಡುತ್ತಿದ್ದಾರೆಯೋ. ಅದೇ ರೀತಿಯಲ್ಲಿ ಮಾಡುವುದಕ್ಕೆ ನಾವು ಕೂಡ ಕಾಪಿ

ಮಾಡಬೇಕಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ರೈತರಿಗೆ ಆಗುವ ಖರ್ಚನ್ನು ಕಡಿಮೆ ಮಾಡಿ ಆದಾಯವನ್ನು ಜಾಸ್ತಿ ಮಾಡಿ ಸ್ವಲ್ಪಮಟ್ಟಿಗೆ ಅವರಿಗೆ ಹಣ ಉಳಿಯತಕ್ಕಂಥ ವ್ಯವಸ್ಥೆ ಆಗಬೇಕೆಂಬುದು ನಮ್ಮೆಲ್ಲರ ಉದ್ದೇಶವಾಗಿದೆ. ತೋಟಗಾರಿಕೆ ಇಲಾಖೆ ಬಗ್ಗೆ ಹೇಳುವುದಾದರೆ, 50% ಸಬ್ಸಿಡಿ ಎಂದು ಹೇಳುತ್ತೀರಿ. ಆದರೆ, 20% ರಿಂದ 25% ನಷ್ಟು ವ್ಯತ್ಯಾಸ ಇದೆ ಎಂದು ನಾನು ಕೃಷಿ ಕಚೇರಿಗೆ ಹೋಗಿ ಕೇಳಿದ್ದೇನೆ. ಈ ರೀತಿಯ ವ್ಯತ್ಯಾಸ ಇವತ್ತೂ ಸಹ ಇದೆ. ನಮ್ಮ ಎಸ್ಟೇಟ್‌ಗೆ ಪೈಪ್ ಅನ್ನು ಖರೀದಿ ಮಾಡುವುದಕ್ಕೆ ಹೋಗಿದ್ದೆ. ಪೈಪ್ ಅನ್ನು ನೀವು ಜನವರಿ ತಿಂಗಳಿಂದ ಕೊಟ್ಟಿದ್ದೀರಿ. ಏಪ್ರಿಲ್, ಮೇ ತಿಂಗಳಿಂದಲೆ ರೈತರು ಉಳುಮೆ ಪ್ರಾರಂಭ ಮಾಡುತ್ತಾರೆ. ಆದ್ದರಿಂದ, ಮೇ ತಿಂಗಳಿನಲ್ಲಿಯೇ ಅದರ ಎಸ್‌ಆರ್ ರೇಟ್ ಅನ್ನು ಹೊಂದಾಣಿಕೆ ಮಾಡಿಕೊಂಡು ಮೇ ಅಥವಾ ಜೂನ್ ತಿಂಗಳಲ್ಲಿ ರೈತರಿಗೆ ಪೈಪ್ ಅನ್ನು ಕೊಡತಕ್ಕಂಥ ಕೆಲಸ ಆಗಬೇಕು. ತಾವು ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ದಾವಣಗೆರೆಯ ಕೃಷಿ ಮಂತ್ರಿಗಳನ್ನು ಎಲ್ಲರೂ ಹೊಗಳುವುದನ್ನು ನಾನು ಎಷ್ಟೋ ಕಡೆ ಕೇಳಿದ್ದೇನೆ. ಪೈಪ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಹೋದಾಗ, ನಾನೇನು ಸಬ್ಸಿಡಿ ಪಡೆದುಕೊಳ್ಳುವುದಕ್ಕೆ ಹೋಗಿಲ್ಲ. ನಮ್ಮ ತೋಟಕ್ಕೆ ಪೈಪ್‌ಲೈನ್ ಮಾಡುವ ಸಲುವಾಗಿ ಹೋದಾಗ ಅವರು ಮೊದಲು ಮೇ ಮತ್ತು ಜೂನ್ ತಿಂಗಳಲ್ಲಿ ಬರುತ್ತಿದ್ದರು. ಆದರೆ ಈ ವರ್ಷದಿಂದ ಜನವರಿ ತಿಂಗಳಲ್ಲಿ ಪೈಪಿನ ರೇಟ್‌ನ್ನು ಹೊಂದಾಣಿಕೆ ಮಾಡಿಕೊಂಡಿದ್ದೀರಿ. ನೀವು ರೈತರಿಗೆ ಯಾವ ಮಟ್ಟಿಗೆ ಸಹಾಯ ಮಾಡುತ್ತೀರೆನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ರೈತರಿಗೆ ಸಹಾಯ ಮಾಡಬೇಕು. ನಮ್ಮ ರಾಜ್ಯದಲ್ಲಿ ರೈತರು ಜಾಸ್ತಿ ಇರುವುದು ಎನ್ನುವುದರ ಬಗ್ಗೆ ನೀವು ಆಲೋಚನೆಯನ್ನು ಇಟ್ಟುಕೊಂಡರೆ ಆ ರೀತಿಯಲ್ಲಿ ಬೇಗ ಮಾಡಿಕೊಡಬೇಕು ಎನ್ನುವ ಅಂಶವನ್ನು ಹೇಳುತ್ತೇನೆ. ಅಬಕಾರಿಯಲ್ಲಿ ಹಿಂದೆ 3500 ಕೋಟಿ ರೂ.ಗಳಿಂದ ಈಗ 9500 ಕೋಟಿ ರೂ.ಗಳ ಆದಾಯ ಬಂದಿದೆ. ನಾವು ಒಂದು ಸರ್ಕಲ್‌ನ್ನು ನೋಡಿದಾಗ 35–40% commercial tax. ಬಂದಿದೆ. 4.50% road tax. ಬಂದಿದೆ. ಆಮೇಲೆ insurance tax. ನಮ್ಮಲ್ಲಿ ಬಂದಿರುವುದು. ಏಕೆಂದರೆ ಹೊಸ ಕಾರ್‌ಗಳನ್ನು purchase. ಮಾಡಿದಾಗ. ಅದಕ್ಕೆ ಕೊಡಬೇಕಾದ ಟ್ಯಾಕ್ಸ್ ಬಂದಿದೆ. ಇದೆಲ್ಲಾ ಸೇರಿದ್ದು ನೋಡಿದರೆ ನಮಗೆ ಹಣ ಬರುವುದು ಕಡಿಮೆ ಏನೂ ಆಗಿಲ್ಲ. ಕರ್ನಾಟಕ ರಾಜ್ಯದಲ್ಲಿ ಹೋದ ವರ್ಷ 84000 ಕೋಟಿ ರೂ.ಗಳು ಇತ್ತು. ಆದರೆ ಈ ವರ್ಷ 1.02 ಲಕ್ಷ ಕೋಟಿ ರೂ.ಗಳ ಹಣ ಬಂದಿದೆ. ಈ ರೀತಿ ಹಣ

ಬರುತ್ತಿರಬೇಕಾದರೆ ನಾವು ಸ್ವಲ್ಪ ಮಟ್ಟಿಗೆ ಉದಾರವಾಗಿ ರೈತರಿಗೆ ಸಹಾಯ ಮಾಡುವುದನ್ನು ಮಾಡಬೇಕಾಗುತ್ತದೆ. ಈಗಾಗಲೇ ಮಾನ್ಯ ಶಿವಲಿಂಗೇಗೌಡರು ಅವರ ಭಾಷಣದಲ್ಲಿ ಮಾತನಾಡಿದರು. ನಾವು ಎಕ್ಸೈಜ್‌ನಲ್ಲಿ 22% ಟ್ಯಾಕ್ಸ್ ಹಾಕುತ್ತೇವೆ. ಸರ್ಕಾರ ಯಾವುದಕ್ಕೂ 22–30% ಟ್ಯಾಕ್ಸ್ ಹಾಕುವುದಿಲ್ಲ. ಕನಿಷ್ಠ 10% ಹಾಕುವುದನ್ನು ಕೇಳಿದ್ದೇವೆ. ರೈತರು ಮತ್ತು ಬಡ ಜನರಿಗೆ 22% ಟ್ಯಾಕ್ಸ್ ದರವನ್ನು ವಿಧಿಸುವುದು ತಪ್ಪು. ಸರ್ಕಾರಕ್ಕೆ 10,000–11,000 ಕೋಟಿ ರೂ.ಗಳು ಬರಲಿ ಇನ್ನು ಎರಡು ವರ್ಷವಾದ ಮೇಲೆ 13,000 ಕೋಟಿ ರೂ.ಗಳು ಬರಬಹುದು. ಅದನ್ನು ನಿರೀಕ್ಷೆ ಮಾಡುವುದು ತಪ್ಪು. ಏಕೆಂದರೆ, ಕುಡಿಯುವುದು ಮೊದಲನೆಯ ತಪ್ಪು ಎನ್ನುವ ಒಂದು ಅಂಶವನ್ನು ನಿಮ್ಮ ಗಮನಕ್ಕೆ ತರುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿರುತ್ತೀರಿ. ಒಟ್ಟಾರೆ ಈ ಬಜೆಟ್‌ನ್ನು ನೋಡಿದಾಗ ರೈತರ ಪರವಾಗಿ ಈ ಬಜೆಟ್ ಇಲ್ಲ ಅವರ ವಿರೋಧವಾಗಿದೆ. ಎಲ್ಲಾ ರಂಗದಲ್ಲಿಯೂ ಸಹ ಈ ಬಜೆಟ್ ವಿರೋಧವಾಗಿದೆ ಎಂದು ನನಗನಿಸುತ್ತದೆ. ಒಟ್ಟಾರೆಯಾಗಿ ಇನ್ನೂ ಉತ್ತಮವಾದ ಬಜೆಟ್‌ನ್ನು ಕೊಡಬಹುದಾಗಿತ್ತು. ಆದರೆ ಇದು ಉತ್ತಮವಾದಂಥ ಬಜೆಟೇ ಎಂದು ನಾನು ಜನರಲ್ಲಿ ವಿಚಾರಿಸಿದ್ದೇನೆ, ನನ್ನ ಕ್ಷೇತ್ರದಲ್ಲಿಯೂ ವಿಚಾರಿಸಿದ್ದೇನೆ ಮತ್ತು ಪಂಡಿತರನ್ನು ಕೇಳಿದ್ದೇನೆ. ಅವರು ಹೇಳಿರುವಂಥ ವಿಚಾರದಂತೆ ಇದು ಉತ್ತಮವಾದ ಬಜೆಟ್ ಆಗಲಿಲ್ಲ. ನಾವು ಒಂದು ಎತ್ತರಕ್ಕೆ ನಿರೀಕ್ಷೆ ಮಾಡಿಕೊಂಡಿದ್ದು ಆ ಎತ್ತರಕ್ಕೆ ಈ ಬಜೆಟ್ ಇಲ್ಲ. ಈ ಬಜೆಟ್ ಇರುವುದು ಮೀಡಿಯಮ್ ಆಗಿದೆ ಎನ್ನುವಂಥ ಒಂದು ಅಂಶವನ್ನು ವ್ಯಕ್ತಪಡಿಸಿದರು. ಏಕೆಂದರೆ ಇದು ನನ್ನ ನಿರೀಕ್ಷೆ ಅಲ್ಲ, ಬೇರೆಯವರು ಹೇಳಿದ ನಿರೀಕ್ಷೆಯನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಹಾಗಾಗಿ ಈ ಒಂದು ಸಂದರ್ಭದಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) :– ಕಾಲಿಂಗ್ ಅಟೆನಷನ್ ತೆಗೆದುಕೊಳ್ಳಿ ಸರ್. ನಾವು ಬೆಳಿಗ್ಗೆಯಿಂದ ಕಾಯುತ್ತಿದ್ದೇವೆ.

ಉಪಾಧ್ಯಕ್ಷರು :– ನಂತರ ತೆಗೆದುಕೊಳ್ಳೋಣ.

ಶ್ರೀ ಸುನಿಲ್ ವಿ. ಹೆಗಡೆ (ಹಳಿಯಾಳ) :– ಮಾನ್ಯ ಉಪಾಧ್ಯಕ್ಷರೆ, ಈ ವರ್ಷದ ಬಜೆಟ್‌ನ ಒಟ್ಟು ಗಾತ್ರ 1.03 ಲಕ್ಷ ಕೋಟಿ ರೂ.ಗಳು ಆಗಿದೆ. ಇದು ಸಂತೋಷದ ವಿಷಯ. ಆದರೆ ಆದರ ಖರ್ಚಿನ ವಿವರದ ಸರಿಯಾದ ನಿರ್ವಹಣೆ ನೋಡಿದರೆ ಅಷ್ಟು ಸಮಂಜಸವಾಗಿ ಆಗಲಿಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ಯಾವ ಭಾಗದಿಂದ ನಾವು ಸಂಪನ್ಮೂಲವನ್ನು

ಕ್ರೋಡೀಕರಣ ಮಾಡಬೇಕು, ಯಾವ ಸೆಕ್ಟರ್‌ಗಳಿಗೆ ನಾವು ಅತೀ ಹೆಚ್ಚಿನ ಒತ್ತನ್ನು ಕೊಡಬೇಕು ಅದನ್ನು ಕೊಡಲಿಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ಒಟ್ಟಾರೆ ನಿರ್ವಹಣೆಯಲ್ಲಿ ಕೃಷಿ, ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿ ಸೇರಿ ಕೇವಲ 18 ಪೈಸೆ ಇಟ್ಟಿರುತ್ತೀರಿ. ನೀರು ಪೂರೈಕೆಗೆ ನೀವು ಕೇವಲ 2 ಪೈಸೆ ಇಟ್ಟಿದ್ದೀರಿ. ಆರೋಗ್ಯಕ್ಕೆ 4 ಪೈಸೆ ಇಟ್ಟಿದ್ದೀರಿ. ಶಿಕ್ಷಣಕ್ಕೆ 14 ಪೈಸೆ ಇಟ್ಟಿದ್ದೀರಿ ಇದು ಒಳ್ಳೆಯದು. ಆದರೆ ಆರೋಗ್ಯ ಮತ್ತು ಕುಡಿಯಲಿಕ್ಕೆ ನೀರು, ಕೃಷಿ ಮತ್ತು ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿ ಈ ಸೆಕ್ಟರ್‌ಗಳಿಗೆ ಅತೀ ಹೆಚ್ಚಿನ ರೀತಿಯಲ್ಲಿ ದುಡ್ಡನ್ನು ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಏಕೆಂದರೆ ಈ ಸೆಕ್ಟರ್‌ಗಳು ಸರ್ಕಾರದ ಮೇಲೆ ಆವಲಂಬಿತವಾಗಿರುವಂಥ ವ್ಯವಸ್ಥೆಗಳಾಗಿವೆ. ಯಾವುದೇ ರೀತಿಯಿಂದ ವೈಯಕ್ತಿಕವಾಗಿ ಯಾರು ಇದನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲ. ಇಂತಹ ಒಂದು ಸಂದರ್ಭದಲ್ಲಿ ಸರ್ಕಾರ ಈ ದಿಸೆಯಲ್ಲಿ ವಿಚಾರ ಮಾಡದೆ 1.03 ಲಕ್ಷ ಕೋಟಿ ರೂ.ಗಳ ಬಜೆಟ್ ಗಾತ್ರವನ್ನು ಹೇಳಿದ್ದಾರೆ. ವಿನಾ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಯಾವ್ಯಾವ ಸೆಕ್ಟರ್‌ಗಳಿಗೆ ಕೊಡಬೇಕಾಗಿತ್ತೊ ಅದನ್ನು ಕೊಡಲಿಲ್ಲ ಎನ್ನುವುದು ಒಂದು ದುರ್ದೈವದ ಸಂಗತಿ. ಎರಡನೆಯದಾಗಿ ಕರ್ನಾಟಕ ನಾಗರೀಕ ಸೇವಾ ಖಾತ್ರಿ ಯೋಜನೆ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಸರ್ಕಾರಕ್ಕೆ ಏನು ಕೇಳುತ್ತಿದ್ದೇನೆಂದರೆ, ಕರ್ನಾಟಕ ನಾಗರಿಕ ಸೇವಾ ಖಾತ್ರಿ ಯೋಜನೆ ತಂದಿರುವುದು ಬಹಳ ಉಪಯುಕ್ತವಾದುದೆಂದು ನಾನು ಒಪ್ಪುತ್ತೇನೆ. ಆದರೆ ಅಲ್ಲಿ ಸಮರ್ಪಕವಾದ ರೀತಿಯಲ್ಲಿ ಅಧಿಕಾರಿಗಳು ಇಲ್ಲ. ಈ ಇಲಾಖೆಯಲ್ಲಿ ಸಿಬ್ಬಂದಿಗಳು ಇಲ್ಲ. ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳು ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ಕರ್ನಾಟಕ ನಾಗರೀಕ ಸೇವಾ ಖಾತ್ರಿ ಯೋಜನೆ ಜನರ ಮತ್ತು ಅಧಿಕಾರಿಗಳ ಹಾಗೂ ಸರ್ಕಾರದ ನಡುವೆ ಮುಂದಿನ ದಿವಸಗಳಲ್ಲಿ ದೊಡ್ಡ ಸಂಘರ್ಷ ತಂದಿಡುವಂಥ ಸಂದರ್ಭ ಬಂದು ಒದಗಬಹುದು. ಸಿಬ್ಬಂದಿಗಳ ಕೊರತೆ ಮತ್ತು ಅಧಿಕಾರಿಗಳ ಕೊರತೆ ಇದೆ. ಇವತ್ತು ಗ್ರಾಮ ಪಂಚಾಯಿತಿಗೆ ಹೋದರೆ ಒಬ್ಬರು ಪಿ.ಡಿ.ಒ.ಗೆ 4–5 ಪಂಚಾಯಿತಿಗಳು, ಒಬ್ಬ ಕಾರ್ಯದರ್ಶಿಗೆ 3–4 ಪಂಚಾಯಿತಿಗಳು ಬರುತ್ತವೆ. ಜೋಯಿಡಾ ತಾಲ್ಲೂಕಿಗೆ ಮೂರು ಜನ ಶಿರಸ್ತೇದಾರರು ಬೇಕು. ಅಲ್ಲಿ ಇರುವುದು ಒಬ್ಬರು. ಶಾನುಭೋಗರಿಗೆ 3–4 ಹೋಬಳಿಗಳು ಇವೆ. ಇಂತಹ ಒಂದು ಸಂದರ್ಭದಲ್ಲಿ ನಾಗರಕ ಸೇವಾ ಖಾತ್ರಿ ಯೋಜನೆಗೆ ಒಂದು ದಿನಾಂಕವನ್ನು ಫಿಕ್ಸ್ ಮಾಡಿ 15–30 ದಿವಸದೊಳಗೆ ಕೊಡಬೇಕೆಂದು ಹೇಳಿ, ಯಾವುದೇ ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು

ಕೊಡುವುದಕ್ಕೆ ಸಾಧ್ಯವಾಗುವುದಕ್ಕಾಗುವುದಿಲ್ಲ. ಇದು ಮುಂದಿನ ದಿವಸಗಳಲ್ಲಿ ಸರ್ಕಾರಕ್ಕೆ ಸಂಕಷ್ಟ ತಂದಿಡುವ ಸಂದರ್ಭ ಇರುವುದರಿಂದ ಸರ್ಕಾರ ದಯವಿಟ್ಟು ಈ ದಿಶೆಯಲ್ಲಿ ವಿಚಾರ ಮಾಡಿ ಆದಷ್ಟು ಬೇಗ ಸಿಬ್ಬಂದಿಗಳ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಈ ವಿಷಯಕ್ಕೆ ಪೂರಕವಾಗಿ ಪ್ರಸ್ತಾಪ ಮಾಡಬೇಕಾಗಿತ್ತು. ಅದನ್ನು ಮಾಡದಿರುವುದು ಒಂದು ದುರ್ದೈವದ ಸಂಗತಿ ಇರುವುದರಿಂದ ಮುಂದಿನ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಇದನ್ನು ಹಾಕಿಕೊಂಡು ಸರ್ಕಾರ ಈ ದಿಸೆಯಲ್ಲಿ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಇಂಧನ ಇಲಾಖೆಯ ಬಗ್ಗೆ ನಮ್ಮ ಕ್ಷೇತ್ರದ ಮಟ್ಟಿಗೆ ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನಾವು ಇಡೀ ರಾಜ್ಯಕ್ಕೆ ಕದ್ರಾ ಜಲಾಶಯದಿಂದ ಇರಲಿ. ಕೈಗಾ ಪ್ರಾಜೆಕ್ಟ್‌ನಿಂದ ಇರಲಿ. ಸೂಪಾ ಜಲಾಶಯದಿಂದ ಇರಲಿ, ಅಂಬಿಕಾ ಜಲಾಶಯದಿಂದ ಇರಲಿ, ನಮ್ಮಲ್ಲಿ ಶರಾವತಿ ಕೂಡ ಒಂದು ಪಾರ್ಟ್ ಬರುತ್ತದೆ. ಇಷ್ಟೆಲ್ಲಾ ರಾಜ್ಯಕ್ಕೆ ನಾವು ಎಲೆಕ್ಟ್ರಿಸಿಟಿ ಕೊಟ್ಟರೂ ಸಹ ಉತ್ತರ ಕನ್ನಡ ಜಿಲ್ಲೆಯಲ್ಲಿ ಪವರ್ ಕಟ್ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ಎರಡನೆಯದಾಗಿ ಯಾವುದೇ ರೀತಿಯ ಟಿ.ಸಿ.ಗಳು ಸುಟ್ಟರೆ ಇವತ್ತಿನ ದಿವಸ ನಮ್ಮಲ್ಲಿ ಶಿರಸಿ ಮತ್ತು ಕಾರವಾರಕ್ಕೆ ಡಿವಿಷನ್‌ಗಳು ಇವೆ. ಯಾವಾಗಲೂ ಕೇಳಿದರೂ ಸಹ ಟಿ.ಸಿ.ಗಳ ಲಭ್ಯತೆ ಇರುವುದಿಲ್ಲ ಮತ್ತು ಸಿಗುವುದಿಲ್ಲ. ಜೋಯಿಡಾ ತಾಲ್ಲೂಕಿನಲ್ಲಿ 6 ತಿಂಗಳಾಯಿತು ಟಿ.ಸಿ.ಗಳು ಹೋಗಿ ಸಿಗುತ್ತಿಲ್ಲ. ಹೊಸದಾಗಿ ಲೈನ್‌ಗಳು ಇಲ್ಲ. ರಾಜೀವ್‌ಗಾಂಧಿ ಕುಟೀರ ಯೋಜನೆಗಳಿಗೆ ಮೂರು ವರ್ಷದ ಹಿಂದೆ ಅದಂಥ ಕೆಲಸಗಳ ನಂತರ ಒಂದು ಕೆಲಸವೂ ಆಗಲಿಲ್ಲ. ಇಂಟೀರಿಯರ್ ಭಾಗದಲ್ಲಿ ಸೂಪಾ ಡ್ಯಾಂ ಇದೆ. ಆದರ ಕೆಳಗಡೆಯ ಪ್ರದೇಶದಲ್ಲಿ ಇವತ್ತಿನವರೆಗೆ ಎಲೆಕ್ಟ್ರಿಸಿಟಿ ಇಲ್ಲ. ಜೋಯಿಡಾ ತಾಲ್ಲುಕಿನ 130 ಹಳ್ಳಿಗಳಿಗೆ ಕನಿಷ್ಠ ಪಕ್ಷದ ಎಲೆಕ್ಟ್ರಿಸಿಟಿಯ ಒಂದು ವ್ಯವಸ್ಥೆ ಇಲ್ಲ. ಇಂತಹ ಒಂದು ಸನ್ನಿವೇಶದಲ್ಲಿ ಇಂಧನ ಇಲಾಖೆಗೆ ಬಹಳ ಸಲ ನಾನು ಹೇಳಿದ್ದೇನೆ. ಹಳಿಯಾಳ, ದಾಂಡೇಲಿ ಮತ್ತು ಜೋಯಿಡಾ ಸೇರಿ ಒಂದು Executive Engineer Office ಮಾಡಿ ಕೊಡಿ. ಜನರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದ್ದಕ್ಕಾಗುತ್ತದೆ ಮತ್ತು ಟಿ.ಸಿ.ಗಳನ್ನು ನೋಡಿಕೊಳ್ಳುವುದಕ್ಕೆ ಆಗುತ್ತದೆ. ಅದಕ್ಕೆ ಸಂಬಂಧಪಟ್ಟ ಹಣ ಬರುತ್ತದೆಂದು ಹೇಳಿದ್ದೇನೆ. ಇದನ್ನು ಹೆಸ್ಕಾಂ ಸಭೆಯಲ್ಲಿ ಹೇಳಿದ್ದೇನೆ. ಬೆಂಗಳೂರು ಕಚೇರಿಯಲ್ಲಿ ಮಂಜೂರು ಆದರೂ ಸಹ ಆ ಒಂದು ಆಫೀಸ್ ಆಗಲಿಲ್ಲ. ಸಾಧಾರಣವಾಗಿ ಆಡಿಷನಲ್ ಟಿ.ಸಿ. 63 ಕೆವಿ ಯನ್ನು 100 ಕೆವಿ ಮಾಡಲಿಕ್ಕೆ 25 ಕೆವಿ ಇರುವುದನ್ನು 63 ಕೆವಿ ಮಾಡಲಿಕ್ಕೆ ಮತ್ತು ಯಾವ ಇನ್‌ವೆಸ್ಟ್‌ಮೆಂಟ್ ಮಾಡಿ ಟಿ.ಸಿ.ಗಳನ್ನು ಕೊಡುವ

ಒಂದು ವ್ಯವಸ್ಥೆ ನಮ್ಮ ಕೆ.ಇ..ಬಿ.ಯಲ್ಲಿ ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ಇಂಧನ ಇಲಾಖೆಯಿಂದ ನಾವು ಬಹಳಷ್ಟು ವಿಚಾರಗಳನ್ನು ಮಾಡಿದರೂ ಯಾವುದೇ ಒಂದು ರೀತಿಯಿಂದ ಆಗುತ್ತಿಲ್ಲ. ಇವತ್ತಿನ ದಿವಸ ನಮ್ಮ ಜೋಯಿಡಾ ತಾಲ್ಲೂಕಿನಲ್ಲಿ ಕನಿಷ್ಟ ಪಕ್ಷ 800 ಮೆಗಾವ್ಯಾಟ್‌ಗಿಂತ ಹೆಚ್ಚಿನ ಗಾಳಿ ವಿದ್ಯುತ್ ಆಗುತ್ತದೆಂದು ಹೇಳಿ ಮೂರು ವರ್ಷದ ಹಿಂದೆ ಸರ್ವೆ ಮಾಡಿದ್ದಾರೆ. ಗಾಳಿ ವಿದ್ಯುತ್ ಯೋಜನೆ ಮಾಡಿಕೊಂಡು ಅದರ ಮುಖಾಂತರ ಹೆಚ್ಚಿನ ವಿದ್ಯುತ್‌ಗೆ ಒಂದು ಅವಕಾಶ ಇದ್ದರೂ ಕೂಡ ಇದುವರೆಗೆ ಸರ್ಕಾರ ಯಾವುದೇ ರೀತಿಯ ಪ್ರಯತ್ನ ಮಾಡಲಿಲ್ಲ ಎನುವುದು ಒಂದು ದುರ್ದೈವದ ಸಂಗತಿಯಾಗಿದೆ. ನಮ್ಮಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಕೆಲಸ ಮಾಡುತ್ತಾರೆ. ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಸನ್ಮಾನ್ಯ ಬೆಲ್ಲದ್‌ರವರ ಅಧ್ಯಕ್ಷತೆಯಲ್ಲಿ ಮಾಡುತ್ತಾರೆ. ಆದರೆ ಯಾವುದೇ ಪ್ರಾಧಿಕಾರಕ್ಕೆ ಯಾವುದೇ ಮಂಡಳಿಗಳಿಗೆ ಸಂಪೂರ್ಣವಾದ ಹಣ ಕೊಡುವುದಿಲ್ಲ. ಅದು ಜೋಯಿಡಾ ಮತ್ತು ಹಳಿಯಾಳ ತಾಲ್ಲೂಕುಗಳು ಮಲೆನಾಡಿನ ಕಾರವಾರ ಜಿಲ್ಲೆ ಯಾವುದೇ ತಾಲ್ಲೂಕುಗಳಿಗೆ ಸಮರ್ಪಕವಾದ ರೀತಿಯಲ್ಲಿ ಯಾವುದೇ ದುಡ್ಡು ಬರುತ್ತಿಲ್ಲ. KEB ಬಗ್ಗೆ ಮತ್ತೊಂದು ವಿಷಯ ಹೇಳಬೇಕಾದರೆ, ಇವತ್ತು ವಿಶೇಷವಾಗಿ ಕುಡಿಯುವ ನೀರಿಗೆ task force ನಲ್ಲಿ ಸರ್ಕಾರ ದುಡ್ಡು ಕೊಡುತ್ತಿದೆ ಆದರೆ ನಾವು task force ನಲ್ಲಿ ಅಥವಾ ಜಿಲ್ಲಾ ಪಂಚಾಯಿತಿ ಮೂಲಕವೋ, MLA grant ಮೂಲಕವೋ ಬೋರ್ ಕೊರೆದರೆ, ಆ ಬೋರ್‌ಗೆ electricity connection ಕೊಡುವುದಕ್ಕೆ KEB ಯವರು 1 ಲಕ್ಷ, 2 ಲಕ್ಷ deposit ಕೇಳುತ್ತಾರೆ. ಕುಡಿಯುವ ನೀರು ಸಾರ್ವಜನಿಕವಾಗಿ ಕೊಡುವಂಥದ್ದು, ಇಂತಹ ಸಂದರ್ಭದಲ್ಲಿ ಸರ್ಕಾರ ಕುಡಿಯುವ ನೀರಿಗೆ ಕೊಡುವ T.C. ಗಳಿಗೆ ಯಾವುದೇ ರೀತಿಯಿಂದ ಯಾವುದೇ deposit ಗಳನ್ನು ತೆಗೆದುಕೊಳ್ಳುವುದಕ್ಕೆ ಆದೇಶಗಳನ್ನು ಮಾಡಬಾರದು. free ಆಗಿ T.C. ಗಳನ್ನು ಕುಡಿಯುವ ನೀರಿಗೆ ಕೊಡುವಂತಹ ವ್ಯವಸ್ಥೆ ಸರ್ಕಾರದಿಂದ ಆಗಬೇಕು ಎನ್ನುವುದು ನನ್ನ ಅಭಿಪ್ರಾಯ. ಮತ್ತೊಂದು ವಿಚಾರವೇನೆಂದರೆ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ನಮ್ಮ ಜಿಲ್ಲೆಗೆ ಬಂದಾಗ, ಜಿಲ್ಲೆಯ ಅಭಿವೃದ್ಧಿಗಾಗಿ 100 ಕೋಟಿ ರೂಪಾಯಿಗಳ ಪ್ಯಾಕೇಜ್ ಅನ್ನು ಘೋಷಣೆ ಮಾಡಿದ್ದರು. ಸನ್ಮಾನ್ಯ ಉಸ್ತುವಾರಿ ಸಚಿವರೂ ಆದರ ಬಗ್ಗೆ movement ಮಾಡಲಿಲ್ಲ. ಯಾವುದೇ MLA ಗಳಿಗೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಯಾವುದೇ ಜಿಲ್ಲಾ ಪಂಚಾಯತ್ member ಗೂ ವಿಶ್ವಾಸ ತೆಗೆದುಕೊಂಡಿಲ್ಲ.

ಈ ಸಾರಿ ಬಜೆಟ್‌ನಲ್ಲಿ ಅದರ ಬಗ್ಗೆ ಚಕಾರವೂ ಇಲ್ಲ. ಏಕೆಂದರೆ ಮುಂದಿನ ದಿನಗಳಲ್ಲಿ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು announce ಮಾಡಿದಂತೆ 100 ಕೋಟಿ ರೂಪಾಯಿ ಬಂದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿತ್ತು. ಅದು ಈ ಬಜೆಟ್‌ನಲ್ಲಿ ತರಲಿಕ್ಕೆ ಸಾಧ್ಯವಾಗಲಿಲ್ಲ. ಇದು ಒಂದು ದುರ್ದೈವದ ಸಂಗತಿ ಎಂದೇ ಹೇಳಬೇಕಾಗುತ್ತದೆ. ಅದೇ ರೀತಿ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಬೆಳಗಾಂ ಅಧಿವೇಶನದಲ್ಲಿ ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಈ ಕಾಲುಸಂಕಗಳ ನಿರ್ಮಾಣಕ್ಕಾಗಿ ಉತ್ತರ ಕನ್ನಡ ಜಿಲ್ಲೆಗೆ 15 ಕೋಟಿ ರೂಪಾಯಿಗಳನ್ನು ನಾನು ಕೊಡುತ್ತೇನೆ ಎಂದು ಹೇಳಿದರು. ಆದರೆ 15 ಕೋಟಿ ರೂಪಾಯಿ ಯಾವಾಗ ಬಂದಿತು ? ಎಲ್ಲಿ ಬಂತು ? ಎಲ್ಲಿ ಕಾಲುಸಂಕಗಳು ಆಯಿತು ? ಏಕೆಂದರೆ ಜೋಯಿಡಾ ತಾಲ್ಲೂಕಿನಲ್ಲಿ ಇವತ್ತಿನ ದಿನ ಬಹಳಷ್ಟು ಜಾಗಗಳಲ್ಲಿ ಮಳೆಗಾಲದಲ್ಲಿ ಗರ್ಭಿಣಿ ಸ್ತ್ರೀಯರು ಊರಿಗೆ ಹೋಗುವಂತಹ ಪರಿಸ್ಥಿತಿಯಲ್ಲಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಕ್ಕಳು ಶಾಲೆಗೆ ಬರುವಂತಹ ಪರಿಸ್ಥಿತಿಯಲ್ಲಿರುವುದಿಲ್ಲ. ಮಕ್ಕಳಿಗೆ food ತಲುಪುವುದಿಲ್ಲ. ಇಂತಹ ಸಂದರ್ಭದಲ್ಲಿ ಅಲ್ಲಿ ಕಾಲುಸಂಕಗಳ ಅವಶ್ಯಕತೆ ಇದೆ. ಅದಕ್ಕೆ ಇವತ್ತಿನವರೆಗೂ ಸರ್ಕಾರದಿಂದ ಯಾವುದೇ ರೀತಿಯ ದುಡ್ಡು release ಆಗಿಲ್ಲ ಈ ಬಜೆಟ್‌ನಲ್ಲಿಯೂ ಸಹ ಯಾವ ರೀತಿ ಅವಕಾಶ ಕೊಟ್ಟಿದ್ದಾರೆ ಎಂದು ಸ್ಪಷ್ಟವಾದ ನಿರ್ದೇಶನಗಳು ಬಾರದೇ ಇರುವುದರಿಂದ ನಿಜವಾಗಿಯೂ ಇದು ಖೇದಕರವಾದ ವಿಷಯ.

ರಸ್ತೆಗಳ ಬಗ್ಗೆ ಹೇಳುವುದಾದರೆ, ನಮ್ಮ ಜೋಯಿಡಾ ಮತ್ತು ಹಳಿಯಾಳ ತಾಲ್ಲೂಕುಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮೀಣ ಭಾಗಗಳನ್ನು ಹೊಂದಿವೆ. ಗ್ರಾಮೀಣ ಭಾಗದಲ್ಲಿ, ಪ್ರತಿಯೊಂದು ಗ್ರಾಮದಲ್ಲಿ ನೀವು ಹೋದರೆ ತಾಲ್ಲೂಕು ಆಫೀಸ್ ರಸ್ತೆ ಒಳ್ಳೆಯ ರಸ್ತೆಯಿಂದ ಇರುತ್ತವೆ. ಜಿಲ್ಲಾ ರಸ್ತೆಗೆ ಹೋಗುತ್ತವೆ. ಗ್ರಾಮಗಳಲ್ಲಿರುವ ರಸ್ತೆಗಳಲ್ಲಿ ಮಳೆಗಾಲದಲ್ಲಿ ನಡೆಯುವುದಕ್ಕಾಗುವುದಿಲ್ಲ. ಈ ರೀತಿ ಪರಿಸ್ಥಿತಿಗೆ ನಾನು ಹಲವಾರು ಬಾರಿ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಸುವರ್ಣ ಗ್ರಾಮ ಯೋಜನೆ ಒಳ್ಳೇಯದಾಗಿತ್ತು ಆ ಯೋಜನೆಯು ಬಂದ್ ಆಗಿದೆ. ಇವತ್ತು 1,000 ಸುವರ್ಣ ಗ್ರಾಮಗಳಿಗೆ 400 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

ನಿಜವಾಗಿಯೂ 1,000 ಸುವರ್ಣ ಗ್ರಾಮಗಳಿಗೆ 2,000 ಕೋಟಿ ರೂಪಾಯಿಗಳನ್ನು ಕೊಡುವಂತಹ ಅವಶ್ಯಕತೆ ಇದೆ. ಏಕೆಂದರೆ ಗ್ರಾಮಗಳ ಅಭಿವೃದ್ಧಿಯಾಗಬೇಕಾಗಿದೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಯಡಿಯೂರಪ್ಪನವರು PMGSY ನಲ್ಲಿ ಪ್ರತಿ ವರ್ಷ 20 ಕಿ.ಮೀ. ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು ಒಂದು ವರ್ಷ ಮಾತ್ರ 20 ಕಿ.ಮೀ. ತೆಗೆದುಕೊಂಡರು. ಅದರ ನಂತರ ಇಲ್ಲಿಯವರೆಗೂ ತೆಗೆದುಕೊಂಡಿಲ್ಲ. ಈ ಬಾರಿಯು ಬಜೆಟ್‌ನಲ್ಲಿ 30 ಕಿ.ಮೀ. ಗ್ರಾಮೀಣ ರಸ್ತೆಯನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದನ್ನು ನಿಜವಾಗಿಯೂ ನಾವು ಸ್ವಾಗತ ಮಾಡುತ್ತೇವೆ 30. ಕಿ.ಮೀ. ಕೂಡಲೇ ತೆಗೆದುಕೊಂಡು ಗ್ರಾಮೀಣ ಭಾಗದ ಜನರಿಗೆ ಅನುಕೂಲ ಮಾಡಿಕೊಡುವಂತಹ ನಿಟ್ಟಿನಲ್ಲಿ ಕೆಲಸ ಆಗಬೇಕು. PWD ಗೆ ಸಂಬಂಧಪಟ್ಟಂತೆ ಸನ್ಮಾನ್ಯ ಉದಾಸಿಯವರು ಜೋಯಿಡಾಗೆ ಬಂದಿದ್ದರು. ನಮ್ಮಲ್ಲಿ ಅತಿ ಮುಖ್ಯವಾಗಿ ನನಗನಿಸುತ್ತದೆ. ನಾನು MLA ಆದ ನಂತರ 20 ಬಾರಿ strike ಮಾಡಿರಬೇಕು. ಅದಕ್ಕಿಂತ ಮೊದಲು ಎಷ್ಟು ಬಾರಿ ಆಗಿದೆ ಎನ್ನವುದು ಗೊತಿಲ್ಲ. ಕುಂಡಲ ಸೇತುವೆ, ಗಂಗೋಡ ರಸ್ತೆ, ಮಾಲಂಬ ರಸ್ತೆ ಮೂರು ರಸ್ತೆಗಳ ಬಗ್ಗೆ ಪ್ರತಿ ಸಲ strike ಮಾಡುತ್ತಾರೆ. ಮಾನ್ಯ ಉದಾಸಿಯವರು ವೇದಿಕೆ ಮೇಲೆ ಅಶ್ವಾಸನೆ ಕೊಟ್ಟು ಬಂದಿದ್ದರು. ಆದಾದ ನಂತರ ಎರಡು ಬಜೆಟ್ ಆಯಿತು. ಇದು ಮೂರನೇಯ ಬಟೆಜ್. ಆದರೆ ಇವತ್ತಿನವರೆಗೂ ಆ ರಸ್ತೆಗಳ ಬಗ್ಗೆ, ಸೇತುವೆಗಳ ವಿಷಯಗಳು ಬರುತ್ತಿಲ್ಲ. ಅನಿಶಿಕುಂಬಾರ ರಸ್ತೆ ಇವತ್ತಿನ ದಿನ ಇಡೀ ಬೆಳಗಾಂನಿಂದ ಕಾರವಾರಕ್ಕೆ ಹೋಗುವುದಕ್ಕೆ ಜೋಯಿಡಾದವರು ಕಾರವಾರ ಜಿಲ್ಲಾ ಕ್ಷೇತ್ರಕ್ಕೆ ಹೋಗುವುದಕ್ಕೆ, ಹಳಿಯಾಳ, ದಾಂಡೇಲಿಯವರು ಜಿಲ್ಲಾ ಕ್ಷೇತ್ರಕ್ಕೆ ಹೋಗುವುದಕ್ಕೆ ಇರುವಂತಹ ಪ್ರಮುಖವಾದಂತಹ ರಸ್ತೆ ಕೇವಲ 20 ಕಿ.ಮೀ. ರಸ್ತೆ ಮಾಡಬೇಕು. ನಾನು 4 ವರ್ಷಗಳಿಂದ ಅಂದರೆ MLA ಆದಾಗಿನಿಂದಲೂ ಹೇಳುತ್ತಿದ್ದೇನೆ. ಆದರೆ ಮೊದಲಿನಿಂದಲೂ ಹೇಳುತ್ತಿದ್ದಾರೆ. ಎಲ್ಲಾ ರಾಜಕೀಯ ಪಕ್ಷದವರು ಎಲ್ಲರೂ ಹೇಳಿ ಆಯಿತು. ಆದರೆ 20 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಿಕ್ಕೆ ನಾನು MLA ಆದಂತಹ 4 ವರ್ಷದ ಅವಧಿಯಲ್ಲಿ ಆಗಲಿಲ್ಲವೆಂದರೆ ನಾನೂ ನಾಚಿಕೆಪಟ್ಟುಕೊಳ್ಳಬೇಕು, ಸಂಬಂಧಪಟ್ಟಂಥ ವ್ಯವಸ್ಥೆಯೂ ನಾಚಿಕೆಪಟ್ಟುಕೊಳ್ಳಬೇಕು. ಇಂತಹ ಪರಿಸ್ಥಿತಿಯಲ್ಲಿ ಇರುವುದರಿಂದ ಇವೆಲ್ಲಾ ಕಾರ್ಯಕ್ರಮಗಳನ್ನು ಅದಷ್ಟು ಬೇಗ ಸನ್ಮಾನ್ಯ ಸಚಿವರು ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಡಾಂಡೇಲಿ ಮತ್ತು

ಜೋಯಿಡಾವನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸಲಿಕ್ಕೆ ಬಹಳಷ್ಟು ಅವಕಾಶವಿದೆ. ಏಕೆಂದರೆ ದಾಂಡೇಲಿಯವರಿಗೆ ರೈಲ್ವೆ ಲೈನ್ ಬಂದಿದೆ. ರೈಲನ್ನು ದಾಂಡೇಲಿಯವರೆಗೂ ತೆಗೆದುಕೊಂಡು ಬರಬಹುದು. ಆದರೆ ಮಾನ್ಯ ಉದಾಸಿಯವರು main ರಸ್ತೆಗಳನ್ನು ಏನು ಮಾಡಿದ್ದಾರೆ. ಅದು ಹುಬ್ಬಳ್ಳಿಯಿಂದ ದಾಂಡೇಲಿಗೆ ಬರುವುದು ಇರಲಿ ಅಥವಾ ದಾಂಡೇಲಿಯಿಂದ ಗೋವಾಕ್ಕೆ ಹೋಗುವುದು ಇರಲಿ ಕೆಲವೊಂದು ರಸ್ತೆಗಳನ್ನು ಮಾಡಿದ್ದೀರಿ. ದಾಂಡೇಲಿ ಮತ್ತು ಜೋಯಿಡಾದ ಜನರನ್ನು ಸೇರಿಸಿಕೊಂಡು ಯುವಕರನ್ನು ಸೇರಿಸಿಕೊಂಡು eco tourism ಮೂಲಕ rafting ಮೂಲಕ ಮಾಡಬಹುದು. ಏಕೆಂದರೆ ಅಲ್ಲಿ ಕಾಳಿ ನದಿ ಹರಿಯುತ್ತದೆ. ಬೇಕಾದಷ್ಟು resorts ಇವೆ, ಇವತ್ತು ದುರ್ದೈವದ ಸಂಗತಿ ಏನೆಂದರೆ ಮಾನ್ಯ ಅರಣ್ಯ ಸಚಿವರು ಇದ್ದಾರೆ. Jungle lodges ಎಂದು ಏನು ಮಾಡಿದ್ದಾರೆ. ಏಕೆ ಆ ರೀತಿ ಸರ್ಕಾರದವರು ಮಾಡಿದ್ದಾರೋ ನನಗೆ ಗೊತ್ತಿಲ್ಲ. ಈ Jungle Lodges ಮಾಡಿರುವ ಉದ್ದೇಶ ನಾನು ತಿಳಿದುಕೊಂಡಿದ್ದು ಏನೆಂದರೆ eco tourism ಗೆ support ಆಗುವ ರೀತಿ ಸ್ಥಳೀಯರನ್ನು ತೆಗೆದುಕೊಂಡು ಅಲ್ಲಿ ಅಭಿವೃದ್ಧಿಪಡಿಸಬೇಕೆಂದು ಇದೆ. Jungle lodges ಇವತ್ತು ಒಂದು ವ್ಯಾಪಾರದ ರೀತಿ ಆಗಿದೆ. Jungle lodges ಆದಾಗಿನಿಂದ ಸರ್ಕಾರಕ್ಕೆ ಎಷ್ಟು ಆದಾಯ ಬಂದಿದೆ ಎನ್ನುವುದು ತೆಗೆದು ನೋಡಿದರೆ ಗೊತ್ತಾಗುತ್ತದೆ. ನಮ್ಮಲ್ಲಿ Rafting, Jungle lodges ಇಷ್ಟು ವರ್ಷದಿಂದ ಮಾಡುತ್ತಿತ್ತು ಒಂದು ರೂಪಾಯಿ ಆದಾಯ ಬಂದಿದೆ ಎನ್ನುವುದು ಇಲ್ಲ. ಇವತ್ತಿನ ದಿನ private ನವರಿಗೆ ಕೊಟ್ಟ ಮೇಲೆ ಲಕ್ಷಗಟ್ಟಲೆ ಆದಾಯ ಎರಡು ವರ್ಷದಲ್ಲಿ ಬಂದಿದೆ. ಇವತ್ತು ಮತ್ತೆ ಅರಣ್ಯ ಇಲಾಖೆಯ ಅಧಿಕಾರಿಗಳು ಸೇರಿಕೊಂಡು, Jungle lodgesನ ಅಧಿಕಾರಿಗಳು ಸೇರಿಕೊಂಡು ಸರ್ಕಾರಕ್ಕೆ ತಪ್ಪು ಮಾಹಿತಿ ಕೊಟ್ಟು rafting ಮತ್ತು eco-tourism ಅನ್ನು ಮತ್ತೆ Jungle lodges ಗೆ ಕೊಟ್ಟು ದುಡ್ಡು ಕಬಳಿಸುವುದಕ್ಕೆ ಅವಕಾಶ ಮಾಡಿಕೊಡುವಂತಹ ವ್ಯವಸ್ಥೆ ಇದೆ. ದಯವಿಟ್ಟು ಅದನ್ನು ನಿಲ್ಲಿಸಬೇಕು. ಅಲ್ಲಿ ಬೇಕಾದಷ್ಟು ಜನ ಯುವಕರು ಇದ್ದಾರೆ. ಬೇಕಾದಷ್ಟು ಜನ resorts ಅನ್ನು ಹಾಕಿಕೊಂಡಿದ್ದಾರೆ. ಬೇಕಾದಷ್ಟು ಜನ home stay ಮಾಡಿಕೊಂಡಿದ್ದಾರೆ. ಅಲ್ಲಿ ಸ್ಥಳೀಯರಿಗೆ ಅವಕಾಶ ಕೊಡುವ ಹಾಗೆ, ಸ್ಥಳೀಯರಿಗೆ ಅದನ್ನು ಕೊಡುವಂತಹ ವ್ಯವಸ್ಥೆಯಾಗಬೇಕೆ. ವಿನಾ jungle lodges ಗೆ ಯಾವಾಗಲೂ ಕೊಡುವುದಕ್ಕೆ ಹೋಗಬಾರದು. ಇದರಿಂದ ಖಂಡಿತವಾಗಿಯೂ ನಮ್ಮ tourism

ಅಭಿವೃದ್ಧಿಯಾಗುವುದಿಲ್ಲ. Central Tourism Act ನಲ್ಲಿ ಸ್ಥಳೀಯರನ್ನು ತೆಗೆದುಕೊಂಡು ನಾವು development ಮಾಡಬೇಕೆಂದು ಇದೆ. ಇಂತಹ ಪರಿಸ್ಥಿತಿಯಲ್ಲಿ ದಾಂಡೇಲಿ ಮತ್ತು ಜೋಯಿಡಾ ಜನತೆಗೆ, ಯುವಕರಿಗೆ ಅವಕಾಶವಾಗುವ ನಿಟ್ಟಿನಲ್ಲಿ Eco-tourism ಅನ್ನು development ಮಾಡುವಂತಹ ಕೆಲಸ ಆಗಬೇಕಾಗಿದೆ.

ಅದೇ ರೀತಿ ಕೃಷಿ ನೀತಿ :- ಬೆಲೆ ಆಧಾರಿತ ಕೃಷಿ ನೀತಿ ತರಬೇಕು. ಏಕೆಂದರೆ, ರೈತರು ಏನು ಬೆಳೆ ಬೆಳೆಯುತ್ತಾರೆ, ಅದಕ್ಕೆ ಬೆಲೆ ಬರುವ ನಿಟ್ಟಿನಲ್ಲಿ ಮತ್ತು ಅವನಿಗೆ ಖಾತ್ರಿ ಇರಬೇಕು. ಯಾವ ರೀತಿ ನಾಗರಿಕ ಸೇವಾ ಖಾತ್ರಿ ಕೊಡುತ್ತೀರಿ. ಒಂದು ರೈತನಿಗೆ ತನ್ನ ಒಂದು ಎಕರೆ ಹೊಲದಲ್ಲಿ ಈ ಬೆಳೆ ಹಾಕಿದರೆ ಇಷ್ಟು ಬರುತ್ತದೆ ಇಲ್ಲ ಸರ್ಕಾರ ಅದಕ್ಕೆ ಬೆಂಬಲಕ್ಕೆ ನಿಲ್ಲುತ್ತದೆ ಎನ್ನುವ ಮಾಹಿತಿ ಆಧಾರದ ಮೇಲೆ ಮಾಡಿದರೆ ಮಾತ್ರ ಇದು ಆಗಲಿಕ್ಕೆ ಸಾಧ್ಯವಿದೆ.

ಅದೇ ರೀತಿ ಶಿಕ್ಷಣ ಕ್ಷೇತ್ರದಲ್ಲಿ ನನ್ನದು ಒಂದು ವಿನಂತಿ ಇದೆ. ಇವತ್ತಿನ ದಿನ ಸರ್ಕಾರ ಸರ್ಕಾರಿ ಶಾಲೆಯ ಮಕ್ಕಳಿಗೆ uniform ಕೊಡುತ್ತದೆ. ಬಿಸಿಯೂಟ ಕೊಡುತ್ತದೆ. ಸೈಕಲ್‌ಗಳನ್ನು ಕೊಡುತ್ತದೆ. ಆದರೆ, ಖಾಸಗಿ ಶಾಲೆಯಲ್ಲಿ ಕಲಿಯುವಂತಹ ಮಕ್ಕಳಿಗೆ ಕೊಡುವುದಿಲ್ಲ. ಅಲ್ಲಿ ಅನುದಾನಕ್ಕೆ ಒಳಪಡಿಸಿ ಆ ಶಿಕ್ಷಕರಿಗೆಲ್ಲಾ ಅನುದಾನವಿದೆ. ಅದೇ ರೀತಿ ಖಾಸಗಿಯಲ್ಲಿ ಏನಿದ್ದಾರೆ, ಅಲ್ಲಿರುವ ಮಕ್ಕಳಿಗೂ ಸೈಕಲ್ ಕೊಡಬೇಕು. ಏಕೆಂದರೆ ಆ ಮಕ್ಕಳು ನಾಳೆ ಕಲಿತರೆ, ಆ ಮಕ್ಕಳು ನಮ್ಮ ಇದೇ ಕರ್ನಾಟಕಕ್ಕೆ ಒಂದು ಸಂಪನ್ಮೂಲವಾಗಿ ಬರುತ್ತಾರೆ ಆ ಮಕ್ಕಳಿಗೆ ಭೇದ-ಭಾವ ಮಾಡಿದರೆ ತಪ್ಪಾಗುತ್ತದೆ. ಖಾಸಗಿ ಶಾಲೆಯಲ್ಲಿ ಕಲಿಯುವಂತಹ ಮಕ್ಕಳಿಗೂ ಸಹ ಶಿಕ್ಷಣದ ದೃಷ್ಟಿಯಿಂದ uniform, ಬಿಸಿಯೂಟ ಸೈಕಲ್‌ಗಳ ವಿತರಣೆ ಸರ್ಕಾರ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅದೇ ರೀತಿ ವಸತಿಗೆ ಸಂಬಂಧಪಟ್ಟ ಹಾಗೆ, ಇವತ್ತಿನ ದಿನ ಬಸವ ಮನೆಗಳನ್ನು ಕೊಟ್ಟಿದ್ದೀರಿ. ಅದರೆ ಬಸವ ಮನೆಗಳನ್ನು selection ಮಾಡುವ ಅಧಿಕಾರ ಏನು ಗ್ರಾಮಪಂಚಾಯಿತಿಗಳಿಗೆ ಕೊಟ್ಟಿದ್ದೀರಿ ಅದರ ಮೇಲೆ ಒಂದು ಓಂಬಡ್ಸಮನ್ ಎಂದು ಏನು ಮಾಡಿದ್ದೀರಿ ಅದು ಇದುವರೆಗೂ ಬರಲಿಲ್ಲ. ಹೀಗಾಗಿ ಹಲವಾರು ರೀತಿಯ ಎಷ್ಟು ಲಕ್ಷ ಮನೆಗಳನ್ನು ಕೊಟ್ಟರೂ ಸಹ ಪ್ರತಿ ವರ್ಷ ಮತ್ತಷ್ಟು ಮನೆಗಳು ಬೇಕು ಎಂದು ಬರುವುದರಿಂದ ಓಂಬಡ್ಸ್‌ಮನಗಳನ್ನು ನೇಮಕ ಮಾಡಿ ಸರಿಯಾದ ರೀತಿಯಲ್ಲಿ ಆ ಯೋಜನೆ ಜನರಿಗೆ ಮುಟ್ಟುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ಈ

ಸಂದರ್ಭದಲ್ಲಿ ಹೇಳಿ, ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಪೋಡಿ ಪ್ರಕರಣ, ಇವತ್ತಿನ ದಿನ ಪೋಡಿ ಪ್ರಕರಣದ ಅವಶ್ಯಕತೆ ಬಹಳಷ್ಟಿದೆ. ಆದರೆ ಅದನ್ನು ಕಂದಾಯ ಇಲಾಖೆ ಸಮರ್ಪಕವಾದ ರೀತಿಯಲ್ಲಿ ಜಾರಿಗೆ ತರುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಸಿಬ್ಬಂದಿ ಕೊರತೆ ಇದೆ. ಎರಡನೆಯದಾಗಿ, ನೆಮ್ಮದಿ ಕೇಂದ್ರಗಳು, ಈ ನೆಮ್ಮದಿ ಕೇಂದ್ರಗಳು ಶಾಸಕರಿಂದ ಹಿಡಿದು ನಮ್ಮ ಎಲ್ಲರ ನೆಮ್ಮದಿಯನ್ನು ಹಾಳು ಮಾಡಿವೆ. ಈ ನೆಮ್ಮದಿ ಕೇಂದ್ರಗಳನ್ನು ಬಂದ್ ಮಾಡಿ ಅಥವಾ ಅದನ್ನು ಸುಧಾರಣೆ ಮಾಡಲಿಕ್ಕೆ ಏನಾದರೂ ವ್ಯವಸ್ಥೆ ಮಾಡಿ. ಪಡಿತರ ವಿತರಣೆಗೆ ಶಾಸಕರಿಗೆ ಅಧ್ಯಕ್ಷತೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ರೇಷನ್‌ಗಳ ಮೇಲೆ monitor ಮಾಡಲಿಕ್ಕೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಇದೆ ಎಂದು ಇಲಾಖೆಯವರು ಹೇಳುತ್ತಾರೆ. ಆದ್ಯಾವುದು ಶಾಸಕರಿಗೆ ಬಂದಿಲ್ಲ. ಅಕ್ರಮ–ಸಕ್ರಮ ಸಮಿತಿಗಳು, ನನ್ನ ಕ್ಷೇತ್ರ ಹಳಿಯಾಳದಲ್ಲಿ 4 ವರ್ಷ ಆಯಿತು. ಇನ್ನೂ ಅಕ್ರಮ–ಸಕ್ರಮ ಸಮಿತಿಗೆ ಒಬ್ಬರೂ ಸದಸ್ಯರನ್ನು ಸರ್ಕಾರ ನೇಮಕ ಮಾಡಿಲ್ಲ. ಯಾವ ರೀತಿಯಿಂದ ಅದನ್ನು ಜನರಿಗೆ ಕೊಡಲು ಸಾಧ್ಯವಾಗುತ್ತದೆ ? ಅದೇ ರೀತಿ ನಮ್ಮ ದಾಂಡೇಲಿಯನ್ನು ತಾಲ್ಲೂಕು place ಮಾಡಬೇಕು. ಅಲ್ಲಿ ವಿಶೇಷಾವಾದಂತಹ ತಹಸೀಲ್ದಾರ್ ಹುದ್ದೆ ಆಗಬೇಕೆಂದು ಹಿಂದಿನ ಸಲ ಮಾನ್ಯ ಕರುಣಾಕರರೆಡ್ಡಿಯವರು. ಇದ್ದಾಗ, ದಾಂಡೇಲಿಯಲ್ಲಿ ವಿಶೇಷ ತಹಶೀಲ್ದಾರರನ್ನು ಒಂದು ವರ್ಷದಲ್ಲಿ ಹಾಕುತ್ತೇವೆ ಎಂದು ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆದರೆ, ದಾಂಡೇಲಿಗೆ ವಿಶೇಷ ತಹಶೀಲ್ದಾರರನ್ನು ಹಾಕುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲವೆಂದು ಇವತ್ತಿನ ದಿನ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದರೆ ಹಿಂದಿನ ಕಂದಾಯ ಸಚಿವರು ನಾವು ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ದಿಸೆಯಲ್ಲಿ ಎಲ್ಲೆಲ್ಲಿ ತಾಲ್ಲೂಕುಗಳನ್ನು declare ಮಾಡಿದ್ದಾರೆ. ಎಲ್ಲೆಲ್ಲಿ ದೊಡ್ಡ ದೊಡ್ಡ ಊರುಗಳಿವೆ ಅಲ್ಲಿ ವಿಶೇಷ ತಹಶೀಲ್ದಾರರ ಹುದ್ದೆ ಹಾಕುವಂತಹ ಕೆಲಸ ಸರ್ಕಾರ ಮಾಡಬೇಕು. ಏಕೆಂದರೆ, ಕಂದಾಯ ಇಲಾಖೆಗೆ ಇವತ್ತಿನ ದಿನ ಅತಿಯಾದ ಕೆಲಸದ ಒತ್ತಡ ಇದೆ. ರೇಷನ್ ಕಾರ್ಡ್, ವಿಧವಾ ವೇತನ, ಎಲ್ಲಾ ವೇತನಗಳು ಪ್ರತಿಯೊಂದು ಕಂದಾಯ ಇಲಾಖೆಗೆ ಬರುವುದರಿಂದ ಆದಷು ಬೇಗ ಅಲ್ಲಿ ವಿಶೇಷ ತಹಶೀಲ್ದಾರರ ಹುದ್ದೆ ಆಗಬೇಕು. ನವ ಜೋಯಿಡಾದ ಡಿಪೋ ಅನ್ನು ಕಾರಣಾಂತರಗಳಿಂದ ಶಿಫ್ಟ್ ಮಾಡಿದ್ದಾರೆ. ಜೋಯಿಡಾವು ಒಂದು ತಾಲ್ಲೂಕು ಕೇಂದ್ರ ಆಗಿರುವುದರಿಂದ ಅಲ್ಲಿ ಒಂದು ಡಿಪೋ ಆಗಬೇಕು ಮತ್ತು ಜೋಯಿಡಾಕ್ಕೆ ಕೋರ್ಟು ಸಹ ಆಗಬೇಕಾಗಿದೆ. ಅದು ಒಂದು ತಾಲ್ಲೂಕು

ಕೇಂದ್ರವಾಗಿದೆ. ಅದನ್ನು ಮಾಡದೆ ಇದ್ದರೆ ಖಂಡಿತವಾಗಿ ಜೋಯಿಡಾ ತಾಲ್ಲೂಕು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಅರಣ್ಯ ಇಲಾಖೆಯ ಸಚಿವರು ಇದ್ದಾರೆ ನಾನು ಅವರಲ್ಲಿ ವಿನಂತಿಯನ್ನು ಮಾಡುತ್ತೇನೆ. ನಮ್ಮ ಕಡೆಯಲ್ಲಿ ಅರಣ್ಯ ಭಾಗ ಜಾಸ್ತಿ ಇದೆ. ಈ Tiger sanctuary ಸರ್ಕಾರಕ್ಕೆ ಬೇಕೋ ಅಥವಾ ಬೇಡವೋ, ನಮಗೆ ಬೇಕೋ ಬೇಡವೋ, ಅದು ಆಮೇಲಿನ ಪ್ರಶ್ನೆ. ಅಲ್ಲಿರುವಂತಹ ಜನರು ಇದ್ದಾರಲ್ಲಾ ಅವರಿಗೆ ನಿಜವಾಗಿಯೂ ಇದು ಅರಣ್ಯರೋದನವಾಗಿದೆ. ಇವತ್ತಿನ ದಿನ ಅಲ್ಲಿಗೆ ಒಬ್ಬರು Ranger ಹೋಗುತ್ತಾರೆ. ಇವತ್ತು ಒಂದು ಸಣ್ಣ ಏಡಿಯನ್ನು ಹಿಡಿದುಕೊಂಡು ಬಂದರೆ ಮೊನ್ನೆ 2,500 ರೂಪಾಯಿಗಳ ದಂಡವನ್ನು ಹಾಕಿದ್ದಾರೆ. ಮೊದಲು ನಾವು ಬದುಕಿದ್ದರೆ ಮಾತ್ರ ನಾವು ನಂತರ ಹುಲಿಯನ್ನು ಹಿಡಿದುಕೊಳ್ಳಬಹುದು. ನಾವು ಬದುಕಲಿಲ್ಲವೆಂದರೆ ಏತಕ್ಕಾಗಿ ಬೇಕು tiger sanctuary ? ಇವತ್ತಿನ ದಿನ 700 ಅರ್ಜಿಗಳು ಪೆಂಡಿಂಗ್ ಇದೆ. ಅಲ್ಲ 70 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಕಳೆದ ಎರಡು ವರ್ಷದಿಂದ ಅವರಿಗೆ ಒಂದು ರೂಪಾಯಿಯನ್ನು ಕೊಡಲಿಲ್ಲ. ಅತಿಕ್ರಮಣ ಮಾಡಿರುವವರನ್ನು ಹೊರಗೆ ಹಾಕುವುದಕ್ಕೆ ಒಂದು ರೂಪಾಯಿಯನ್ನು ಸಹ ಕೊಡಲಿಲ್ಲ. National Park, Tiger Sanctuary, Wild life ಇವೆಲ್ಲಾ ತೆಗೆದುಕೊಂಡು ಬಂದು ನೀವು ಜೋಯಿಡಾ ತಾಲ್ಲೂಕಿನಲ್ಲಿ ಮಾಡಿದ್ದೀರಿ. ನೀವು ಒಂದು ಕೆಲಸವನ್ನು ಮಾಡಿಬಿಡಿ, ಜೋಯಿಡಾ ತಾಲ್ಲೂಕನ್ನು ಬೆಂಗಳೂರಿಗೆ ಹತ್ತಿರ ಶಿಫ್ಟ್ ಮಾಡಿಕೊಟ್ಟು ಬಿಡಿ. ಎಲ್ಲರಿಗೂ ಇಲ್ಲಿ ಮನೆಯನ್ನು ಕೊಡಿ. ಹೊಲಗಳನ್ನು ಕೊಡಿ ನಾವು ಇಲ್ಲಿಗೆ ಬಂದು ಆರಾಮವಾಗಿ ಉಳಿಯತ್ತೇವೆ. ನೀವು ತಾಲ್ಲೂಕಿಗೆ ಲಾಕ್ ಹಾಕಿಬಿಡಿ. ಒಂದು ತಾಲ್ಲೂಕನ್ನು ಕ್ಲೋಸ್ ಮಾಡಿಬಿಡಿ. ಇದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ನಮಗೆ tiger sanctuaryಯ ಅವಶ್ಯಕತೆ ಇಲ್ಲ. ಅಲ್ಲಿ ಯಾವುದೇ ಪರಿಸ್ಥಿತಿಯಲ್ಲಿ ಇದನ್ನು ಮಾಡುವುದಕ್ಕೆ ನಾವು ಬಿಡುವುದಿಲ್ಲ. ಇಲ್ಲಾ ಅಂದರೆ ಅಲ್ಲಿರುವ ಸಮಸ್ಯೆಗಳ ಬಗ್ಗೆ ಸನ್ಮಾನ್ಯ ಸಚಿವರು ಬರಲಿ. ಅಲ್ಲಿ ಒಂದು ಸಾರ್ವಜನಿಕರ ಮೀಟಿಂಗ್‌ಅನ್ನು ಮಾಡಲಿ, ಅಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿಕೊಂಡು ಸಾರ್ವಜನಿಕರ ಒಪ್ಪಿಗೆ ಇದ್ದರೆ ಮಾತ್ರ ಅದನ್ನು ಮಾಡುವಂತಹ ಕೆಲಸವನ್ನು ಮಾಡಲಿ. ಆನೆಗಳು ಮತ್ತು ವನ್ಯಪ್ರಾಣಿಗಳಿಂದ ಎಷ್ಟು ತೊಂದರೆಯಾಗುತ್ತಿದೆ. ಯಾವುದೇ ಬೆಳೆಗಾರರು ಬೆಳೆಯನ್ನು ಬೆಳೆಯುವುದಾಕ್ಕಾಗುತ್ತಿಲ್ಲ. ಅವನ್ನು ವರ್ಷವಿಡೀ ಬೆಳೆದು ತಂದಿಟ್ಟಿರುತ್ತಾರೆ. ಆ ಬೆಳೆ ಬಂದ ತಕ್ಷಣ ಆನೆಗಳ ಹಿಂಡು ಬಂದು ಅದನ್ನು ಹಾಳು ಮಾಡಿಬಿಡುತ್ತದೆ.

ಇವರು 500–1000 ರೂಪಾಯಿ ಪರಿಹಾರ ಎಂದು ಕೊಡುತ್ತಾರೆ. ಅವರು ನೇಣುಹಾಕಿಕೊಳ್ಳುವುದು ಒಂದೇ ಬಾಕಿ. ಆ ತರಹದ ವ್ಯವಸ್ಥೆ ಆಗಬಾರದು. ಏನು ಬೆಳೆ ಬೆಳೆದಿದ್ದಾನೆ ಆವತ್ತಿನ ದರ ಏನಿದೆ ಆ ದರದ ಆಧಾರದ ಮೇಲೆ ಅವನಿಗೆ ಪರಿಹಾರ ಕೊಡುವಂತಹ ಕೆಲಸ ಆಗಬೇಕಾಗಿದೆ. ಮೊನ್ನೆ ದಿನ ಜೋಯಿಡಾದಲ್ಲಿ ಒಂದು ಆನೆ ಬಂತು ಲೈಟ್ ಕಂಬವನ್ನು ಬೀಳಿಸಿ. ಆದು electricity ಹೊಡೆದುಕೊಂಡು ಸತ್ತಿತ್ತು. ಅರಣ್ಯ ಇಲಾಖೆಯವರು ಕೇಸ್ ಅನ್ನು ಆ ರೈತನ ಮೆಲೆ ಹಾಕಿದರು. ಆ ರೈತ ಇನ್ನೂ ಕೋರ್ಟಿಗೆ ಓಡಾಡುತ್ತಿದ್ದಾನೆ. ಅವನಿಗೆ ಏನು ಸಂಬಂಧವೇ ಇಲ್ಲ. ಈ ರೀತಿಯಾದಂತಹ ವ್ಯವಸ್ಥೆಯ ಅರಣ್ಯ ಇಲಾಖೆಯಿಂದ ಆಗುತ್ತಿದೆ. ಅರಣ್ಯ ಇಲಾಖೆ ಬೇಕೆಂದು ನಾನು ಒಪ್ಪಿಕೊಳ್ಳುತ್ತೇನೆ. ಅವರು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕು. ಅರಣ್ಯ ಇಲಾಖೆಯವರಾದ DFO, ACF, Conservator, Ranger ಗಳು ಅವರೆಲ್ಲರೂ ಪಾಕಿಸ್ತಾನದವರಾಗಿದ್ದಾರೆ? ಅವರಿಗೆ ನಮ್ಮ ದೇಶದ ಸಂಬಂಧವಿಲ್ಲ? ಇಲ್ಲಿ ಶಾಸಕರು ಸಂಬಂಧವಿಲ್ಲ. ಇಲ್ಲಿ ಮಿನಿಸ್ಟರ್ ಸಹ ಸಂಬಂಧವಿಲ್ಲ, ಜನಪ್ರತಿನಿಧಿಗಳ ಸಂಬಂಧವಿಲ್ಲ. ಅವರು ಹೇಳಿದ್ದೇ ರಾಜ್ಯ. ಅವರು ಹೇಳುವುದೇ ಕಾಯಿದೆಯಾಗಿದೆ. ಅವರನ್ನು ಹೇಳುವವರು ಮತ್ತು ಕೇಳುವವರು ಯಾರೂ ಇಲ್ಲ. ಅವರಿಗೆ ಬೇಕಾದರೆ ಅಲ್ಲಿ ಒಂದು ಮನೆಯನ್ನು ಕಟ್ಟಿಕೊಳ್ಳುತ್ತಾರೆ. ಅದಕ್ಕೆ ಬೇಕಾದ ಹಾಗೆ ರಸ್ತೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಅದಕ್ಕೆ ಬೇಕಾದ ಹಾಗೆ ಗಿಡವನ್ನು ಕಡಿಯುತ್ತಾರೆ. ಅವರು ಬೇಕಾದ ಹಾಗೆ ಮಾಡಿಕೊಳ್ಳುತ್ತಾರೆ. ಆದರೆ ಸಾರ್ವಜನಿಕರಿಗೆ ಬೇಕಾದಾಗ ಒಂದಕ್ಕೂ ಅನುಮತಿಯನ್ನು ಕೊಡುವುದಿಲ್ಲ. ಈ ದಿಸೆಯಲ್ಲಿ ಸನ್ಮಾನ್ಯ ಅರಣ್ಯ ಸಚಿವರು ಜೋಯಿಡಾ ತಾಲ್ಲೂಕಿಗೆ ಬಂದು ಸಾರ್ವಜನಿಕರ ಮೀಟಿಂಗ್ ಮಾಡಿ ಅಲ್ಲಿರುವವರ ಸಮಸ್ಯೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು. ಈ ದೃಷ್ಟಿಯ ಬಗ್ಗೆ ವಿಚಾರವನ್ನು ಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಕಾರಜೋಳರವರಿಗೂ ಹೇಳುತ್ತೇನೆ. ಅವರಲ್ಲಿ ನನ್ನ ಒಂದು ವಿನಂತಿ ಇದೆ. ಈ ಉಳವಿ ಚೆನ್ನಬಸವಣನ ಜಾತ್ರೆ ಏನು ಇದೆ. ಯಾವ ರೀತಿಯಾಗಿ ಕೂಡಲ ಸಂಗಮದಲ್ಲಿ ಎಷ್ಟು ಮುಖ್ಯವಾಗಿದೆಯೋ ಅದಕ್ಕಿಂತ ಮುಖ್ಯವಾದಂತಹ ಪ್ಲೇಸ್ ಈ ಚೆನ್ನಬಸವಣ್ಣ ಜಾತ್ರೆ, ಅಲ್ಲಿ ನಾವು ಶರಣರ ಸಾಹಿತ್ಯವನ್ನು ಅಭಿವೃದ್ಧಿಪಡಿಸಬೇಕಾಗಿದೆ. ಅಲ್ಲಿ ಉಳವಿ ಜಾತ್ರೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖಾಂತರ ಗುರುತಿಸಿ ಮುಂದಿನ ದಿನಗಳಲ್ಲಿ ಅದರ ವೈಭವವನ್ನು ಇಡೀ ಕರ್ನಾಟಕ ರಾಜ್ಯಕ್ಕೆ ಕೊಡಬೇಕಾಗುತ್ತದೆ. ಇಲಾಖೆಯ ಮೂಲಕ ಜಾತ್ರಾ ಉತ್ಸವವನ್ನು ಉಳವಿ

ಪ್ರದೇಶವನ್ನು ಗುರುತಿಸಿ ಸಹಾಯ ಮಾಡಿಕೊಡಬೇಕೆಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ಬಿಪಿಎಲ್ ಕಾರ್ಡಿನ ಬಗ್ಗೆ ಹೇಳಿದ್ದಾರೆ. ಇದು ಬಹಳ ಮುಖ್ಯವಾದುದು. ಏಕೆಂದರೆ ಭಾಗ್ಯಲಕ್ಷ್ಮಿ ಸ್ಕೀಮ್ ಇವತ್ತು ಕ್ಲೋಸ್ ಆಗುತ್ತಿದೆ. ಈಗಾಗಲೇ 6 ತಿಂಗಳು ಒಂದು ವರ್ಷಗಳು ಆಗಿದೆ. ಅವರ ಹತ್ತಿರ ಬಿಪಿಎಲ್ ಕಾರ್ಡುಗಳು ಇಲ್ಲ. Income Certificate ಗಳ ಮೇಲೆ ಭಾಗ್ಯಲಕ್ಷ್ಮಿ ಸ್ಕೀಮ್‌ಗಳನ್ನು ಕೊಡುತ್ತಿಲ್ಲ. ವಾಜಪೇಯಿ ಆರೋಗ್ಯಶ್ರೀ ಗೆ ಬಿಪಿಎಲ್ ಕಾರ್ಡ್ ಬೇಕು. ಇವತ್ತಿನ ದಿನ ಪ್ರತಿಯೊಂದಕ್ಕೂ ಬಿಪಿಎಲ್ ಕಾರ್ಡ್ ಬೇಕು. ಬಿಪಿಎಲ್ ಕಾರ್ಡಿನ ಮಾನದಂಡವನ್ನು ರದ್ದು ಪಡಿಸಿ ಉತ್ಪನ್ನ ಸರ್ಟಿಫಿಕೇಟ್ Income certificate ಮೇಲೆ ಕೊಡುವಂತೆ ಮಾಡಿ. ಇಲ್ಲವೆಂದರೆ ತಾತ್ಕಾಲಿಕವಾಗಿ ಆ ಸ್ಕೀಮ್‌ಗೆ ಏನೋ ಬೇಕೋ ಅದರ ಬಗ್ಗೆ ತಹಶೀಲ್ದಾರ್‌ರವರಿಗೆ direction ಕೊಟ್ಟು, ಆ ಸ್ಕೀಮ್‌ನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನೀವು ಬಜೆಟ್‌ನಲ್ಲಿ ಎಲ್ಲದಕ್ಕೂ ದುಡ್ಡು ಇಡುತ್ತೀರಿ. ಭಾಗ್ಯಲಕ್ಷ್ಮಿಗೆ ದುಡ್ಡು ಅದಕ್ಕೆ ದುಡ್ಡು, ಇದಕ್ಕೆ ದುಡ್ಡು ಅದರ ಉಪಯೋಗವೆ ಯಾರಿಗೂ ಆಗುವುದಿಲ್ಲ. ಏಕೆಂದರೆ ರೇಷನ್ ಕಾರ್ಡ್‌ಗಳೇ ಅವರ ಹತ್ತಿರ ಇಲ್ಲ. ಹೀಗಾಗಿ ಆದಷ್ಟು ಬೇಗನೆ ಸರ್ಕಾರ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಈ ಸಲದ ನಮ್ಮ ಬಜೆಟ್‌ನಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಅದರಲ್ಲಿಯೂ ಮುಖ್ಯವಾಗಿ ನನ್ನ ಕ್ಷೇತ್ರದ ಹಳಿಯಾಳ-ಜೋಯಿಡಾ ತಾಲ್ಲೂಕಿಗೆ ಯಾವ ಒಂದು ಉಪಯೋಗವಾಗಲಿಲ್ಲ. ಏಕೆಂದರೆ ನಾನೇ ನನ್ನ ಕ್ಷೇತ್ರದಲ್ಲಿ ಎರಡು ಸುತ್ತು ಅಂದರೆ 300-300 ಕಿ.ಮೀ. ನಷ್ಟು ಪಾದಯಾತ್ರೆ ಮಾಡಿದ್ದೇನೆ. ಒಂದು ಸಲ 300 ಕಿ.ಮೀ. ಪಾದಯಾತ್ರೆಯನ್ನು ಮಾಡಿ ಖಾಲಿ ನಿರಾಶ್ರಿತರ ಹೋರಾಟಕ್ಕಾಗಿ ಹೋರಾಟವನ್ನು ಮಾಡಿ ಇದನ್ನು ನಾನು ಸರ್ಕಾರದ ಗಮನಕ್ಕೂ ಕೂಡ ತಂದೆ. ಅವರು ಒಂದು ಮೀಟಿಂಗ್ ಅನ್ನು ಮಾಡಿದರು. ಅದರ ಉಪಯೋಗ ಏನೂ ಆಗಲಿಲ್ಲ. ಅದು ಈ ಬಜೆಟ್‌ನಲ್ಲಿ ಬರಲಿಲ್ಲ. ಇನ್ನು ಎರಡನೇಯದಾಗಿ ಕಾಳಿ ನದಿಯಿಂದ ಶಾಶ್ವತವಾಗಿ ಹಳಿಯಾಳ ತಾಲ್ಲೂಕಿಗೆ ಕುಡಿಯುವ ನೀರು ಮತ್ತು ನೀರಾವರಿಗಾಗಿ ಸುಮಾರು 200 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಸಿದ್ದಪಡಿಸಿದ್ದೇವೆ. ಈ ಬಗ್ಗೆ ಸನ್ಮಾನ್ಯ ಜಲಸಂಪನ್ಮೂಲ ಸಚಿವರು ಆದೇಶ ಮಾಡಿ ಅದು ಈಗಾಗಲೇ ಸರ್ಕಾರಕ್ಕೆ ಬಂದಿದೆ. ಅದು ಈ ಬಜೆಟ್‌ನಲ್ಲಿ ಬರಬಹುದು ಎಂದು ಇತ್ತು. ಅದು ಸಹ ಬರಲಿಲ್ಲ. ಹಾಗಾಗಿ ಸರ್ಕಾರ ಈ Supplementary Estimateನಲ್ಲಿ ಹಾಕಿಕೊಂಡು ಅಥವಾ ನೀರಾವರಿ ಇಲಾಖೆಗೆ ಆದೇಶವನ್ನು ಕೊಟ್ಟು ಈ ಯೋಜನೆಯನ್ನು ಈ

ಬಜೆಟ್‌ನಲ್ಲಿ ಅಳವಡಿಸಿಕೊಂಡು ಮಾಡಿಕೊಡಬೇಕೆಂದು ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇವತ್ತಿನ ಈ ಸಂದರ್ಭದಲ್ಲಿ ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಹಾಗೂ ಸದಸ್ಯರುಗಳಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

7. ಪ್ರಕಟಣೆ :

ಅಧ್ಯಕ್ಷರು :– ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿದಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಯ ನಿಯಮ 118 ರ ಮೇರೆಗ 2012ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ವಿಧಾನ ಪರಿಷತ್ತು ದಿನಾಂಕ 28–3–2012ರಂದು ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಅಧ್ಯಕ್ಷರು :– ಈಗ ಶಾಸನ ಮಂಡನೆ, ಕರ್ನಾಟಕ ವಿಧಾನ ಮಂಡಲದ ವೇತನಗಳು ನಿವೃತ್ತಿ ವೇತನ ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ 2012.

8. ಶಾಸನ ರಚನೆ :

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

1) ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು, ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ 2012.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು) :– ಮಾನ್ಯ ಅಧ್ಯಕ್ಷರೆ 2012ನೇ ಸಾಲಿನ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು :– ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. 2012ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನ, ನಿವೃತ್ತಿ ವೇತನ ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು.